(ಗೊಂದಲ)

ಶ್ರೀ ಸಿ.ಟಿ. ರವಿ:- ನಿಮ್ಮ ಮನಸ್ಸು, ನೀವು ಇಂಥದ್ದು ಮಾಡಬೇಕೆಂದು ಬಂದಿದ್ದೆಲ್ಲ ಆಗುವುದಿಲ್ಲವೇ? ಆದರೂ ಅವರು ಏಕೆ ಮಾತನಾಡಬೇಕು?

ಉಪಾಧ್ಯಕ್ಷರು:- ಮುಂದುವರಿಸಿ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ನಮಗೆ ಮಾತನಾಡುವುದಕ್ಕೇ ಅವಕಾಶ ಕೊಟ್ಟಿಲ್ಲ ವಿಧಾನಸೌಧದಲ್ಲಿ.

(ಗೊಂದಲ)

ಶ್ರೀ ವಿಜಯಾನಂದ ಕಾಶಪ್ಪನವರ್:- ಇಲ್ಲಿ ಅವಕಾಶ ಕೊಟ್ಟಿಲ್ಲ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ವಿಧಾನಸೌಧದಲ್ಲಿ ಮಾತನಾಡುವುದಕ್ಕೂ ಅವಕಾಶ ಕೊಟ್ಟಿಲ್ಲ.

5. ವಿತ್ತೀಯ ಕಾರ್ಯಕಲಾಪಗಳು.

2014-15ನೇ ಸಾಲಿನ ಲೋಕೋಪಯೋಗಿ ಇಲಾಖೆ ಮತ್ತು ಜಲಸಂಪನ್ಮೂಲ ಇಲಾಖೆ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಮೇಲೆ ಚರ್ಚೆಯನ್ನು ಪ್ರಾರಂಭಿಸಿದ ವಿರೋಧ ಪಕ್ಷದ ನಾಯಕರಾದಂಥ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರೂ ಸೇರಿ ಸುಮಾರು 30ಕ್ಕೂ ಹೆಚ್ಚು ಮಾನ್ಯ ಸದಸ್ಯರು ಲೋಕೋಪಯೋಗಿ ಇಲಾಖೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಬೆಳಕನ್ನು ಚೆಲ್ಲಿದ್ದಾರೆ. ಶೆಟ್ಟರ್‌ರವರು ಲೋಕೋಪಯೋಗಿ ಇಲಾಖೆಯ ಮತ್ತು ಲೋಕೋಪಯೋಗಿ ಪದದ ಅರ್ಥವನ್ನು ವ್ಯಾಖ್ಯಾನಿಸಿದ್ದಾರೆ. ಆ ಮಾರ್ಗದಲ್ಲೇ ಮಾತನಾಡಿದಂಥ ಎಲ್ಲ ಸದಸ್ಯರೂ ಕೂಡ ಅವರ ಮಾತಿನ

ಧಾಟಿಯಲ್ಲೇ ಈ ಮನೆಗೆ ಬೆಳಕು ಚೆಲ್ಲಿದ್ದಾರೆ. ಅಮೆರಿಕಾದ ಅಧ್ಯಕ್ಷರಾಗಿದ್ದಂಥ ಜಾನ್ ಎಫ್. ಕೆನಡಿಯವರು ಸಂಪತ್ತು ರಸ್ತೆಯನ್ನು ನಿರ್ಮಾಣ ಮಾಡುವುದಿಲ್ಲ, ಆದರೆ, ರಸ್ತೆ ಸಂಪತ್ತನ್ನು ನಿರ್ಮಾಣ ಮಾಡುತ್ತದೆಂಬ proverb ಅನ್ನು ಹೇಳಿದ್ದಾರೆ. ಅಂದರೆ ರಸ್ತೆ ಎಷ್ಟು ಪ್ರಾಮುಖ್ಯವಾಗಿದೆ ಎನ್ನುವಂಥದ್ದನ್ನು ಬಹಳ ದಶಕಗಳ ಹಿಂದೆಯೇ ಹಿರಿಯರು ಮತ್ತು ಮುತ್ಸದ್ದಿಗಳು ಅದನ್ನು ಅರ್ಥ ಮಾಡಿಕೊಂಡು, ಆ ರೀತಿಯಲ್ಲಿ ಪ್ರಪಂಚದ ಸಂಪರ್ಕ ವ್ಯವಸ್ಥೆ ಆ ರೀತಿಯಾಗಬೇಕೆನ್ನುವಂಥ ಅಭಿಪ್ರಾಯವನ್ನು ಹೊಂದಿದ್ದು, ಆ ನಿಟ್ಟಿನಲ್ಲಿ ಕೆಲಸ ಆಗಬೇಕೆನ್ನುವ ಉದ್ದೇಶ ಇಟ್ಟುಕೊಂಡು ಆ ಮಾತನ್ನು ಹೇಳಿದ್ದಾರೆ. ಅದಕ್ಕೆ ಪೂರಕವಾಗಿಯೇ 2ನೇ ಮಹಾಯುದ್ಧದ ಸಮಯದಲ್ಲಿ ಕ್ಯಾಲಿಫೋರ್ನಿಯಾದಲ್ಲಿ ರಸ್ತೆಯ ನಿರ್ಮಾಣ ಯಾವ ರಿತಿ ಇರಬೇಕೆನ್ನುವಂಥದ್ದನ್ನು California Bearing Ratio (CBR) ಎಂದು 1883ನೇ ಇಸವಿಯಲ್ಲೇ ಇಡೀ ಪ್ರಪಂಚಕ್ಕೆ during Second world war, ಅವರು ತಿಳಿಸಿದ್ದಾರೆ. ಆಮೇಲೆ, ನಮ್ಮ ರಸ್ತೆಗಳ ನಿರ್ವಹಣೆ, ಸಂಪನ್ಮೂಲದ ಕ್ರೋಢೀಕರಣ, ಅದರ ದುರಸ್ತಿ, maintenance ಯಾವ ರೀತಿ ಮಾಡಬೇಕೆಂದು ಸುಮಾರು 70–73 ವರ್ಷಗಳ ಹಿಂದೆ Indian Road Congressನ ಸಭೆಯಲ್ಲಿ ತಜ್ಞ 13 ಜನ ಖ್ಯಾತ Engineer ಗಳು ಇಡೀ ರಾಷ್ಟ್ರದಲ್ಲಿ ಸೇರಿ ಚರ್ಚೆ ಮಾಡಿ ಒಂದು ವಿನ್ಯಾಸವನ್ನು, guidelines ಅನ್ನು ಕೊಟ್ಟಿದ್ದಾರೆ. ಈ ಇತಿಹಾಸದ ಹಿನ್ನೆಲೆಯಲ್ಲಿ ನಮ್ಮ ರಸ್ತೆಗಳ ರಚನೆಯಾದರೆ, ಅದಕ್ಕೆ ಪೂರಕವಾದಂಥ ಹಣಕಾಸನ್ನು ಒದಗಿಸಿಕೊಟ್ಟರೆ, ಖಂಡಿತವಾಗಿ ನಾವು ಬಯಸಿದಂಥ ರಸ್ತೆಗಳ ನಿರ್ಮಾಣ ಮಾಡಿ, ಸಂಪರ್ಕ ಸಾಧನೆಯನ್ನು ಉತ್ತಮ ಗುಣಮಟ್ಟದಿಂದ ಮಾಡಲಿಕ್ಕೆ ಸಾಧ್ಯವಿದೆ. ಅದನ್ನು ಮಾಡಬೇಕೆನ್ನುವಂಥದ್ದನ್ನೇ ಯಾರ್‍ಯಾರು ಪ್ರಗತಿಯನ್ನು ಬಯಸುತ್ತಿದ್ದೇವೆ, ಯಾರು ನಮ್ಮ ಅಭಿವೃದ್ಧಿಯನ್ನು ಬಯಸುತ್ತಿದ್ದೇವೆ. ಆರ್ಥಿಕ ಚಟುವಟಿಕೆಗಳನ್ನು ಬಯಸುತ್ತಿದ್ದೇವೆ ಮತ್ತು ಶೈಕ್ಷಣಿಕ ಸಂಪರ್ಕ ಮತ್ತು ಸೌಹಾರ್ದ ಸಮ್ಮಿಲನವನ್ನು ಬಯಸುತ್ತಿದ್ದೇವೆ, ಶಿಕ್ಷಣದ ವ್ಯಾಪಕವಾದಂಥ ಪ್ರವಾಸಗಳನ್ನು ಬಯಸುತ್ತೇವೆ, ಅವೆಲ್ಲಕ್ಕೂ ಕೂಡ ಈ ರಸ್ತೆ ಸಂಪರ್ಕ ಅತ್ಯಂತ ಪ್ರಮುಖವಾದ ಪಾತ್ರವನ್ನು ನಿರ್ವಹಣೆ

ಮಾಡುತ್ತದೆ. ಯಾವುದೇ ಒಂದು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಇರಬಹುದು, ಅಥವಾ ಯಾವುದೇ ಒಂದು ಪ್ರದೇಶ ತಮ್ಮ ಆಡಳಿತದಲ್ಲಿ ಅಭಿವೃದ್ಧಿಯಾಗಿದೆ, ಸಾಧನೆ ಮಾಡಿದ್ದೇವೆ ಎಂದು ಹೇಳಿದರೆ ಅದು ರಸ್ತೆಗಳ ನಿರ್ಮಾಣ ಮತ್ತು ಸಂಪರ್ಕ ಸಾಧನೆ ಮಾಡಿದ್ದವೆ ಎಂದು ಹೇಳಿದರೆ ಅದು ರಸ್ತೆಗಳ ನಿರ್ಮಾಣ ಮತ್ತು ಸಂಪರ್ಕ ಸಾಧನೆಗಳ ಮೂಲಕ ತಮ್ಮ ಸಾಧನೆಯ agenda ದಲ್ಲಿ ಮೊದಲನೇ ಸ್ಥಾನವನ್ನು ಪಡದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಆ ಕಾರಣಕ್ಕೆ ನಮ್ಮ ಎಲ್ಲ ಮಾನ್ಯ ಸದಸ್ಯರು ಕೂಡ ರಾಜಕೀಯ ಬೆರೆಸದೆ ಟೀಕೆ ಮಾಡುವುದಕ್ಕೋಸ್ಕರವೇ ತಮ್ಮ ಚರ್ಚೆಯನ್ನು ಬಳಸಿಕೊಳ್ಳದೇ ನಿಜವಾದ ರಸ್ತೆಗಳ ಅಗತ್ಯವಿದೆ, ದಿನನಿತ್ಯ ನಾವು ಜನರ ಸಂಪರ್ಕದಲ್ಲಿ ನಿರಂತರವಾಗಿದ್ದೇವೆ, ನಾವು ಓಡಾಡುವಾಗ, ನಾವು ಜನರನ್ನು ಭೇಟಿಯಾಗುವಾಗ ನಮ್ಮ ರಸ್ತೆ ಸೌಕರ್ಯಗಳು ಮತ್ತು bridgeಗಳು ಸಮರ್ಪಕವಾಗಿ ಇರದೇ ಇದ್ದರೆ ನಿಜವಾಗಿಯೂ ಪ್ರತಿನಿಧಿಗಳಾಗಿ ನಾವು ಟೀಕೆ ಟಿಪ್ಪಣಿಗಳಿಗೆ ಒಳಗಾಗುತ್ತೇವೆ. ಆ ಕಾರಣಕ್ಕೆ ರಸ್ತೆ ನಿರ್ಮಾಣ ಮತ್ತು ನಿರ್ವಹಣೆ ಅತ್ಯಂತ ಪ್ರಮುಖವಾದ ಪಾತ್ರ ವಹಿಸಬೇಕು ಅದಕ್ಕೆ ನೀವು ಹೆಚ್ಚು ಕ್ರಿಯಾಶೀಲರಾಗಿ ಕೆಲಸ ಮಾಡಬೇಕು. ಅದಕ್ಕೆ ನಾವೂ ಕೂಡ ಪ್ರತಿನಿಧಿಗಳಾಗಿ ನಮ್ಮಗಳ ಕ್ಷೇತ್ರದಲ್ಲಿ ಮತ್ತು ರಾಜ್ಯದಲ್ಲಿ ಹೆಮ್ಮೆ ಪಡುವ ರೀತಿಯಲ್ಲಿ ಕೆಲಸ ಮಾಡಿ ಎಂದು ಉತ್ತಮ ಸಲಹೆಗಳನ್ನು ನಮಗೆ, ಸರ್ಕಾರಕ್ಕೆ, ಲೋಕೋಪಯೋಗಿ ಇಲಾಖೆಗೆ ಕೊಟ್ಟಿದ್ದಾರೆ. ಅದಕ್ಕೆ ನಾನು ಅವರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಜಗದೀಶ ಶೆಟ್ಟರ್‌ರವರು, ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕಾಮಗಾರಿ ವಿಳಂಬವಾಗುತ್ತದೆ, tax payer money ಮೇಲೆ ಒತ್ತಡವಾಗುತ್ತದೆ, ಗುಣಮಟ್ಟ ಹಾಳಾಗುತ್ತದೆ ಮತ್ತು 10 ಸಾವಿರ ರಸ್ತೆ ಸಂಪರ್ಕ ಕುಸಿದು ಹೋಗಿ ಮತ್ತೆ tax payer money ಹಾಳಾಗುತ್ತದೆಂದು ಹೇಳಿದ್ದಾರೆ. ವಿಳಂಬ ನೀತಿ ಮತ್ತು ಅಲ್ಲಿರತಕ್ಕಂಥ ನಡೆಯಬಹುದಾದ ಭ್ರಷ್ಟಾಚಾರಗಳು ಇವೆಲ್ಲವೂ ಕೂಡ ಅಭಿವೃದ್ಧಿಗೆ ಮಾರಕವಾಗುತ್ತವೆ. ಭಾರತ ದೇಶದಲ್ಲಿ ಅಥವಾ ಪ್ರಪಂಚದ ಯಾವುದೇ ಭಾಗದಲ್ಲಿ ಜಾತೀಯತೆ ಮತ್ತು ಭ್ರಷ್ಟಾಚಾರ ಖಂಡಿತವಾಗಿ ಅಭಿವೃದ್ಧಿಗೆ

ಮಾರಕವಾದಂಥ ವಿಷಯಗಳು. ಇವನ್ನು ಮೆಟ್ಟಿ ನಿಂತು ಕೆಲಸ ಮಾಡಿ ಸಾಧನೆ, ನಮ್ಮ ಗುರಿಯನ್ನು ಮುಟ್ಟತಕ್ಕಂಥದ್ದು ನಮಗೆ ಅನಿವಾರ್ಯತೆ ಇದೆ. ಅವಶ್ಯಕತೆ ಇದೆ. ಅದನ್ನು ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಅಗತ್ಯವಿದೆ. ಆ ನಿಟ್ಟಿನಲ್ಲಿ ಸಾಗಲಿಕ್ಕೆ ಪ್ರಾಮಾಣಿಕವಾಗಿ ನಮ್ಮ ಸರ್ಕಾರ ಪ್ರಯತ್ನ ಮಾಡುತ್ತದೆಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಜಗದೀಶ್ ಶೆಟ್ಟರ್‌ರವರು ರಸ್ತೆ ಕಾಮಗಾರಿಗಳ ಬಗ್ಗೆ, buildings ಬಗ್ಗೆ, ವಿನ್ಯಾಸದ ಬಗ್ಗೆ, ತಂತ್ರಜ್ಞಾನದ ಬಗ್ಗೆ, guest houseಗಳ ಬಗ್ಗೆ, Green Building concept ಬಗ್ಗೆ, ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ, ರಾಜ್ಯ ಹೆದ್ದಾರಿಗಳ ಬಗ್ಗೆ, MDR ಗಳ ಬಗ್ಗೆ, pothole ತುಂಬುವುದರ ಬಗ್ಗೆ, ಉತ್ತರ ದಕ್ಷಿಣ ಮತ್ತು ಇನ್ನೊಂದು Chief Engineer ಹುದ್ದೆ ಸೃಷ್ಟಿ ಮಾಡುವುದರ ಬಗ್ಗೆ, ಮರಳು ಗಣಿಗಾರಿಕೆಯ ಬಗ್ಗೆ ಹೀಗೆ ಎಲ್ಲಾ ವಿಷಯಗಳ ಬಗ್ಗೆ ಇಡೀ ಸದನ ಕೂಲಂಕಷವಾಗಿ, ವ್ಯಾಪಕವಾಗಿ ಬೆಳಕನ್ನು ಚೆಲ್ಲಿ ಈ ಸದನದ ಮತ್ತು ಸರ್ಕಾರದ ಗಮನವನ್ನು ಸೆಳೆದು, ಸರ್ಕಾರದ ಜವಾಬ್ದಾರಿ ಮತ್ತು ಕರ್ತವ್ಯವನನು ಹೇಗೆ ನಿರ್ವಹಣೆ ಮಾಡಬೇಕೆನ್ನುವುದರ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲವನ್ನು ಗಮನದಲ್ಲಿಟ್ಟುಕೊಂಡು, ಈ ಸಲಹೆಗಳು ಬರುವ ಸಂದರ್ಭದಲ್ಲಿ ನಾನು ಲೋಕೋಪಯೋಗಿ ಇಲಾಖೆಗೆ ಬಂದಂಥ ಸಂದರ್ಭದಲ್ಲಿ ನನಗೆ contractor ಮಾಡಿ ಅಭ್ಯಾಸ ಇಲ್ಲ. LOC ಬಗ್ಗೆ ನನಗೆ ಗೊತ್ತಿಲ್ಲ. ನಾನು 1985ನೇ ಇಸ್ವಿಯಲ್ಲಿ ಈ ಮನೆಯ ಸದಸ್ಯನಾಗಿ ಬಂದು ಇಂದಿಗೆ 30 ವರ್ಷಗಳಾದವು, ಅಲ್ಲಿಂದ ಇಲ್ಲಿಯವರೆಗೆ ನಾನು ಒಬ್ಬರಿಗೂ ಸಹ contract ಕೊಡಿ ಎಂದು ಹೇಳಿಲ್ಲ ಒಬ್ಬರಿಗೂ ಸಹ LOC ಕೊಡಿ ಎಂದು ಹೇಳಿಲ್ಲ. ಆದರೂ ಕಾಮಗಾರಿಗಳು ವಿಳಂಬವಾಗುವುದು ಮತ್ತು ಅದರ ತಾತ್ಸಾರದಿಂದ ರಸ್ತೆ ಹಾಳಾಗುವುದು, ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿ, ನಾನು ಬಂದ ತಕ್ಷಣವೇ ಇವೆಲ್ಲವನ್ನು streamline ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ಲೋಕೋಪಯೋಗಿ ಸಚಿವನಾಗಿ ಬಂದ ಮೇಲೆ ಆರು ತಿಂಗಳು ನಾನು ಮಾತನಾಡಲಿಲ್ಲ. ಅದಕ್ಕೆ ಕೆಲವರು, ಇವರೇನು ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆ? ಹಿಂದೆ ಇವರು Health ಖಾತೆ & RDPR

ಖಾತೆ ನಡೆಸಿದ್ದರು, ಆಗ ಇವರು ಚೆನ್ನಾಗಿ ಮಾಡುತ್ತಿದ್ದರು ಈಗ ಏನು ಮಾಡುತ್ತಿಲ್ಲವಲ್ಲ ಎಂದು ಕೆಲವು ಸ್ನೇಹಿತರು 35 marks ನನಗೆ ಕೊಟ್ಟರು. ಏನೂ ಕೆಲಸ ಮಾಡುತ್ತಿಲ್ಲವಲ್ಲ, ಇವರಿಗೆ ಗೊತ್ತಾಗುತ್ತಿಲ್ಲವೇನು ಎಂದು ನನ್ನ ಕೆಲವು ಒಳ್ಳೆಯ ಸ್ನೇಹಿತರು 35 marks ಕೊಟ್ಟಿದ್ದು ನೋಡಿ, ಸ್ವಲ್ಪ ಚುರುಕಾಗು, ಒಳ್ಳೆಯ ಕೆಲಸ ಮಾಡೆಂದು ರಾಯರ ಕುದುರೆ ಕತ್ತೆ ಆಗಬಾರದು ಎನ್ನುವ ಸಂದೇಶ ಕೊಡುವುದಕ್ಕೆ ಪ್ರಯತ್ನ ಮಾಡಿರಬಹುದು ಎಂದು ನಾನು ತಿಳಿದುಕೊಳ್ಳುತ್ತೇನೆ. ನಿಜವಾಗಿಯೂ ಕೂಡ ನಾನು ಬಂದ ತಕ್ಷಣ ಮಾಡಿದ ಕೆಲಸ, ಕರ್ನಾಟಕ ರಾಜ್ಯದಲ್ಲಿ 76 ಸಾವಿರ ಕಿ.ಮೀ.ಗೂ ಹೆಚ್ಚಿನ ರಸ್ತೆಗಳಿವೆ. ಇದರಲ್ಲಿ MDR 49 ಸಾವಿರ ಕಿ.ಮೀ. 20 ಸಾವಿರ ಕಿ.ಮೀ. State Highways, ಸುಮಾರು 6 ಸಾವಿರ ಕಿ.ಮೀ. National Highways, ಇಷ್ಟೆಲ್ಲಾ ರಸ್ತೆಗಳೇನಿವೆ ಇವುಗಳನ್ನು ಎಲ್ಲೆಲ್ಲಿ ಏನಿದೆ, ಸ್ಥಿತಿಗತಿಗಳು ಏನಾಗಿದೆ, ಯಾವಾಗ ರಿಪೇರಿ ಮಾಡಿದರು, ಎಷ್ಟು ಖರ್ಚಾಯಿತು, ಎನ್ನುವ ಸಂಪೂರ್ಣ ಮಾಹಿತಿ ಇಲ್ಲವೇ ಇಲ್ಲ. ನಮ್ಮ ಕಾರ್ಯಕರ್ತರು ಹೇಳುತ್ತಾರೆ, ಜನಗಳು ಹೇಳುತ್ತಾರೆ, ಇಂಜಿನಿಯರ್ ಹೇಳುತ್ತಿರುತ್ತಾರೆ, ಎಂದು ಕಾಮಗಾರಿಗಳನ್ನು ತೆಗೆದುಕೊಳ್ಳುವುದು ಬೇರೆ. ಕೆಲವರು ಕ್ರಿಯಾಶೀಲರಾಗಿ ಸ್ವತಃ ಹೋಗಿ ನೋಡತಕ್ಕಂಥ MLAಗಳು ಇದು ಬೇಕು ಇದು ಬೇಡ ಎಂದು ಹೇಳುವ ಪರಿಜ್ಞಾನ ಇರುವಂಥವರು ಅದನ್ನು ಮಾಡುತ್ತಾರೆ. ಕೆಲವರು ಈ ತರಹದ ಕೆಲಸ ಮಾಡಿ ಎಂದು list ಮಾಡಿ ಕೊಡುತ್ತಾರೆ. ಕೆಲವರು LOC ಕೊಡುವ ಕೆಲಸ ಮಾಡುತ್ತಾರೆ, ಯಾವಾಗ grant ಬೇಕು, ಯಾವಾಗ release ಮಾಡಿಸತಕ್ಕಂಥ ಪರಿಸ್ಥಿತಿ ನಡೆಯುತ್ತಿತ್ತು. ನಾನು ಬಂದ ಮೇಲೆ ಬೇಕಾಬಿಟ್ಟಿ grant ಕೊಡುವುದನ್ನು ನಿಲ್ಲಿಸಿಬಿಟ್ಟೆ, 4 ಲಕ್ಷ 5 ಲಕ್ಷ peace work ಕೊಡುವುದನ್ನು I stopped totally. ಒಂದನ್ನೂ ಕೊಡಲಿಲ್ಲ. ನಂತರ ರಸ್ತೆಗಳ ಸ್ಥಿತಿಗತಿಗಳೇನಿದೆ ಎಂದು ತಾಲ್ಲೂಕು, ಕ್ಷೇತ್ರವಾರು ಮಾಹಿತಿ ಇಲ್ಲ. ಅದಕ್ಕೆ Road Information System(RIS)ನ್ನು develop ಮಾಡಿದೆವು. ಇದು ಏನೆಂದರೆ, ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ 176 ತಾಲ್ಲೂಕುಗಳಲ್ಲಿ ಹರಡಿರತಕ್ಕಂಥ ಲೋಕೋಪಯೋಗಿ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು, ಎಲ್ಲದರ ಬಗ್ಗೆಯೂ

ಮಾಹಿತಿ ಸಂಗ್ರಹಿಸಬೇಕು. ನಮ್ಮ ಇಲಾಖೆಯಲ್ಲಿ ಇದನ್ನು ಮಾಡಿ website ಗೆ ಹಾಕಿದ್ದೇವೆ. kpwd.gov.in ಎಂದು number ಕೊಟ್ಟು websites ಗೆ ಹಾಕಿದ್ದೇವೆ. Now, anybody can see these roads. Based on this information, development should take place. This is the first in the entire nation. Karnataka is the first state in the entire country which has developd RIS and put into the website. The reason is, I wanted to make it transparent. ಏನೇನು ರಸ್ತೆಗಳಿವೆ, ಯಾವ್ಯಾವ grant ಕೊಡುತ್ತೇವೆ, ಏನೇನು ಕೆಲಸ ಮಾಡಿದ್ದಾರೆ, ಕಾಲಕಾಲಕ್ಕೆ ಅದನ್ನು update ಮಾಡಬೇಕು, ಯಾರ್ಯಾರು ಮಾಡಿದ್ದಾರೆ, ಹೇಗೆ ಮಾಡಿದ್ದಾರೆ, update ಆಗುತ್ತಿರಬೇಕು. Based on that condition of the road, it should be tackled. ದೇಶದಲ್ಲಿ ಮೊದಲನೆಯದಾಗಿ ಕರ್ನಾಟಕ ರಾಜ್ಯ ಈ Road Information System ಅನ್ನು develop ಮಾಡಿರುವುದು. ಅದೇರೀತಿಯಲ್ಲಿ ನಮ್ಮ projectಗಳು ಹೇಗೆ ನಡೆಯುತ್ತಿವೆ ಎಂದು ಯಾರಿಗೂ ಗೊತ್ತಿಲ್ಲ. ಎಷ್ಟೊ ನಡೆಯುತ್ತವೆ ಕೆಲಸ ಆಗಿಲ್ಲ ಬಿಲ್ ಕೊಟ್ಟು ಬಿಟ್ಟಿರುತ್ತಾರೆ, ಕೆಲಸ ಪ್ರಾರಂಭವಾಗದೆ ಬಿಲ್ ಕೊಟ್ಟಿರುತ್ತಾರೆ, ಅದು ಯಾವ ಮಟ್ಟಕ್ಕೆ ಬಂದಿದೆ ಅದು ಏನೂ ನೋಡುವುದಿಲ್ಲ. ಇದಕ್ಕೆ Project Monitoring System (PMS) develop ಮಾಡಿದ್ದೇವೆ. ಯಾವ್ಯಾವ ಹಂತಕ್ಕೆ ಆಗಿದೆ ಅದನ್ನು ನೋಡಿಕೊಂಡು, ಒಬ್ಬರು ನೋಡಿ ಅದನ್ನು ತೆಗೆದುಕೊಂಡು ಅದರ ಮೇಲೆ LOC ಕೊಡುವುದು, development ಮಾಡುವುದು ಆಗಬೇಕು. ಅದಕ್ಕೆ software development ಮಾಡಿದ್ದೇವೆ. ಅಲ್ಲಿ ಯಾರ ಮನೆಯಲ್ಲಿ ಕುಳಿತುಕೊಂಡು ಮಾಡುವುದಿಲ್ಲ. Project report ಆಗುವುದು, estimate ಆಗುವುದು ಪ್ರತಿಯೊಂದು Project Monitoring System ನಲ್ಲಿ ಗೊತ್ತಾಗಬೇಕು. ಈ ತರಹದ ಒಂದು system ಅನ್ನು develop ಮಾಡಿ Road Information System develop ಮಾಡಿದರೆ, ಇಲ್ಲಿ ಏನೇನು ಕೆಲಸ ಇವೆ ಅವನ್ನೆಲ್ಲಾ ಮಾಡುವುದಕ್ಕೆ ನಮಗೆ, ಅನೂಕೂಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ, streamline ಮಾಡಿ ಸುಧಾರಣೆ ಮಾಡಿ ಇದನ್ನು ಸುಸ್ಥಿತಿಯಲ್ಲಿ ತಂದು

ಮಾಡುವುದಕ್ಕೆ ಇವೆಲ್ಲಾ ವೈಜ್ಞಾನಿಕವಾಗಿ ಲಭ್ಯವಿರುವ ಮಾಹಿತಿಗಳನ್ನು software ಗೆ ಹಾಕಿ ಹೆಚ್ಚು ಪಾರದರ್ಶಕವಾಗಿ ಇಲಾಖೆ ಇರಬೇಕೆನ್ನುವ ಉದ್ದೇಶದಿಂದ ಈ ಕೆಲಸ ಮಾಡಿದ್ದೇವೆ. ಇನ್ನೂ ಕೂಡ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಆಗಬೇಕೆಂದು 2011 ನೇ ಇಸ್ವಿಯಲ್ಲಿ, 2001 ನೇ ಇಸ್ವಿಯಿಂದ ನಾವು ಮಾಡಿದಂಥ ಕಾಮಗಾರಿಗಳಿಗೆ ಅವರು ಬಿಲ್‌ಗಳನ್ನು ಕೊಡುವಾಗ ಅದಕ್ಕೆ ಯಾರ್‍ಯಾರಿಗೆ ಬೇಕೋ influence ಇದ್ದವರು ತೆಗೆದುಕೊಂಡು ಹೋಗುತ್ತಿದ್ದರು. ಅದಕ್ಕೆ ನಮ್ಮ ಸರ್ಕಾರ ಬಂದ ತಕ್ಷಣ 18–07–2013 ರಲ್ಲಿ ಒಂದು ಸುತ್ತೋಲೆ ಹಾಕಿದೆವು. ಇನ್ನು ಮುಂದೆ ಆರ್ಥಿಕ ಇಲಾಖೆಯಿಂದ ಹೊರಡಿಸಿರುವ ಮಾರ್ಗಸೂಚಿಯಂತೆ ಬಾಕಿ ಬಿಲ್ಲುಗಳ ಹಣ ಪಾವತಿಗೆ ಕ್ರಮ ವಹಿಸುವಂತೆ ಅಕಸ್ಮಾತಾಗಿ ಉಲ್ಲಂಘಿಸಿರುವುದು ಕಂಡು ಬಂದರೆ ಉಪವಿಭಾಗಾಧಿಕಾರಿಗಳು ಶಿಸ್ತಿನ ಕ್ರಮ ಕೈಗೊಳ್ಳುವಂತೆ ಕಾರ್ಯಪಾಲಿಸುವುದು ಎಂದು ಮಾಡಿದೆವು. LOC ಯನ್ನು ಸೀನಿಯಾರಿಟಿಯ ಮೇಲೆ ರಿಲೀಸ್ ಮಾಡಬೇಕು. ಯಾರೂ ವೇಯ್ಟ್ ಮಾಡಬಾರದು, ಯಾರೂ ಭೇಟಿ ಮಾಡಬಾರದು ಎಂದು ಮಾಡಿದ್ದೇವೆ. ಇದಾದ ಮೇಲೆ tender & estimate ಇನ್ನೊಂದು ಬಹಳ ಪ್ರಮುಖವಾದ ಎರಡು ವಿಭಾಗಗಳು. Estimate ಅವರು ಇಷ್ಟ ಬಂದ ಹಾಗೆ ಮಾಡುತ್ತಿದ್ದರು, ಅವರು ಹೇಗೆ ಬೇಕೋ ಹಾಗೆ ನಡೆದುಕೊಂಡು ಹೊಗುತ್ತಿದ್ದರು. ಅದಕ್ಕೆ ನಾವು, ಒಬ್ಬರೆ estimate ಮಾಡುವ ಬದಲು ಮಾಡಿದಂಥ estimate ಗೆ ಒಂದು committee ಮಾಡಿದೆವು. Iti is called Estimate Committee. ಕಾಮಗಾರಿಗಳಿಗೆ ಒಬ್ಬರೆ ಅಂದಾಜುಗಳನ್ನು ತಯಾರು ಮಾಡುವ ಬದಲು ಒಂದು Estimate Committee ಮಾಡಿದೆವು. 5 ಕೋಟಿ ಮೇಲ್ಪಟ್ಟ ಹೊಸ ಕಾಮಗಾರಿಗಳಿಗೆ ಅನುಮೋದನೆ ಕೊಡಬೇಕಾದರೆ ಈ committee ಯ ಮುಂದೆ ಬರಬೇಕು. ಈ committee ಯಲ್ಲಿ ನಿವೃತ್ತ Chief Engineer ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಮತ್ತು ಅಂದಾಜು ಪರಿಶೀಲನಾ ಸಮಿತಿ (TA & ER Cell) ಮಾಡಿದ್ದೇವೆ. 2 ಕೋಟಿಗಿಂತ ಮೇಲ್ಪಟ್ಟದ್ದು Chief Engineer ಗೆ ಬರತಕ್ಕಂಥದ್ದು. ಇನ್ನೊಂದು committee, Superintendent Engineer ಮತ್ತು

ಇತರೆ ಸಂಬಂಧಪಟ್ಟ ಅಧೀಕ್ಷಕ ಅಭಿಯಂತರರು, ವಲಯ ಅಧೀಕ್ಷಕರು, ಈ ತರಹ ಐದು ಜನರ ಸಮಿತಿ, ಒಂಬತ್ತು ಜನರ ಸಮಿತಿ, ನಾಲ್ಕು ಜನರ ಸಮಿತಿ ಹೀಗೆ ಮೂರು ಮಟ್ಟದಲ್ಲಿ ಸಮಿತಿಗಳನ್ನು ಮಾಡಿದೆ. ಒಬ್ಬರೆ estimate ಮಾಡದೆ ಇವರು ಮಾಡಿರತಕ್ಕಂಥ estimate, ಮಾಡಿರತಕ್ಕಂಥ ಕಾಮಗಾರಿಯ ಉದ್ದ ಅಥವಾ ಅದರ ಸಾಂದ್ರತೆ ನೋಡಿ estimate ಮಾಡಿದ್ದನ್ನು the committee should give its approval. ಇದನ್ನು ಮಾಡಿದೆವು. ಇದಾದ ಮೇಲೆ ಮತ್ತೊಂದು tender ಪ್ರಕ್ರಿಯೆ. Tender ರನ್ನೂ ಒಬ್ಬರೆ ಮಾಡುತ್ತಿದ್ದರು. ಇದರ ಬದಲು ಅದಕ್ಕೆ ಒಂದು Tender Accepting Committee ಮಾಡಿದೆವು. Instead of a single person doing tender, a committee should review the entire tender and give its acceptance. 03–03–2014ರಲ್ಲಿ ಆ ರೀತಿಯಾಗಿ ಒಂದು committee ಮಾಡಿದೆವು. 5 ಕೋಟಿ ರೂಪಾಯಿವರೆಗಿನ Secretary, concerned Chief Engineer of the zone, Internal Finance, Deputy Secretary to Government(C&D) ಇವರನ್ನು ಸೇರಿಸಿ ಮಾಡಿದೆವು. For tender amount above ₹ 10 crore Principal Secretary ಅವರು ನೋಡತಕ್ಕಂಥದ್ದೆಂದು ಮಾಡಿದೆವು. ಈ ರೀತಿಯಲ್ಲಿ ಒಂದು committee ಯನ್ನು ಮಾಡಿದ್ದೇವೆ. ಇವಷ್ಟು ಪ್ರಮುಖವಾಗಿ ಈ ತೀರ್ಮಾನಗಳು ಕರ್ನಾಟಕ ರಾಜ್ಯದ PWD ಯಲ್ಲಿ ಐತಿಹಾಸಿಕವಾದಂಥ ತೀರ್ಮಾನಗಳು to streamline in the beginning itself. ಕಾಮಗಾರಿಗೆ estimate ಮಾಡಿ tender ಮಾಡಿ ಆದಂಥ ಕಾಮಗಾರಿಗಳಿಗೆ ಹಣ ಬಳಸಲಿಕ್ಕೆ ಇರತಕ್ಕಂಥ ಒಂದು ಪ್ರಮುಖವಾದ ತೀರ್ಮಾನಗಳು, ಹಣದ ದುರ್ಬಳಕೆ ಅಥವಾ ಹೆಚ್ಚು ಹಣಗಳಿಸತಕ್ಕಂಥ ಧನದಾಹಿಗಳಿಗೆ ಕಡಿವಾಣ ಹಾಕಲಿಕ್ಕೆ ಪ್ರಮುಖವಾದ ನಿರ್ಧಾರಗಳು.

ಇದರ ಜೊತೆಗೆ ನಮಗೆ ಯಾವ ರೀತಿಯಾದ ಕಾಮಗಾರಿಗಳು ಬೇಕೆಂಬುದಕ್ಕೆ RIS (Road Information System) and PMS (Project Monitoring System) ಕೂಡ ಪಾರದರ್ಶಕವಾದಂಥ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಬಹುತೇಕ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು

ಇನ್ನಿತರ ಮಾನ್ಯ ಸದಸ್ಯರು ಸರ್ಕಾರಕ್ಕೆ ಏನು ಸಲಹೆ ಮಾಡಿದ್ದಾರೆಯೋ ಆ ಪ್ರಕಾರ ಕಾಮಗಾರಿಗಳು ಗುಣಮಟ್ಟದಿಂದ ಇರಬೇಕು ಹಾಗೆಯೇ ಇದರಲ್ಲಿ ಹೆಚ್ಚು ಹಣ ಲೂಟಿ ಆಗಬಾರದೆಂದು ಮತ್ತೆ ಇದಕ್ಕೆ ಕಡಿವಾಣ ಹಾಕುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾವು ಪ್ರಾಮಾಣಿಕವಾಗಿ ಇಂಥ ತೀರ್ಮಾನಗಳನ್ನು ಮಾಡಿದ್ದೇವೆ. ಇಡೀ India ದೇಶದಲ್ಲಿ ನಮ್ಮ ರಾಜ್ಯ RIS ನಲ್ಲಿ first ಆಗಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಅನೇಕ ಯೋಜನೆಗಳನ್ನು ಜಾರಿ ಮಾಡಿದ್ದೇವೆ. ನಮ್ಮ ಸರ್ಕಾರ ಅಥವಾ ಯಾವುದೇ ಸರ್ಕಾರದ ಉದ್ದೇಶ ಏನೆಂದರೆ, ಮುಖ್ಯವಾಗಿ infrastructure ಅನ್ನು develop ಮಾಡಬೇಕು, connectivity ಯನ್ನು establish ಮಾಡಬೇಕೆಂಬುದು ಯಾವುದೇ ಸರ್ಕಾರದ ಉದ್ದೇಶವಾಗಿರುತ್ತದೆ. ಆ ನಿಟ್ಟಿನಲ್ಲಿ ನಾವು ಕೆಲಸ ಮಾಡುವುದಕ್ಕೆ ಕರ್ನಾಟಕ ಸರ್ಕಾರ 2013–14ನೇ ಸಾಲಿನಲ್ಲಿ ಹಣವನ್ನು ಮಂಜೂರು ಮಾಡಿಕೊಟ್ಟಿತು. 2010–11, 2011–12, 2012–13ನೇ ಸಾಲಿನಲ್ಲಿ 37,645 ಕಿ.ಮೀ. ಉದ್ದದ ರಸ್ತೆಯ ಕೆಲಸಗಳನ್ನು tackle ಮಾಡಿದ್ದಾರೆ. 2013–14 ರಲ್ಲಿ ಸುಮಾರು 10,048 ಕಿ.ಮೀ. ಉದ್ದದ ರಸ್ತೆಗಳನ್ನು ನಾವು ಪೂರ್ಣಗೊಳಿಸಿದ್ದೇವೆ. 2013–14ನೇ ಸಾಲಿನ ಬಗ್ಗೆ ತಮಗೆ ಗೊತ್ತಿರಬಹುದು. ಕಳೆದ ಬಜೆಟ್‌ನಲ್ಲಿ ಸುಮಾರು ಅಂದರೆ, 2013–14ನೇ ಸಾಲಿನಲ್ಲಿ 6,620.58 ಕೋಟಿ ರೂಪಾಯಿ ಕೊಟ್ಟಿದ್ದರು. ಇದರಲ್ಲಿ Appendix-E ಎಂದರೆ, Action Plan preparation. ಅಂದರೆ, ಏನೇನು ಕೆಲಸ ಬೇಕಾಗಿದೆಯೋ ಅದಕ್ಕೆ ಒಂದು ಕ್ರಿಯಾ ಯೋಜನೆ ತಯಾರು ಮಾಡುವುದಕ್ಕೆ PWD ಯಲ್ಲಿ Appendix-E ಎಂದು ಕರೆಯುತ್ತೇವೆ. PWD ಇಲಾಖೆ ಇತಿಹಾಸದಲ್ಲಿ Action Plan ತಯಾರು ಮಾಡಿ ಅದಕ್ಕೆ ಟೆಂಡರ್ ಮಾಡಿ work order ಕೊಟ್ಟಿರುವಂಥದು 2013–14 ನೇ ಸಾಲಿನಲ್ಲಿ ನಮ್ಮ ಸರ್ಕಾರ ಬಂದಾಗ ಮಾಡಲಾಯಿತು. This is the first time in the history. 2500 ಕೋಟಿ ರೂಪಾಯಿ Action Plan ಮಾಡಿ ಕೊಟ್ಟಿದ್ದೇವೆ. ಆನಂತರ ಚುನಾವಣೆ ಬಂತು. ಅಲ್ಲಿಯವರೆಗೆ ಯಾವುದು ಟೆಂಡರ್ ಮಾಡಿ ಉಳಿದುಕೊಂಡಿರುವಂಥ ಕೆಲಸಗಳು ಈಗ ಪ್ರಾರಂಭವಾಗಿದೆ. ಇವತ್ತು ಕೇಂದ್ರ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ, ಬೆಳಗಾಂ

ಅಧಿವೇಶನದಲ್ಲಿ ನಮ್ಮ ಮಾನ್ಯ ಸದಸ್ಯರೆಲ್ಲರೂ ಪ್ರಸ್ತಾಪ ಮಾಡಿ ಕೇಂದ್ರದಿಂದ ದುಡ್ಡು ತೆಗೆದುಕೊಂಡು ಬಂದು ರಸ್ತೆ ಮಾಡಿ ಎಂದು ಹೇಳಿದ್ದರು. ಏಕೆಂದರೆ, ನಾವು ಆಗ ತಾನೆ ಬಂದಿದ್ದೆವು ಅವತ್ತು ರಸ್ತೆಗಳ ಸ್ಥಿತಿಗತಿಗಳು ಹಾಳಾಗಿದ್ದವು. ಆದ್ದರಿಂದ, ಕೇಂದ್ರದಿಂದ ಹಣ ತಂದು ಮಾಡಬೇಕೆಂದು ನನಗೆ ಸಲಹೆಗಳನ್ನು ಕೊಟ್ಟಿದ್ದರು. ಏನಾದರು ಮಾಡಿ ನಮ್ಮ ರಸ್ತೆಗಳನ್ನು ಸುಧಾರಣೆ ಮಾಡಬೇಕು ಮತ್ತು ಮಾನ್ಯ ಶಾಸಕರು ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ನಾನು official ಆಗಿ ಸುಮಾರು 10–12 ಸಾರಿ ದೆಹಲಿಗೆ ಭೇಟಿ ನೀಡಿದ್ದೇನೆ. ಆನಂತರ ನಮ್ಮ ರಾಜ್ಯಕ್ಕೆ 1000 ಕೋಟಿ ರೂಪಾಯಿಯನ್ನು CRFನಲ್ಲಿ ಕೊಟ್ಟಿದ್ದಾರೆ. ಇದನ್ನು fuel consumption ಆದಾರದ ಮೇಲೆ ಎಲ್ಲಾ ರಾಜ್ಯ ಸರ್ಕಾರಕ್ಕೆ ಕೊಡತಕ್ಕಂಥ ಹಣ ಇದಾಗಿದೆ. ಈ ಹಣವನ್ನು ಮಂಜೂರು ಮಾಡಿ ಸುಮಾರು 1200 ಕಿ.ಮೀ.ಗಿಂಥ ಹೆಚ್ಚಿನ ರಸ್ತೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಹಿಂದಿನ ಸರ್ಕಾರದ ಕೊನೆಯ ಆರು ವರ್ಷದಲ್ಲಿ ಕಾಮಗಾರಿಗಳನ್ನು ಮಂಜೂರು ಮಾಡಿದ್ದರು. ಹಿಂದಿನ ಯಾವುದೇ ಸರ್ಕಾರ ಮಂಜೂರು ಮಾಡಿದ್ದರೆ ಮುಂದೆ ಬರತಕ್ಕಂತ ಸರ್ಕಾರ ಅದನ್ನು ಮಾಡಬೇಕಾಗಿರುವುದು ಅದರ ಜವಾಬ್ದಾರಿಯಾಗಿರುತ್ತದೆ. Government is a continuous process. ಅವರು ಮಾಡಿರುವುದನ್ನು ನಾವು ಮಾಡುವುದು ಬೇಡ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆ ಕಡೆ ಇರುವವರು ಸಹ ಈ ರೀತಿ ಹೇಳುವುದಕ್ಕೆ ಆಗುವುದಿಲ್ಲ. It is a continuous process. We cannot think like that for any moment. ಹಿಂದಿನ ಸರ್ಕಾರ 2800 ಕೋಟಿ ರೂಪಾಯಿಗಿಂಥ ಹೆಚ್ಚು ಕಾಮಗಾರಿಗಳನ್ನು ಬಿಟ್ಟು ಹೋಗಿದವುಗಳನ್ನು ನಾವು ಪೂರ್ಣಮಾಡಿದ್ದೇವೆ. ಸುಮಾರು 1267 ಕೋಟಿ ರೂಪಾಯಿಗಳಷ್ಟು pending bill ಇತ್ತು. ಮಾರ್ಚ್ 2014ರ ಹೊತ್ತಿಗೆ ಒಂದು ಪೈಸೆ ಇಲ್ಲದಂತೆ ಎಲ್ಲಾ pending bill ಅನ್ನು clear ಮಾಡಿದ್ದೇವೆ. State Highway-1 and State Highway-2 ಅನ್ನು ಸೇರಿಸಿ ಸುಮಾರು 4,500 ಕಿ.ಮೀ.ಗಿಂಥ ಹೆಚ್ಚು ಉದ್ದದ ರಸ್ತೆಯನ್ನು ಮಾಡಲಿಕ್ಕೆ ಸುಮಾರು 1,459 ಕೋಟಿ ರೂಪಾಯಿಗಿಂತ ಹೆಚ್ಚು

ಹಣವನ್ನು ಖರ್ಚು ಮಾಡಿದ್ದೇವೆ. ನಾನು ಅಂಕಿ–ಅಂಶಗಳನ್ನು ನೋಡುತ್ತಿಲ್ಲ. ಈ ಮಾಹಿತಿ ಇದೆ, ಅದನ್ನು ನೋಡಿಕೊಂಡು ಹೇಳುತ್ತಿಲ್ಲ. ಆದ್ದರಿಂದ, ನಾನು ಹೇಳುತ್ತಿರುವುದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಇಷ್ಟು ಹಣವನ್ನು ಖರ್ಚು ಮಾಡಿ ರಾಜ್ಯದ ಹೆದ್ದಾರಿಯ ಸುಮಾರು ನಾಲ್ಕುಮುಕ್ಕಾಲು ಸಾವಿರ ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದೇ ರೀತಿಯಲ್ಲಿ ಎಂಡಿಆರ್ ರಸ್ತೆಗೆ 2500 ಕೋಟಿ ರೂಪಾಯಿ Action Plan ನಲ್ಲಿ maintenance ಮಾಡುವುದಕ್ಕೆ ಎರಡು ಕಡೆ ದುಡ್ಡು ಕೊಟ್ಟಿದ್ದೇವೆ. ದುಡ್ಡನ್ನು ಯಾವರೀತಿಯಾಗಿ ಕೊಡುತ್ತಿದ್ದೇವೆಂದರೆ, ನಾವು ಕೇವಲ pothole ಅಷ್ಟೇ ನೋಡದೆ entire length ಅನ್ನು maintain ಮಾಡಬೇಕು. Based on the requirement by the Engineer himself ಎಷ್ಟು ಡಿಮಾಂಡ್ ಇದೆಯೋ ಅಷ್ಟನ್ನು ಕೊಡುತ್ತೇವೆ. ಈಗ ಯಾವುದೇ ರೀತಿಯ fraud ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, RIS ಮೇಲೆ ಅದನ್ನು ಕೊಡಬೇಕಾಗುತ್ತದೆ. ಅಂದರೆ, RIS ಮೇಲೆ ಅವರು ನಮಗೆ ಹಣ ಬಿಡುಗಡೆ ಮಾಡಿ ಎಂದು ಕೇಳಬೇಕು. ಈ ರೀತಿಯಲ್ಲಿ ನಾವು ಹಣವನ್ನು ಮಂಜೂರು ಮಾಡಿಕೊಡುತ್ತೇವೆ. PWD ನಲ್ಲಿ ಪರಿಷ್ಕೃತ ಮಾಡಬೇಕೆಂದು ಹಾಗೂ Job Chart ಬಗ್ಗೆ ಮಾನ್ಯ ಗೋವಿಂದ ಕಾರ್‌ಜೋಳರವರು ಕೇಳಿದರು. Job Chartನಲ್ಲಿ duties and responsibilities of the Engineer. ಈ ಬಗ್ಗೆ ಇವತ್ತು PWD Code ಅನ್ನು ಪರಿಷ್ಕರಣೆ ಮಾಡಿದ್ದೇವೆ. The duties and responsibilities of the Engineer is been revised and ಅವರ ಜವಾಬ್ದಾರಿ ಏನೇನು ಎಂಬ ಬಗ್ಗೆ ಅದರಲ್ಲಿ ಹೇಳಿದ್ದೇವೆ. ನನ್ನ ಸ್ನೇಹಿತರಾದ ಮಾನ್ಯ ರವಿರವರು ಮೊನ್ನೆ ದಿವಸ ರಾಷ್ಟ್ರೀಯ ಹೆದ್ದಾರಿಯ ಬಗ್ಗೆ ಹೇಳಿದರು. ನಾವು ಕೊಟ್ಟಿರುವ ಮಾಹಿತಿಯಲ್ಲಿ ಒಂದು ತರಹ ಹೇಳಿದ್ದಾರೆ ಈಗ ಅಲ್ಲೊಂದು ತರಹ ಹೇಳುತ್ತಿದ್ದಾರೆ. ಆದ್ದರಿಂದ, ಈ figure ಸರಿ ಇಲ್ಲವೆಂದು ಹೇಳಿದರು. ಮಾನ್ಯ ರವಿಯವರ ವಾದ ಅಕ್ಷರ ಮಟ್ಟಿಗೆ ಸರಿ ಇದೆ. ನಾವು ಹೇಳುವಂಥ figure ಇಲ್ಲಿ ಒಂದು ರೀತಿ ಇದೆ ಎಂದು ಹೇಳಿರುವುದು ಅಕ್ಷರ ಮಟ್ಟಿಗೆ ಸರಿ ಇದೆ. ಏಕೆಂದರೆ, ಇದು print ಗೆ ಮೊದಲೇ ಹೊರಟು ಹೋಗಿತ್ತು. ಇದು

print ಗೆ ಹೋದ ನಂತರ ಮೇ ತಿಂಗಳಲ್ಲಿ ನಮಗೆ National Highway upgrade ಆದ ಪ್ರಯುಕ್ತ ಆ ನಂತರ notification issue ಆಗಿತ್ತು. ಆದ್ದರಿಂದ, ಇದನ್ನು ಅದರಲ್ಲಿ ಸೇರಿಸಿರಲಿಲ್ಲ. ಅದನ್ನು ಸೇರಿಸಿದಾಗ naturally, the State Highway will come down and National Highway will go up. That is the thing. So, this is natural phenomena. ಆದ್ದರಿಂದ, ಮಾನ್ಯ ರವಿರವರು ಹೇಳಿದ್ದು ಸರಿ ಇದೆ. ಏಕೆಂದರೆ ಅದು print ಆಗಿತ್ತು. ಆನಂತರ 28ನೇ ಮೇ 2014 ರಲ್ಲಿ ಕರ್ನಾಟಕದಲ್ಲಿ ಸುಮಾರು 7 ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ final ಆಗಿ notification ಆಗಿದೆ. ಬಹಳ ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿ ಮಾಡಿಕೊಟ್ಟು ನಮ್ಮ ರಾಜ್ಯದ connectivity ಅನ್ನು establish ಮಾಡಿ ಕೊಡಿ, ಇದರಿಂದ ಪ್ರವಾಸೋದ್ಯಮ, ಆರ್ಥಿಕ ಚಟುವಟಿಕೆ, ಕೈಗಾರಿಕೋದ್ಯಮ, ಶೈಕ್ಷಣಿಕ ಮಟ್ಟ ಮತ್ತು ಜನರು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಿ ಸಂಪರ್ಕ, ಸೌಹಾರ್ದತೆ, ಸಂಬಂಧ, ಸ್ನೇಹವನ್ನು ಬೆಳೆಸಿಕೊಳ್ಳುವುದಕ್ಕೆ ಅನುಕೂಲವಾಗುವುದರ ಜೊತೆಗೆ ಒಂದು ಭಾಗದ ಜನ ಜೀವನವನ್ನು ಮತ್ತು ಅವರ ಬದುಕಿನ ಕಾರ್ಯ ಚಟುವಟಿಕೆಗಳನ್ನು ಅಧ್ಯಯನ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ರಸ್ತೆಗಳನ್ನು National Highway ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ final notification ಅನ್ನು issue ಮಾಡಿದ್ದಾರೆ. ಅದಕ್ಕೆ ಪೂರಕವಾಗಿ New Delhi ಯಲ್ಲಿ ದಿ.04.03.2014 ರಲ್ಲಿ notification issue ಆಗಿದೆ. ಹಿಂದೆ ಕೇಂದ್ರದ ಮಂತ್ರಿಯಾಗಿದ್ದ ಸನ್ಮಾನ್ಯ ಆಸ್ಕರ್ ಫರ್ನಾಂಡಿಸ್‌ರವರನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ, it is his sincere effort ನಿಂದ ಇದನ್ನು ಮಾಡಿಕೊಟ್ಟಿದ್ದಾರೆ. Final ಆಗಿ ಅವರು ಮಾಡಿದ್ದಾರೆ ಬೇರೆಯವರು ಮಾಡುವುದಿಲ್ಲವೆಂಬ ಪ್ರಶ್ನೆ ಬರುವುದಿಲ್ಲ. ಒಂದು ಸಾರಿ ಮಾಡಿದ ಮೇಲೆ rest of things would follow up. ನಾವು ಸುಮಾರು ರಸ್ತೆಗಳನ್ನು ಕಳುಹಿಸಿದ್ದೆವು. ಬೇಲೂರಿನ ಮಾನ್ಯ ಕುಮಾರಸ್ವಾಮಿಯವರು ಈಗ ಇಲ್ಲ. ಅವರು ಸಹ ಎರಡು ರಸ್ತೆ ಹೇಳಿದ್ದರು. ಅವರು ಯಾವುದು ಹೇಳಿದ್ದರೆಂದು ನಾನು ಈಗ ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಆ ಮಾಹಿತಿಯನ್ನು ಕಳುಹಿಸಿಕೊಡಿ.

ಡಾ|| ಹೆಚ್.ಸಿ. ಮಹದೇವಪ್ಪ:- ಈ ಮಾಹಿತಿಯನ್ನು ಆ ನಂತರ ಕಳುಹಿಸಿಕೊಡುತ್ತೇನೆ. ತಮಗೆ ಈ ಬಗ್ಗೆ ಹೇಳಬೇಕು. ಏಕೆಂದರೆ, National Highway ಆಗಿ ಉಳಿದ ರಸ್ತೆಗಳನ್ನು ಪರಿಗಣಿಸಬೇಕೆಂದು ಹೇಳಿದ್ದಾರೆ. I have also met Hon'ble Gadkar ji. I have requested to him, he is also in positive mood. ಆ ರೀತಿಯಾಗಿ ಕೆಲಸ ಮಾಡಬೇಕೆಂದು ಇದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್:- Positive mood ಎಂದು ನೀವು ಬಹಳ ಒಳ್ಳೆಯ ಅಂಶವನ್ನು ಹೇಳಿದ್ದೀರಿ. ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ, Nitin Garkari was the P.W.D. Minister of Maharashtra. ಬಹಳ ಒಂದು interesting episode ಅದು. Atal Bihari Vajapeyi asked Nitin Gadkari a very interesting question. Nitin, can there be a flyover between India and Bharath? Nitin Gadkari without battling his eyelid said that, yes it is possible ಎಂದು ಉತ್ತರಿಸಿದರು. ಆಗ ಒಬ್ಬ State Ministerಗೆ ಆ ಒಂದು ಜವಾಬ್ದಾರಿ ಕೊಟ್ಟು, Prime Minister Gram Sadak Yojana emerged. ನನಗೆ ಅದೊಂದು ಬಹಳ interesting episode ಎಂದು ಅನಿಸುತ್ತದೆ. ಆ ರೀತಿ ನಾವು ಹೊಸ ಚಿಂತನೆಗಳನ್ನು ಶುರು ಮಾಡಬೇಕು.

ಡಾ|| ಹೆಚ್.ಸಿ. ಮಹದೇವಪ್ಪ:- Definitely. ಅಟಲ್ ಬಿಹಾರಿ ವಾಜಪೇಯಿಯವರು 1997ರಲ್ಲೇ ಈ ರೀತಿಯ ಯೋಜನೆಯನ್ನು ಹಾಕಿಕೊಂಡು ರಸ್ತೆಗಳ ನಿರ್ಮಾಣವನ್ನು ಮಾಡಿದ್ದಾರೆ. ಅದಕ್ಕೆ ನಮಗೆ ಹೆಮ್ಮೆ ಇದೆ. ಅದನ್ನು ನಾವು appreciate ಮಾಡಲೇಬೇಕು. Subsequently, the Governments have continued those programmes. U.P.A. Government programmeಗಳನ್ನೆಲ್ಲ B.J.P. Government ತೆಗೆದುಹಾಕುವುದಕ್ಕೆ ಆಗುವುದಿಲ್ಲವೋ ಹಾಗೆ. We are all people living in India and we are Indians. Naturally, we have to carry forward.

ಶ್ರೀ ಸಿ.ಟಿ. ರವಿ:– ಮಾನ್ಯ ಪ್ರಧಾನ ಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಸರ್ಕಾರ ನಡೆಸುವುದಕ್ಕೆ ಬಹುಮತ ಬೇಕು, ದೇಶ ನಡೆಸುವುದಕ್ಕೆ ಎಲ್ಲರೂ ಬೇಕು ಎಂದು ಹೇಳಿದ್ದರು. ದೇಶ ನಡೆಸಬೇಕು ಎನ್ನುವ ಚಿಂತನೆ ಇರುವವರಿಗೆ ದೇಶ ನಡೆಸುವ ಯೋಚನೆ ಮಾತ್ರ ಇರುತ್ತದೆ, ರಾಜಕಾರಣದ ಯೋಚನೆ ಇರುವುದಿಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ:– ಖಂಡಿತವಾಗಲೂ ನಾವು ಅದೇ ದಾರಿಯಲ್ಲಿರುವವರು. ಬಾಬಾ ಸಾಹೇಬ್ ಅಂಬೇಡ್ಕರ್ ಏನು ಹೇಳಿದ್ದಾರೆ ಎಂದರೆ, ನಮ್ಮ ಎಲ್ಲ ಸಮಸ್ಯೆಗಳ ಬೀಗದ ಕೈ ಇರುವುದು ರಾಜಕೀಯ ಅಧಿಕಾರದಲ್ಲಿ. ರಾಜಕೀಯ ಅಧಿಕಾರ ಇಲ್ಲದಿದ್ದರೆ ನಮ್ಮ ಮಾತನ್ನು ಯಾರು ಕೇಳುತ್ತಾರೆ? Atal Bihari Vajapeyi did this work because he was in policy making chair. ಆ ಜಾಗದಲ್ಲಿ ಅವರು ಕೂರದೇ ಹೋಗಿದ್ದರೆ, ಜನರು ಅವರನ್ನು ಆಯ್ಕೆ ಮಾಡದೇ ಹೋಗಿದ್ದರೆ, ಒಂದು ಪಾರ್ಟಿಗೆ majority ಬರದೇ ಹೋದರೆ, democracy ಪದ್ಧತಿಯಲ್ಲಿ ಎಲ್ಲ ಪಾರ್ಟಿಗಳೂ ಸೇರಿ majority ಮಾಡಿಕೊಳ್ಳದೇ ಹೋದರೆ, he would not have taken the decision. This work would not have been in operation. So, ultimately, it is democratic in number and with blessing of the people we have to come to the policy making chairನಲ್ಲಿ ಕುಳಿತುಕೊಳ್ಳುವುದು ನನಗೆ ಸಂತೋಷವಾಗುತ್ತದೆ ಎಂದು ಅಂಬೇಡ್ಕರ್‌ರವರು ಹೇಳಿದರು. ಇದು ಎಲ್ಲರಿಗೂ ಗೊತ್ತಿರುವಂಥಾದ್ದೇ. ಇನ್ನೂ ಸುಮಾರು 8761 ಕಿ.ಮೀ. ಉದ್ದದ ರಸ್ತೆಯನ್ನು ಕೊಡಿ ಎಂದು request ಮಾಡಿದ್ದೆವು, ಅದನ್ನು recommend ಮಾಡಿದ್ದೇವೆ. 8761 ಕಿ.ಮೀ. ರಸ್ತೆಯನ್ನು in addition to the roads which are already declared as National Highways. I have also requested Hon'ble Gadkariji. He is in a positive mood. ಎಲ್ಲವನ್ನೂ ಕಳುಹಿಸಿದ್ದೇವೆ. ಹಿಂದೆ ಕಳುಹಿಸಿದ 8761 ಕಿ.ಮೀ. + 1668 ಕಿ.ಮೀ. ಎರಡೂ ಸೇರಿಸಿದರೆ ಸುಮಾರು 10,000 ಕಿ.ಮೀ. ಆಗುತ್ತದೆ. ಅದರಲ್ಲಿ 1,668 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ 2014ರ ಮಾರ್ಚ್ 4ನೇ ತಾರೀಖು

ಆಜ್ಞೆಯನ್ನು ಹೊರಡಿಸಿದ್ದಾರೆ. ಆಸ್ಕರ್ ಫರ್ನಾಂಡಿಸ್‌ರವರು ಅದನ್ನು ಕೊಟ್ಟಿದ್ದಾರೆ. ಕಳೆದ 65 ವರ್ಷಗಳಲ್ಲಿ ಇಷ್ಟು ಪ್ರಮಾಣದಲ್ಲಿ ರಾಜ್ಯ ಹೆದ್ದಾರಿಗಳು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿವರ್ತನೆಯಾಗಿ, ಮೇಲ್ದರ್ಜೆಗೇರಿಸಿರುವುದು ಇದೇ ಮೊದಲು. 40% increase in National Highways for the first time in 65 years. I made 15 official visits to Delhi. Even our Chief Minister personally came for a meeting to request the Union Government to upgrade the State Highways into National Highways. In the process it is being done and rest of the roads, I request all our Hon'ble Members in the opposition camp, after all it is our state development, ಎಲ್ಲರೂ ಜೊತೆಯಲ್ಲಿ ಇದನ್ನು ಪ್ರಯತ್ನ ಮಾಡೋಣ. ಅವರು ಮಾಡುತ್ತಾರೆ ಎನ್ನುವ ನಂಬಿಕೆ ನನಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- 10,000 ಕಿ.ಮೀ.ಗೆ ನೀವು proposal ಕಳುಹಿಸಿದಿರಿ. A meager 1,000 ಕಿ.ಮೀ.ಗೆ ಅವರು approval ಕೊಟ್ಟಿದ್ದಾರೆ. Whereas, earlier when there was a coalition Government, Chandrababu Naidu managed to get the highest advantage in every department. ಮೊದಲು ಏನು ಆಯಿತೋ, ಹೋಯಿತೋ, ಆದದ್ದು ಆಯಿತು. ಈಗ ನೀವೂ ಸಹ (ವಿರೋಧ ಪಕ್ಷದವರು) ಕೇಂದ್ರ ಸರ್ಕಾರದ ಮೇಲೆ ಸ್ವಲ್ಪ ಒತ್ತಡ ಹಾಕಿ. ಬೆಟ್ಟದಷ್ಟು ರಾಗ ತೆಗೆದುಬಿಟ್ಟು ಕೂದಲಷ್ಟು ಹಾಡು ಹೇಳಿದರೆ ಅದು ಸಂಗೀತವಾಗುವುದಿಲ್ಲ. ಹಾಡಿಗೂ ರಾಗಕ್ಕೂ ಸಂಯೋಜನೆ ಇರಬೇಕು.

ಡಾ|| ಹೆಚ್.ಸಿ. ಮಹದೇವಪ್ಪ:- ಸಕಲೇಶಪುರದ ಶಾಸಕರಾದ ಹೆಚ್.ಕೆ. ಕುಮಾರಸ್ವಾಮಿಯವರು, ಹಾಸನ-ಗೊರೂರು-ಅರಕಲಗೂಡು-ರಾಮನಾಥಪುರ-ಬೆಟ್ಟದಪುರ-ಪಿರಿಯಾಪಟ್ಟಣ ಈ ರಸ್ತೆಯನ್ನು ಮಾಡಿ ಎಂದು ಹೇಳಿದ್ದರು. ಇದೂ ಕೂಡ recommendation ನಲ್ಲಿ ಸೇರಿದೆ. ಈ ರಸ್ತೆಯನ್ನು ಮಾಡಲು ರಾಜ್ಯ ಸರ್ಕಾರದವರೂ ಕೂಡ ಈಗಾಗಲೇ tender ಕರೆದಿದ್ದೇವೆ. ಮೆಹಬೂಬ್‌ನಗರ-ಮೈಸೂರು-ಹಾಸನ-ಬೇಲೂರು ಈ ರಸ್ತೆಯನ್ನೂ ಕೂಡ

recommend ಮಾಡಿದ್ದೇವೆ. ಅವರು ನಿರ್ದಿಷ್ಟವಾಗಿ ಕೇಳಿದ್ದರಿಂದ ಇವೆರಡು ರಸ್ತೆಗಳನ್ನು ಇಲ್ಲಿ mention ಮಾಡಿದೆ. They are also in the recommendations. ರಮೇಶ್ ಕುಮಾರ್‌ರವರೇ, ನಿಮ್ಮದೂ ಇದೆ. ಇನ್ನೂ 49 recommendations ಆದ ರಸ್ತೆಗಳಿವೆ. ತಮಗೂ (ವಿರೋಧ ಪಕ್ಷದ ನಾಯಕರಿಗೂ) ಅದರ ಒಂದು ಕಾಪಿಯನ್ನು ಕೊಡುತ್ತೇನೆ. ತಾವೂ ಕೂಡ ದೆಹಲಿಗೆ ಹೋದಾಗ ಪ್ರಯತ್ನ ಮಾಡಿ. ಮಾನ್ಯ ವಿರೋಧ ಪಕ್ಷದವರೂ ಸಹ ಇದನ್ನು persuade ಮಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡುತ್ತೇನೆ.

K.R.D.C.L ಗೆ ಸಂಬಂಧಪಟ್ಟಹಾಗೆ ಹುಬ್ಬಳ್ಳಿ-ಲಕ್ಷ್ಮೇಶ್ವರ ರಸ್ತೆಯ ಬಗ್ಗೆ ಅಂದಾಜು ಸಮಿತಿಯವರು visit ಮಾಡಿದ್ದರು, ಆ ರಸ್ತೆ ಹಾಳಾಗಿದೆ ಎಂದು ಹೇಳಿದ್ದರು. ಆ ಸಮಿತಿಯ recommendation ಮೇಲೆ ನಾವು ಪ್ರೊಫೆಸರ್ ಶ್ರೀನಿವಾಸ ಮೂರ್ತಿ ಎನ್ನುವವರನ್ನು ಅಲ್ಲಿಗೆ ಕಳುಹಿಸಿದ್ದೆವು. ಅವರು Indian Institute of Science Managementನಲ್ಲಿ expert ಆಗಿದ್ದಾರೆ. ಅವರನ್ನು ಅಲ್ಲಿಗೆ ಕಳುಹಿಸಿ, ಈ ಒಂದು Cracksಅನ್ನು ಯಾವ ರೀತಿ ನಿರ್ವಹಿಸಬೇಕು ಎಂದು ಕೇಳಿದ ಮೇಲೆ . . . .

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಒಂದು ಕಿ.ಮೀ.ಗೆ ಎಂಟು ಕೋಟಿ ರೂಪಾಯಿಗಳನ್ನು ಕೊಟ್ಟರೂ cracks ಏಕೆ ಬರುತ್ತದೆ? Scarlet

ಡಾ॥ ಹೆಚ್.ಸಿ. ಮಹದೇವಪ್ಪ:- ತಾವು annuityಯದನ್ನು ಹೇಳುತ್ತಿದ್ದೀರಿ. ಆ expert ಅಲ್ಲಿಗೆ ಹೋಗಿ ಅಲ್ಲಿನ soil ಎಲ್ಲವನ್ನೂ ನೋಡಿ India ದೇಶದಲ್ಲಿ the first technology is called, rut filling and micro surfacing working ಎಂದು ಹೊಸ technology ಮಾಡಿ ಕೆಲಸ ಮಾಡಿದ್ದಾರೆ. ಇನ್ನೂ 8-9 ಕಿ.ಮೀ. ಉಳಿದಿದೆ. That is going to be completed. ಇದು annuity ಮೇಲೆ ನಡೆದಿರುವಂಥಾದ್ದು. Annuity ಎಂದರೆ ಗುತ್ತಿಗೆದಾರನೇ ಮೊದಲು ದುಡ್ಡು ಹಾಕಿ ಮಾಡುವುದು, ಪ್ರತಿ ವರ್ಷ ನಾವು ಅವನಿಗೆ ಇಂತಿಷ್ಟು ಎಂದು ಕೊಟ್ಟುಕೊಂಡು ಹೋಗುವುದು. ಶಿವಲಿಂಗೇಗೌಡರು ಅನೇಕ ಸಾರಿ, ನಾವೇಕೆ ಅವರಿಗೆ ಕೊಡಬೇಕು, ನಾವೇ

ಮಾಡೋಣ ಎಂದು ಹೇಳಿದ್ದಾರೆ. Their arguments is correct, I am also of their view only. ಆದರೆ ಮೊದಲು ಹಾಕಲು ನಮ್ಮ ಹತ್ತಿರ ದುಡ್ಡು ಇರಬೇಕಲ್ಲವೇ?

ಶ್ರೀ ಕೆ.ಎಂ. ಶಿವಲಿಂಗೇಗೌಡ:- MoUನಲ್ಲಿ ಏನಿದೆ ಎಂದರೆ, road commence ಆದ ಆರು ತಿಂಗಳಲ್ಲೇ ಅವನಿಗೆ 16 ಕೋಟಿ ಕೊಡುತ್ತೀರಿ. ಆ road complete ಆಗುವುದರೊಳಗೇ 70 ಕೋಟಿ ಕೊಟ್ಟಿದ್ದೀರಿ.

ಡಾ|| ಹೆಚ್.ಸಿ. ಮಹದೇವಪ್ಪ:- ಅವರಿಗೆ ಯಾವ extra ದುಡ್ಡನ್ನೂ ಕೊಡದೇ, agreement ನ ಪ್ರಕಾರ ಅದೇ ದುಡ್ಡಿನಲ್ಲಿ ಹೊಸ technology ಯನ್ನು ಬಳಸಿ, we have brought into a final stage.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಯಾವ ಹೊಸ technology ಯೂ ಇಲ್ಲ ಅಲ್ಲಿ.

Sri M.T. Krishnappa:- Every six months 16 crores payment ಆಗಿದೆ. we have visited the spot.

ಡಾ|| ಹೆಚ್.ಸಿ. ಮಹದೇವಪ್ಪ:- ನಿಮ್ಮ ಸಮಿತಿಯ visit ಆದ ಮೇಲೆ ಈ ಒಂದು Expert Committeeಯನ್ನು ಅಲ್ಲಿಗೆ ಕಳುಹಿಸಿದ್ದೇವೆ, because he is a Professor.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅವರು Professor ಆಗಿಬಿಟ್ಟರೆ ನಮಗೇನೂ knowledge ಇಲ್ಲವೇ?

ಡಾ|| ಹೆಚ್.ಸಿ. ಮಹದೇವಪ್ಪ:- ನಿಮ್ಮ ಸಮಿತಿ ಹೇಳಿದ ಮೇಲೆ ಇದಕ್ಕೆ extra ಒಂದು ಪೈಸೆಯನ್ನೂ ಕೊಡದೇ this road is being tackled within the agreementvout of his money only.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಯಾವ expert ಇಲ್ಲ. ನಮ್ಮ ಹಳ್ಳಿಯವರಿಗೆ ಗೊತ್ತಾಗುತ್ತದೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:- ನೀವು ಹಾಗೆಲ್ಲ ಹೇಳುವುದಕ್ಕೆ ಹೋಗಬೇಡಿ. This is a new technology in the entire State we have adopted.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- 160 ಕೋಟಿ ರೂಪಾಯಿ estimate 263 ಕೋಟಿ ರೂಪಾಯಿಗಳಿಗೆ ಏರಿದೆ.

ಡಾ॥ ಹೆಚ್.ಸಿ. ಮಹದೇವಪ್ಪ:- 10 ವರ್ಷಗಳ ಅವಧಿಯವರೆಗೆ ಕಾಯ್ದು, ಅಲ್ಲಿ road ಮಾಡದಿದ್ದರೆ ಆ ಘಳಿಗೆಯಲ್ಲಿ ಎಲ್ಲಿಂದ ದುಡ್ಡು ತರುವುದು? ನಮ್ಮ ಸಂಪನ್ಮೂಲ ತುಂಬಿದ್ದರೆ ಖಂಡಿತವಾಗಿಯೂ ಅವರು ಯಾರೂ ಬೇಕಾಗಿಲ್ಲ. ನಾವೇ ಮಾಡುವುದಕ್ಕೆ ಸಿದ್ಧರಿದ್ದೇವೆ. ಈ ರೀತಿ ಮಾತನಾಡಿ ಮಾತನಾಡಿ ಹೇಗೋ 65 ವರ್ಷ ಕಳೆದು ಬಿಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಿಮ್ಮ ಕಾಲದಲ್ಲಿ ಆಗಿಲ್ಲ. ನಿಮ್ಮ ಇಲಾಖೆಯವರು ಮಾಡಿರುವುದು.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಎಲ್ಲಾ ನಾಚಿಕೆಗೇಡು.

(ಗೊಂದಲ)

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ (ಅಫ್ಜಲ್‌ಪುರ):- 160 ಕೋಟಿ ರೂ.ಗಳಿಗೆ ಇದ್ದಂತಹ ಎಸ್ಟಿಮೇಟ್ 263 ಕೋಟಿ ರೂ.ಗಳಿಗೆ ಹೋಗಿದ್ದರಿಂದ ಒಂದು ಕಿ.ಮೀ ಗೆ 8 ಕೋಟಿ ರೂ.ಗಳು ಬರುತ್ತಿದೆ. ನಾವು ಎಸ್ಟಿಮೇಟ್ ಕಮಿಟಿಯ ಛೇರ್‌ಮನ್ ಆಗಿ ರಿಪೋರ್ಟ್ ಕೊಟ್ಟಾಗ ಹೇಳಿದ್ದು. ಮಾನ್ಯ ಮಹದೇವಪ್ಪರವರು ಒಳ್ಳೆಯ ಕ್ರಿಯಾಶಾಲಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಏನಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅವರ ಬಗ್ಗೆ ನಾವು ಹೇಳುತ್ತಿಲ್ಲ. ಅವರ ಕಾಲದಲ್ಲಿ ಆಗಿರುವುದಲ್ಲ. ಅವರಿಗೇನೂ ಗೊತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನಿಮ್ಮ ಕಾಲದಲ್ಲಿ ಆಗಿರುವುದು.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:– Sir, I am not taking the . . .

(ಗೊಂದಲ)

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:– . .16 ಕೋಟಿ bonus ಕೊಟ್ಟಿದ್ದಾರೆ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:– Realityಯಲ್ಲಿ ಗೌರವಾನ್ವಿತ ಸಮಿತಿಯವರು ಹೋಗಿದ್ದಾರೆ, ನೋಡಿದ್ದಾರೆ. ಅವರ ಸಲಹೆ ಮೇರೆಗೆ ನಾವು technocrats ಅನ್ನು ಕಳುಹಿಸಿದ್ದೇವೆ. They have given technical suggestion how to tackle this road ಎಂದು. Without paying a single extra paisa whatever is there in the MoU within that by adopting micro surfacing the road is being tackled.

(ಗೊಂದಲ)

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:– ನಾವು serious ಆಗಿ ತೆಗೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಹೆಚ್.ಕೆ ಕುಮಾರಸ್ವಾಮಿ:- ನಾವು ಇಂಜಿನಿಯರ್ ಅಲ್ಲ. ಯಾರೋ ಆ ಪುಣ್ಯಾತ್ಮ, expert, head, engineer ಎಂದು ಹೇಳಿ. ನಾವೂ ನೋಡುತ್ತೇವೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:- The Government has taken this very seriously. We will tackle the issue without allowing an extra paisa to be spent on this road Whatever the agreement is there according we will see that this is tackled.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:- 160 ಕೋಟಿ ರೂ.ಗಳ tips ಅನ್ನು contractor ಗೆ ಕೊಡುತ್ತಿದ್ದೇವೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:- ಮಾನ್ಯ ಕೃಷ್ಣಪ್ಪನವರೆ, tips ಹೇಗೆ? Annuity base ಮೇಲೆ ಅವರೇ ಹಾಕಿಬಿಟ್ಟು ಕೊಡದೇ ಇದ್ದರೆ ಹೇಗೆ? There is an agreement.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಸಚಿವರೆ ನಿಮ್ಮ ಕಾಲದಲ್ಲಿ ನಡೆದಿರುವುದು ಅಲ್ಲ. ನೀವು ಏಕೆ ಅನ್ಯತಾ ಭಾವಿಸುತ್ತೀರಿ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:- ಅವರ ಕಾಲ, ಇವರ ಕಾಲ ಎಂದು ಹೇಳುತ್ತಿಲ್ಲ. . . .

(ಗೊಂದಲ)

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:– ನಾವು ರಿಪೋರ್ಟ್ ಕೊಟ್ಟ ಮೇಲೆ. . .

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರೇ ಬರಲಿ. ನಾವು layman. ನಾವೇನೂ Engineer ಅಲ್ಲ. ಆ ಬೃಹಸ್ಪತಿ, expert ಯಾರು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಲಿ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:– ಎಲ್ಲೆಲ್ಲಿ ಸರ್ಕಾರದ ಹಣ ದುರುಪಯೋಗವಾಗುತ್ತದೆ ಎಂದು ಗೊತ್ತಾಗುತ್ತದೆ, we will not spare. ನಾನು ಬಂದ ಮೇಲೆ 6 ತಿಂಗಳಿನಲ್ಲಿ ಏನೇನು ಕ್ರಮವನ್ನು ತೆಗೆದುಕೊಂಡಿದ್ದೇನೆ, without talking to anybody what are all the measures I have taken to keep the department transparent ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ಎಸ್ಟಿಮೇಟ್ ಕಮಿಟಿ ಕೊಟ್ಟಿರುವ ರಿಪೋರ್ಟ್‌ಗೂ ಬೆಲೆ ಇಲ್ಲ. ನೀವು ನಮ್ಮದೊಂದು ಮಾತನ್ನೂ ಆಲಿಸುವುದಿಲ್ಲ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:– ನಿಮ್ಮ ಮಾತುಗಳನ್ನು ಆಲಿಸಿಯೇ ನಾನು ಹೇಳುತ್ತಿರುವುದು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಒಂದು ನಿಮಿಷ ಸಾರ್.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:- ಮಾನ್ಯ ಶಿವಲಿಂಗೇಗೌಡರೆ ನಾನು ಮಾತನಾಡಿದ ಮೇಲೆ ತಾವು ಆನಂತರ ಹೇಳಿ. ಏನು ಸರಿಯಿಲ್ಲ ಎನ್ನುವುದು ಕಂಡುಬಂದರೆ, I am the last person to spare anybody. ಏಕೆ ಆ ರೀತಿ ಮಾಡುತ್ತೀರಿ? We are not under anybodies obligation.

(ಗೊಂದಲ)

ಉಪಾಧ್ಯಕ್ಷರು:- ಆಯಿತು ಮಾತನ್ನು ಮುಂದುವರೆಸಿ.

ಡಾ|| ಹೆಚ್.ಸಿ. ಮಹದೇವಪ್ಪ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು K-SHIP ರಸ್ತೆಗಳು ನಿಧಾನವಾಗುತ್ತಿವೆ ಹೇಗೆ ಎಂದು ಹೇಳಿದ್ದಾರೆ. ಸವದತ್ತಿ-ಧಾರವಾಡ 38 ಕಿ.ಮೀ. ಉದ್ದ ಇದೆ. 21 ಕಿ.ಮೀ. ಮಾಡಿದ್ದೇವೆ. ಉಳಿದದ್ದು ಮಾಡಬೇಕು. slow ಆಗಿದೆ. ಅದನ್ನು initiate ಮಾಡುವುದಕ್ಕೆ ನಾನೇ personal ಆಗಿ review ಮಾಡಿ ಹೇಳಿದ್ದೇನೆ. That is going to be completed. ಇದೇ ರೀತಿ ರಾಮದುರ್ಗ, ಬಾದಾಮಿ. . .

(ಗೊಂದಲ)

ಶ್ರೀ ಆನಂದ @ ವಿಶ್ವನಾಥ ಚಂದ್ರಶೇಖರ್ ಮಾಮನಿ:- ಸವದತ್ತಿ, ಬಾದಾಮಿ, ಕಮಟಗಿರಸ್ತೆ K-SHIP ನವರಿಗೆ ಕೊಟ್ಟು ಸಂಪೂರ್ಣವಾಗಿ ಹಾಳು ಮಾಡಿದ್ದಾರೆ. ಕಾಮಗಾರಿ ತುಂಬಾ slow ಇದೆ. Motorable ಇಲ್ಲ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:- 21 ಕಿ.ಮೀ. that is the longest route. 150 - 130 K.Ms. ಮೇಲೆ ಬರುತ್ತದೆ. Longest route. I am not looking into the paper. Just on the basis of whatever I have reviewed I am telling.

(ಗೊಂದಲ)

ಶ್ರೀ ಜಗದೀಶ್‌ಶೆಟ್ಟರ್:- Order ಕೊಟ್ಟ ಮೇಲೂ late ಏಕೆ ಆಗುತ್ತಿದೆ ಎನ್ನುವುದು ಸಮಸ್ಯೆ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:- Some times land ದ್ದು ಸಮಸ್ಯೆ ಆಗುತ್ತದೆ ಇನ್ನೊಂದು crushing ಸಮಸ್ಯೆ ಬಂತು. ಈ two reasons ಇವೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಆನಂದ @ ವಿಶ್ವನಾಥ ಚಂದ್ರಶೇಖರ್ ಮಾಮನಿ:- ಅದರಲ್ಲಿ crushing problem ಇಲ್ಲ. contractor ಗಳು ಸರಿಯಾಗಿ ಬಂದು ಕೆಲಸ ಮಾಡುತ್ತಿಲ್ಲ. Land acquisition ಮುಗಿದೆ. ಕಾಮಗಾರಿಯನ್ನು ಮಾಡುತ್ತಿಲ್ಲ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:- ಮೊದಲು ನಿಧಾನವಾಯಿತು. ಆಮೇಲೆ ಅವರನ್ನು negotiationಗೆ ಕರೆದು, ಬೇಗ ಕೆಲಸ ಮುಗಿಸಬೇಕೆಂದು warn ಮಾಡಿದ್ದೇನೆ. It is an important road which connects tourism spots like Badami and Ihole ಮತ್ತು ಬೇರೆ agricultural activities, economic activities ಎಂದು ಹೇಳಿದ ಮೇಲೆ ಅವರು ಕೆಲಸ ಪ್ರಾರಂಭ ಮಾಡಿದ್ದಾರೆ. We will hasten that work.

(ಗೊಂದಲ)

ಶ್ರೀ ಡಿ.ಸಿ ತಮ್ಮಣ್ಣ:- ಮಳವಳ್ಳಿ, ಕೊರಟಗೆರೆ, ಪಾವಗಡ ಅದು ಇನ್ನೂ commence ಆಗಿಲ್ಲ. ಏಳು ವರ್ಷ ಆಯಿತು. ನಮಗೆ 2008ರಲ್ಲಿ approve ಆಗಿದ್ದು.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಸುಮಾರು ಐದು ರಸ್ತೆಗಳು K-SHIP ನಲ್ಲಿತ್ತು. KSHIP, KRDCL, these are all State Highways. World Bank guidelines ಮೇಲೆ ಮಾಡಬೇಕು. ಅವರು ಟೆಂಡರ್ ಮಾಡುವಾಗ IRR 18% ಗೆ ಇರಬೇಕು.

(ಗೊಂದಲ)

ಶ್ರೀ ಕೆ.ಬಿ. ಪ್ರಸನ್ನ ಕುಮಾರ್:– ಅದೇ ರೀತಿ ಹಾನಗಲ್, ಶಿವಮೊಗ್ಗ K-SHIP ಕಾಮಗಾರಿ ತುಂಬಾ ತಡವಾಗಿದೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಅದೂ ಇಲ್ಲೇ ಇದೆ. ಈ ರಸ್ತೆಗಳು ಆಗುವುದಿಲ್ಲವೆಂದು World Bank ನವರು over and above IRR ಹಾಕಿಕೊಂಡಿದ್ದರು. ಆನಂತರ ಅದನ್ನು ಒಪ್ಪಲಿಲ್ಲ. ಅದಾದಮೇಲೆ ನನ್ನ ಆಫೀಸ್‌ನಲ್ಲಿ 2–3 ಬಾರಿ ಮೀಟಿಂಗ್ ಮಾಡಿದೆವು ಮತ್ತು ನಮ್ಮ officers ದೆಹಲಿಗೆ ಹೋಗಿ World Bank ನವರ ಹತ್ತಿರ ಚರ್ಚೆ ಮಾಡಿ now they have agreed. ಹೊಸಕೋಟೆಯಿಂದ ಚಿಂತಾಮಣಿ ಬೈ ಪಾಸ್ ಹೆದ್ದಾರಿ, ಹಾವೇರಿ ರಾಷ್ಟ್ರೀಯ ಹೆದ್ದಾರಿ ಹಾನಗಲ್, ಇವೆರಡನ್ನೂ ಪ್ರಾರಂಭ ಮಾಡಿದ್ದೇವೆ.

(ಗೊಂದಲ)

ಶ್ರೀ ಹೆಚ್.ಎಸ್. ಶಿವಶಂಕರ್:– ಬೀರೂರು ಸಮಸ್ಕಿ ರಸ್ತೆ ಸಮಸ್ಯೆ ಅರ್ಧಂಬರ್ಧ ಆಗಿ ಕೆಲಸ ಆಗಿಲ್ಲ. ಅದು ಹಾಳು ಬಿದ್ದಿದೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಹೇಳುತ್ತೇನೆ. ಮಳವಳ್ಳಿ–ಪಾವಗಡ ಕೆಲಸವನ್ನು ಶುರು ಮಾಡುತ್ತೇವೆ.

(ಗೊಂದಲ)

ಶ್ರೀ ಬಿ. ಸುರೇಶ್‌ಗೌಡ:– ಮಾನ್ಯ ಸಚಿವರೆ, ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– Expected to commence in the month of August.

(ಗೊಂದಲ)

ಶ್ರೀ ಬಿ. ಸುರೇಶ್‌ಗೌಡ:– Thank you sir.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಇವೆಲ್ಲಾ final ಆಗಿದೆ.

(ಗೊಂದಲ)

ಶ್ರೀ ಡಿ.ಸಿ. ತಮ್ಮಣ್ಣ:– 250 ಕಿ.ಮೀ. ಇದೆ. ಅದನ್ನು ಎರಡೂ ಕಡೆಯಿಂದ tackle ಮಾಡುವುದಕ್ಕೆ ತಾವು ಅನುಮತಿ ಕೊಡಬೇಕು. ಏಕೆಂದರೆ ಒಂದು ಕಡೆ tackle ಮಾಡುವುದಕ್ಕೆ ಐದು ವರ್ಷ ಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ. ಸುರೇಶ್‌ಗೌಡ:– ಪಾವಗಡ–ಮಂಡ್ಯ. .

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:– ಗುಬ್ಬಿ ಮತ್ತು ಮಂಡ್ಯದ್ದು ಯಾವಾಗ ಮಾಡುತ್ತೀರಿ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಆ ವಿಷಯಕ್ಕೆ ಬರುತ್ತೇನೆ. ಮುಧೋಳ್–ನಿಪ್ಪಾಣಿ ಅದೂ ಕೂಡ expected to commence in the month of August.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:- ಹತ್ತು ವರ್ಷದಿಂದ ಇದೇ ಕಥೆಯನ್ನು ಕೇಳುತ್ತಿದ್ದೇವೆ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:- It is not a story, it is reality. Whatever was told first that is a story, this is a reality. ಇನ್ನೂ ಮೂರು ರಸ್ತೆಗಳಿವೆ. ಶಿವಮೊಗ್ಗ-ಶಿಕಾರಿಪುರ-ಆನಂದಪುರಂ, ಶಿಕಾರಿಪುರ-ಆವಟ್ಟಿ-ಹಾನಗಲ್, ಮನವಳ್ಳಿ-ದೇವಪುರ, ಈ ರಸ್ತೆಗಳು ಯಾವ ಹಂತದಲ್ಲಿ approve ಆಗಿವೆ, anytime we will call for tender and we will do.

(ಗೊಂದಲ)

ಶ್ರೀ ಕೆ.ಬಿ. ಪ್ರಸನ್ನ ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಎರಡು ಬಾರಿ ಟೆಂಡರ್ ಆಗಿದೆ. ಅವರು ಬಂದಿಲ್ಲ. ಕೆಲಸ ಶುರು ಮಾಡಿಲ್ಲ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:- ಇವೆಲ್ಲಾ ಮೊದಲು world bank ನಿಂದ ಆಗುವುದಿಲ್ಲವೆಂದು ಹೇಳಿದ್ದರು. Because the bidder went above the IRR guidelines. ಮತ್ತೆ ನಾನು ನನ್ನ ಕಛೇರಿಯಲ್ಲಿ 3-4 ಸಭೆ ಮಾಡಿದಾಗ they have agreed. ಆಗಸ್ಟ್‌ನಲ್ಲಿ ಎರಡು ರೋಡ್ ಮಾಡುತ್ತೇವೆ ಮತ್ತು ಇವುಗಳಿಗೆ re-tender ಮಾಡುತ್ತೇವೆ. ಮಾನ್ಯ ರಾಜಣ್ಣನವರೆ, ಚನ್ನಗಿರಿ ಮತ್ತೊಂದು ಹೇಳಿದಿರಿ left over ಅನ್ನು cancel ಮಾಡಿ ಎರಡು ಭಾಗ ಮಾಡಿ ಅದನ್ನೂ ಟೆಂಡರ್ ಮಾಡುತ್ತೇವೆ. ಹಳೆ ಬಿಡ್ಡರ್ಸ್‌ಅನ್ನು ವಜಾ ಮಾಡಿದ್ದೇವೆ. ಹೊಸದಾಗಿ ಅಪ್ರೂವಲ್ ಕೊಟ್ಟಿದ್ದಾರೆ. ಅದನ್ನೂ ಪ್ರಾರಂಭ ಮಾಡುತ್ತೇವೆ.

ಶ್ರೀ ಕಾಶಪ್ಪನವರ್ ವಿಜಯಾನಂದ ಶಿವಶಂಕರಪ್ಪ:- ಕಾರವಾರ-ಕಾಗೆ ರೋಡ್ ಹಾಗೆಯೇ ಉಳಿದಿದೆ.

(ಗೊಂದಲ)

ಉಪಾಧ್ಯಕ್ಷರು:– K-SHIPದು proposal ಇತ್ತಾ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ವಾಸ್ತುಶಿಲ್ಪದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. I.B., guest house, green building concept, it is an excellent concept. Green building concept ಅಂದರೆ, ಪರಿಸರ ಹಾಳು ಮಾಡದೇ ಕಡಿಮೆ ವೆಚ್ಚದಲ್ಲಿ ನಮ್ಮ ಸುತ್ತ ಸಿಗುವ infrastructure ಬಳಸಿ, nature ಅನ್ನು protect ಮಾಡಿ, ಹಸಿರಾಗಿರುವಂತಹ ಅಲ್ಲಿಯೇ ಸಿಗುವಂತಹ ಮನೆ ಕಟ್ಟುವುದು green building. ಅದಕ್ಕೆ ನಾವು ಈಗಾಗಲೇ we are working. ಕುಮಾರ ಕೃಪಾ ಗೆಸ್ಟ್ ಹೌಸ್ ಪ್ರಾರಂಭ ಮಾಡುತ್ತಿದ್ದೇವಲ್ಲಾ ಅದನ್ನು as a pilot project ರೀತಿ ಕಟ್ಟುವುದಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಆರ್. ಪಾಟೀಲ್:– SHDPಯಲ್ಲಿ ತಾವು ಹಣ ಕೊಟ್ಟಿದ್ದು ಬಹಳ ಕಡಿಮೆ ಇದೆ. ಅದರ ಬಗ್ಗೆ ತಾವು ಹೇಳಿ.

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಕೆಲವರು ವಾಸ್ತು ಎಂದರೆ ನಂಬಿಕೆಯನ್ನಿಟ್ಟುಕೊಳ್ಳುತ್ತಾರೆ. ಇನ್ನು ಕೆಲವರು ಮೂಢನಂಬಿಕೆ ಎಂದು ತಿಳಿದುಕೊಳ್ಳುತ್ತಾರೆ. ನಾನು ತಿಳಿದು ಕೊಂಡಿರುವಂತೆ basically it is a science. ವಾಸ್ತು ಅಂದರೆ ಏನು? ಸೂರ್ಯನು ಹುಟ್ಟಿದ ಮೇಲೆ ಆ ಸೂರ್ಯನ ಕಿರಣಗಳು ಮನೆಗೆ ಪ್ರವೇಶ ಮಾಡಿ ನಮ್ಮ ಮೈಮೇಲೆ ಅದು ಬಿದ್ದರೆ ಅಲ್ಲಿ ನಮ್ಮ ossification of bone Vitamin-D ಅದರಲ್ಲಿ rays ಬರುತ್ತದೆ. Light ಬಂದರೆ ಅಲ್ಲಿ Light reflect ಆಗುತ್ತದೆ. ಅದು ಉದ್ದೇಶವಾಗಿದೆ. ಅದನ್ನು ಸೆರೆಹಿಡಿಯುವುದಕ್ಕೆ ಯಾವ ರೀತಿಯಾದಂತಹ ವಿನ್ಯಾಸ ಇರಬೇಕು. ಗಾಳಿ ಬೀಸಿದಾಗ ಶುದ್ಧವಾದಂತಹ ಗಾಳಿ ಕಿಟಕಿ ಮತ್ತು ಬಾಗಿಲ ಒಳಗಡೆ ಬಂದು ನಾವು ಉಸಿರು ಬಿಡುವಂತಹ carbon dioxide ಅನ್ನು ಆಚೆಗೆ ಕಳುಹಿಸಿ ಬಂದ ಗಾಳಿಯ ಜೊತೆಯಲ್ಲಿ

ಅದು mix ಆಗದ ಹಾಗೆ ಈ ಗಾಳಿ ಆಚೆಗೆ ಹೋಗಿ ಆ ಗಾಳಿಯನ್ನು ತೆಗೆದುಕೊಳ್ಳುವುದು ಹೇಗೇ? How to prepare in architectural preparation? ಅದೇ ರೀತಿಯಲ್ಲಿ ಅಡಿಗೆ ಮಾಡುವಾಗ ಕರೆದ ಪದಾರ್ಥಗಳು, ಸಾಂಬಾರು ಪದಾರ್ಥಗಳು, ಕಣ್ಣು ಮತ್ತು ಮೂಗಿನಲ್ಲಿ ನೀರು ಹರಿಯುವುದನ್ನು ತಡೆದು ಅಲ್ಲಿ suffocative atmosphere ತಡೆಯುವುದಕ್ಕೆ ಅಲ್ಲಿ ಪರಿಸರವನ್ನು ಕಲುಷಿತಗೊಳ್ಳದಂತೆ ವಾತಾವರಣ ಬರುವಂತೆ ಮಾಡುವುದು. ಅದನ್ನು ಹಾಗೆಯೇ ಮನೆಯಿಂದ ಹೇಗೆ ಆಚೆಗೆ ಕಳುಹಿಸಬೇಕು. ನಾವು toiletಗೆ ಹೋದರೆ Urination and Defecation ಗೆ ಮನೆಗೆ ಅದು mix ಆಗದ ರೀತಿಯಲ್ಲಿ ಆ ವಾತಾವರಣದಿಂದ ಆಚೆಗೆ ಕಳುಹಿಸುವುದು ಹೇಗೇ? These are the science that are involved.

ಶ್ರೀ ಬಿ.ಆರ್. ಪಾಟೀಲ್:- Thank you Mr. Minister.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ:- ನಾನು ಬಂದ ತಕ್ಷಣವೇ ಇದನ್ನೇ ಹೇಳುತ್ತಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಸಚಿವರೆ ತಾವು ಒಬ್ಬ ಡಾಕ್ಟರ್ ಆಗಿ ವಿಜ್ಞಾನದ ಅರಿವನ್ನು ಕೊಡುತ್ತಿದ್ದೀರಿ. ಆದರೆ ಟಿ.ವಿ.ಯಲ್ಲಿ ಮಾಧ್ಯಮದೊಳಗಡೆ ಯಾವ ರೀತಿಯಾಗಿ ಜನರಿಗೆ ತಿಳಿಸುತ್ತಿದ್ದಾರೆಂದು ಗೊತ್ತಿದೆಯೇ? ಅವರುಗಳು ದುಡ್ಡು ಕೊಟ್ಟು studioಗೆ ಹೋಗುತ್ತಿದ್ದಾರೆ.

ಡಾ|| ಹೆಚ್.ಸಿ. ಮಹದೇವಪ್ಪ:- ಅವೆಲ್ಲವೂ ನನಗೆ ಗೊತ್ತಿದೆ.

ಶ್ರೀ ಬಿ.ಆರ್. ಪಾಟೀಲ್:- ಅವರುಗಳು ದುಡ್ಡು ಕೊಟ್ಟು studioಗಳಿಗೆ ಹೋಗುತ್ತಿದ್ದಾರೆ.

ಡಾ|| ಹೆಚ್.ಸಿ. ಮಹದೇವಪ್ಪ:- ಇಲ್ಲಿ ಮಾಧ್ಯಮದ ಸ್ನೇಹಿತರುಗಳು ಸಹ Constitutional responsibly discharge ಮಾಡಬೇಕು. ಇಲ್ಲಿ freedom of speech ಇದೆ. ಇದರ ಜೊತೆಗೆ social commitment ಇದೆ.

Constitutional responsibility ಇದೆ. ಆಧಾರ ಇಲ್ಲದೆ ಏನೋ ಮಾಡುವುದು 30 ವರ್ಷದಿಂದ ಕಷ್ಟಪಟ್ಟು ಬಂದಿರುವಂತಹ image ಅನ್ನು ಹಾಳುಮಾಡುವುದು, ಮಾಹಿತಿಯಲ್ಲಿ ಹೇಳುವುದು ಎಲ್ಲವೂ ಇರುತ್ತದೆ. Every one should function in accordance with the provisions of the duties and responsibilities which are given to us under the Constitution. ಈ ರೀತಿ ಇದ್ದಾಗ ಯಾವುದೇ ಗೊಂದಲ ಬರುವುದಿಲ್ಲ.

ಉಪಾಧ್ಯಕ್ಷರು:- ಮಾನ್ಯ ಸಚಿವರೆ, ತಮಗೆ ಉತ್ತರ ಹೇಳುವುದಕ್ಕೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ.

ಡಾ|| ಹೆಚ್.ಸಿ. ಮಹದೇವಪ್ಪ:- ಇಷ್ಟೇಲ್ಲಾ ನಾನು ಓದಿಕೊಂಡು ಬಂದಿದ್ದೇನೆ ಮುಗಿಸಿಬಿಡು ಅಂದರೆ ಹೇಗೇ? ಇದು Engineeringಗೆ ಸಂಬಂಧಪಟ್ಟಿರುವುದರಿಂದ ಹೇಳಬೇಕಾಗಿದೆ. ನಾವೆಲ್ಲರೂ ಮೂಢನಂಬಿಕೆಯ ಕಡೆಗೆ ಹೋಗುತ್ತಿದ್ದೇವೆ. ಗುಣಾತ್ಮಕ್ಕೆ ಮತ್ತು ವಾಸ್ತುಶಿಲ್ಪಕ್ಕೆ ಒಂದು autonomous status ಕೊಡಬೇಕೆಂದು ಮಾಡಿದ್ದೇನೆ. I am working out. It is a good suggestion. Judgesಗೆ ಯಾವ ತರಹದ ಮನೆಗಳು ಇರಬೇಕೆಂಬ ಬಗ್ಗೆ guidelines ಇದೆ. ಗುಣಮಟ್ಟವನ್ನು ಕಾಪಾಡುವುದಕ್ಕಾಗಿ Vigilance Wing, Taskforce Wing ಮಾನ್ಯ ಜಗದೀಶ್ ಶೇಟ್ಟರ್‌ರವರೆ, ನೀವು ಹೇಳಿದ ಶ್ರೀ ರವೀಂದ್ರರವರು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. I have interacted with him many times. ಯಾವ ರೀತಿಯಾಗಿ ಸುಧಾರಣೆಯನ್ನು ಮಾಡಬೇಕು, ಯಾವ ರೀತಿಯಾಗಿ ಬದಲಾವಣೆ ತರಬೇಕೆಂದು ಹೇಳಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಸಚಿವರೆ, ತಾವು ಆಶ್ರಯ ಮನೆಗಳಿಗೆ ಸಂಬಂಧಿಸಿದಂತೆ ದಯಮಾಡಿ ಒಂದು guidelines ಕೊಡಿ.

ಡಾ|| ಹೆಚ್.ಸಿ. ಮಹದೇವಪ್ಪ:- Yes sir, all houses have got guidelines. Houses without guidelines will not stay for long. ಇಲ್ಲಿ ನಾನು ಹೇಳಿರುವುದು ಇದೆಯಲ್ಲಾ. ಇಲ್ಲಿ ಲಕ್ಷ್ಮಿಯೂ ಸಹ ಬರುವುದಿಲ್ಲ. ಯಮಗಂಡ ಮೂಲ ಅಂತಾಲೂ ಇಲ್ಲ. There is nothing of that sort.

ಈಗ ಬಸವಣ್ಣನವರು ಹೇಳಿದರಲ್ಲಾ, all along with way Basava fought against Sanathana vada. ಮೂಢನಂಬಿಕೆ, ಅವೈಜ್ಞಾನಿಕ ವಿಚಾರಗಳ ಬಗ್ಗೆ ಬಸವಣ್ಣನವರು ಹೋರಾಟ ಮಾಡಿದರು. Task force ಮಾಡಿದ್ದೇವೆ, Vigilance wing ಅನ್ನು strengthen ಮಾಡುವುದು, Committee ಮಾಡುವುದು ಇವೆಲ್ಲವನ್ನು ಕೂಡ ಮಾಡಿ ಇನ್ನು decentralization ಮಾಡುವುದಕ್ಕೆ ಹೆಚ್ಚು ಅಧಿಕಾರ ಕೊಡಿ ಎಂದು ಮಾನ್ಯಸದಸ್ಯರುಗಳು ಹೇಳಿದ್ದಾರೆ. ಇದರ ಬಗ್ಗೆ ನಾನು Finance Departmentನವರ ಜೊತೆಯಲ್ಲಿ ಚರ್ಚೆ ಮಾಡಿ I will take cognizance of the suggestion given by all our Members. ನಮ್ಮ ಕಡೆ ಮಳೆ ಜಾಸ್ತಿಯಾಗಿ ಬೀಳುತ್ತದೆ ಎಂದು ಮಾನ್ಯ ಬೋಪಯ್ಯನವರು ಸಹ ಕೇಳಿದ್ದಾರೆ. ಅವರು ರಸ್ತೆಯ ಬಗ್ಗೆಯೂ ಕೂಡ ಹೇಳಿದ್ದಾರೆ ಅದನ್ನು K-SHIP-3 ರಲ್ಲಿ ಬಂದಾಗ ಆ ಬಗ್ಗೆ I will get it examined.

ಶ್ರೀ ಜಿ.ಹೆಚ್. ಶ್ರೀನಿವಾಸ:- ಮಾನ್ಯ ಸಚಿವರೆ, ಆರ್ಕಿಟೆಕ್ಚರ್ ಬಗ್ಗೆ ನಾನು ಒಂದು ನಿಮಿಷ ಮಾತನಾಡುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಸಚಿವರು ಉತ್ತರ ಮುಗಿಸಲಿ ನಂತರ ತಾವು ಮಾತನಾಡಿ.

ಡಾ|| ಹೆಚ್.ಸಿ. ಮಹದೇವಪ್ಪ:- ಅದರ ಬಗ್ಗೆಯೂ ಕೂಡ ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ. ನಾನು ಉಡಾಫೆಯಿಂದ ಉತ್ತರ ಕೊಡುವುದಿಲ್ಲ. Because they have given suggestions and valuable debate has taken place. ಯಾವ ತರಹ ಕೆಲಸ ಮಾಡಿ ಸಂಪರ್ಕಸಾಧನಗಳನ್ನು ಮಾಡಬೇಕೆಂದು ಹೇಳಿದ್ದಾರೆ. Very sincerely and obediently I will receive the suggestions given by the Hon'ble Members. I will not take the suggestions casually. ನಾನು sincereಆಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವುಗಳನ್ನು ಗಟ್ಟಿಗೊಳಿಸುವುದು ಆಗಿದೆ. ಮಾನ್ಯ ಕುಮಾರಸ್ವಾಮಿಯವರು ನಮಗೆ ದರ ರೇಟ್ ಕೊಡಿ ಎಂದು

ಹೇಳಿದ್ದಾರೆ. ಅದಕ್ಕೊಂದು ಕಮಿಟಿ ಇದೆ, ಈಗ ಬೇರೆ ಬೇರೆ ಕಡೆಯಲ್ಲಿ ಬೇಲೂರು, ಮೂಡಿಗೆರೆ, ಚಿಕ್ಕಮಗಳೂರು, ಈ ಕಡೆಗೆ area weightage 12 ಕೊಟ್ಟಿದ್ದೇವೆ. ಸಕಲೇಶಪುರ ಮತ್ತು ಘಾಟ್ ಕಡೆಗಳಲ್ಲಿ 20 ಕೊಟ್ಟಿದ್ದೇವೆ. ಸುಳ್ಯದಲ್ಲಿ 20, ಸೋಮವಾರಪೇಟೆಯಲ್ಲಿ 10 ಕೊಟ್ಟಿದ್ದೇವೆ. ನೀವು ಕಡಿಮೆ ಆಯಿತು ಎಂದು ಹೇಳುತ್ತಿದ್ದೀರಿ, ನಿಮ್ಮ ಏರಿಯಾಕ್ಕೆ ಕಡಿಮೆ ದುಡ್ಡು ಕೊಟ್ಟಿದ್ದೀರಿ, ಅಲ್ಲಿ ಜಾಸ್ತಿ ಕೊಟ್ಟಿದ್ದೀರೆಂದು ಹೇಳುತ್ತಿರಿ. ಚಿಕ್ಕಮಗಳೂರು to National Highway ಅಲ್ಲಿಗೆ connect ಆಗುತ್ತಿದ್ದು ಅದನ್ನು upgrade ಮಾಡಿಕೊಟ್ಟಿದ್ದೇವೆ. ನಾವು ಯಾರಿಗೂ ಇವರು ಆ ಕಡೆಯವರು ಅವರು ಈ ಕಡೆಯವರು ನಾನು ಕಳೆದ 30 ವರ್ಷದಿಂದಲೂ ಸಹ ಅದು ನನಗೆ ಬಂದಿರುವುದಿಲ್ಲ. Development Should be the only yardstick. ಕೆಲವು ಕಡೆಗಳಲ್ಲಿ ಮಾಡುವಾಗ ನನಗೆ ಗೊತ್ತಿಲ್ಲದೆಯೂ ಕೂಡ ಆಗಿರುತ್ತದೆ. ಈಗ ಮಾಡುವಾಗ ಬೇರೆ ಕಡೆಯು ಆಗಿರುತ್ತದೆ. I don't want to mix things.

ಶ್ರೀ ಬಿ.ಬಿ. ನಿಂಗಯ್ಯ:– Discrimination ಆಗಿದೆ ಎಂದು ಅದು ಆಗಬಾರದು.

ಡಾ॥ ಹೆಚ್.ಸಿ. ಮಹದೇವಪ್ಪ:– That is what I am telling, I don't want to mix things. I don't want to have such an approach. ಅಲ್ಲಿ development equal ಆಗಿ ಆಗಬೇಕಲ್ಲವೇ? ಅದಕ್ಕಾಗಿಯೇ RIS ಮಾಡಿದ ಮೇಲೆ that speaks everything.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನೀವು ದರಪಟ್ಟಿಯನ್ನು ವ್ಯತ್ಯಾಸ್ ಮಾಡುತ್ತಿದ್ದೀರಿ. ಅದಕ್ಕಾಗಿ ನೀವು ಸಕಲೇಶಪುರ ತಾಲ್ಲೂಕನ್ನು ಮಂಗಳೂರು ವೃತ್ತಕ್ಕೆ ಸೇರಿಸಬೇಕು. ಇಲ್ಲದೆ ಇದ್ದರೆ ಹಾಸನ ವೃತ್ತದ ತರಹ ಮಂಗಳೂರಿಗೆ ಕೊಟ್ಟು ಬಿಡಿ.

ಡಾ॥ ಹೆಚ್.ಸಿ. ಮಹದೇವಪ್ಪ:– ನಿಮ್ಮ ಸಕಲೇಶಪುರ ರೋಡ್ ಅನ್ನು ಬೈಪಾಸ್ ಮಾಡಬೇಕೆಂದು ಅಲ್ಲಿ DPR ನಡೆಯುತ್ತಿದೆ. DPRನಲ್ಲಿ ನೀವು ಹೇಳಿದ ತರಹ accident ನಿಂದಾಗಿ ಸುಮಾರು ಸಾವು ನೋವುಗಳು ಆಗುತ್ತಿದೆ

ಎಂದು ಹೇಳಿದ್ದೀರಿ. ಅಲ್ಲಿ DPR ಮಾಡುವಾಗ I will tell the project management to take this suggestion. ಸಾಧ್ಯವಿದ್ದರೆ ಮಾಡುತ್ತೇವೆ.

ಶ್ರೀ ಸಿ.ಎನ್. ಬಾಲಕೃಷ್ಣ:- ಮಾನ್ಯ ಮಂತ್ರಿಗಳೆ, ಚನ್ನರಾಯಪಟ್ಟಣ ಬೈಪಾಸ್ ರಸ್ತೆಯನ್ನು grade separator ಮಾಡಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ:- ಮಾನ್ಯ ಬಾಲಣ್ಣನವರೆ, ನೀವು ನಾಲ್ಕೈದು ಸಲ ಹೇಳಿದ್ದೀರಿ ಅದನ್ನು ಮಾಡಿಕೊಡುತ್ತೇನೆ. ಚನ್ನರಾಯಪಟ್ಟಣದಲ್ಲಿ ಏನಾಗುತ್ತಿದೆ, ದೇವೇಗೌಡ ಸಾಹೇಬರನ್ನು ಭೇಟಿ ಮಾಡಿದಾಗ ಅವರು ಸಹ ನನ್ನ ಗಮನಕ್ಕೆ ತಂದಿದ್ದಾರೆ. ಅದು ಸಾರ್ವಜನಿಕ ಹಿತದೃಷ್ಟಿಯಿಂದ ಆಗಲೇಬೇಕಾಗಿದೆ. ನಾನು ದೆಹಲಿಯಲ್ಲಿ 2-3 ಸಾರಿ ಹೇಳಿದ್ದೇನೆ. ಈ ಬಗ್ಗೆ ಮೀಟಿಂಗ್‌ನಲ್ಲಿಯೂ ಸಹ ಹೇಳಿದ್ದೇನೆ. We will get it done.

ಶ್ರೀ ವಿನಯ ಕುಲಕರ್ಣಿ:- ಮಾನ್ಯ ಸಚಿವರಲ್ಲಿ ಒಂದು request ಮಾಡಿಕೊಳ್ಳುತ್ತೇನೆ. ದಯವಿಟ್ಟು ನಮ್ಮಲ್ಲಿ ಏನಾಗಿದೆ ಎಂದರೆ, ಬೆಂಗಳೂರಿನಿಂದ ನಮ್ಮ National Highway-4 ಇವತ್ತು ನಾವು ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗುತ್ತೇವೆ. ಆಮೇಲೆ up to Belgaum. ಅಲ್ಲಿ ಬೆಳಗಾಂನವರೆಗೂ ಅಲ್ಲಿಯ ಪರಿಸ್ಥಿತಿ ಏನಾಗಿದೆ ಎಂದರೆ, Highwayನಲ್ಲಿ ಎಲ್ಲಿ curves ಇದೆಯೋ ಅಲ್ಲಿ ಪೂರ್ತಿ ನೀರು ನಿಲ್ಲುತ್ತಿದೆ. ಅಲ್ಲಿ Complete ಆಗಿ ನೀರು ನಿಲ್ಲುತ್ತಿದೆ. ಅಲ್ಲಿ ನೀರು ನಿಂತಿರುವುದರಿಂದಾಗಿ ನೀರು glass ಮೇಲೆ ಬರುತ್ತದೆ. ಅಲ್ಲಿ accidentಗಳು common ಆಗಿಹೋಗಿದೆ. ನಿನ್ನೆಯು ನಾನು ಬರಬೇಕಾದರೆ ನಾಲ್ಕೈದು ಗಾಡಿಗಳು ನೀರಿನಿಂದಲೇ accident ಆಗಿದೆ. ಮಾನ್ಯ ಸಚಿವರಲ್ಲಿ ನಾನು ಈ ಬಗ್ಗೆ request ಮಾಡಿಕೊಳ್ಳುತ್ತೇನೆ. ಏನು ನಮ್ಮ ರಾಣೆಬೆನ್ನೂರಿನಿಂದ ಹುಬ್ಬಳ್ಳಿ ರಸ್ತೆಯು completely sink ಆಗಿದೆ. ನಮ್ಮ ಗಾಡಿಯ ಟೈರ್ ಮೇಲೆ ಮಾರ್ಕ್ ಇದೆ. ಇವತ್ತಿಗೂ ಅಲ್ಲಿ ಸರಿಮಾಡಿರುವುದಿಲ್ಲ. ಅಲ್ಲಿ ಯಾವುದೇ ರೀತಿಯ toll collection ಕಡಿಮೆಯಾಗಿರುವುದಿಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ:- ನೀವು ಅಷ್ಟು ಹೇಳಿ ಸಾಕು ಅದನ್ನು ನಾವು ಮಾಡಿಕೊಡುತ್ತೇನೆ. ಎಲ್ಲೆಲ್ಲಿ ಈ ರೀತಿ ಆಗಿದೆ ಅದರ ಬಗ್ಗೆ ತಾವು ಸಲಹೆ ಕೊಡಿ I get the report and I will try to correct it.

ಶ್ರೀ ಡಿ.ಎನ್. ಜೀವರಾಜ್:- ಮಲೆನಾಡಿನಲ್ಲಿ ತುಂಬಾ ಮಳೆ ಬಂದು ಈ ವರ್ಷದ ಮಳೆಯ ಹೊಡೆತದಲ್ಲಿ ರೋಡ್‌ಗಳೆಲ್ಲವೂ ಸವೆದು ಹೋಗುತ್ತಿದೆ. ಆ ಮಳೆ ಬರುತ್ತಿರುವುದರಿಂದ ರಾಜ್ಯಕ್ಕೆ ಒಳ್ಳೆಯದಾಗಿದೆ. ಮಲೆನಾಡಿನ ಭಾಗದಲ್ಲಿರುವಂತಹ ರಸ್ತೆಗಳ ಬಗ್ಗೆ ತಾವು ಗಮನಿಸಬೇಕು.

ಶ್ರೀ ಜಗದೀಶ್ ಶೇಟ್ಟರ್ (ವಿರೋಧಪಕ್ಷದ ನಾಯಕರು):- ಕರಾವಳಿ, ಮಲೆನಾಡು ಎಂದು separate ಆಗಿ ಮಾಡಬೇಕು. ಈ ರಸ್ತೆಗೆ ಎಂದು ಬೇರೆಯದನ್ನು ಮಾಡಬೇಕು.

ಡಾ|| ಹೆಚ್.ಸಿ. ಮಹದೇವಪ್ಪ:- ನಾನು ಈ ಬಗ್ಗೆ conclude ಮಾಡುವಾಗ ಹೇಳುತ್ತೇನೆ. ನಿಮ್ಮ ಎಲ್ಲಾ ಸಲಹೆಗಳನ್ನು ನಾನು ನೋಡಿದ್ದೇನೆ. ನಾನು personal ಆಗಿ 32 ಜನರು ಮಾತನಾಡಿರುವ ಬಗ್ಗೆ I have noted down. I have noted down all the suggestions given by 32 Hon'ble members who have spoken in my notebook. ಅದಕ್ಕೆ ನಾನು ಆ ತರಹ ಮಾತನಾಡಿದ್ದೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಸಚಿವರೆ,.. . .

ಡಾ|| ಹೆಚ್.ಸಿ. ಮಹದೇವಪ್ಪ:- ಮಾನ್ಯ ಸವದಿಯವರೆ, ತಮ್ಮ Veterinary Buildingದು land armyಗೆ ಇದ್ದು ನಾನು Decemberನಲ್ಲಿ PWDಗೆ ಕೊಟ್ಟಿದ್ದಾರೆ. ಟೆಂಡರ್ ಮಾಡಿ ಕೆಲಸ ಶುರು ಮಾಡುತ್ತೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಅದನ್ನು ಕೇಳುವುದಕ್ಕೆ ಹೋಗುವುದಿಲ್ಲ. ನಾವು ಎದ್ದ ಕೂಡಲೇ ನೀವು ಆ ಉತ್ತರ ಹೇಳಿದ್ದೀರಿ. ಆದರೆ 39 ಜನ ಸದಸ್ಯರು ಹೇಳಿದ್ದನ್ನೆಲ್ಲಾ ನೋಟ್ ಮಾಡಿಕೊಂಡಿದ್ದೇನೆಂದು ಹೇಳಿದಿರಲ್ಲಾ, ಅವರಿಗೆಲ್ಲಾ reply ಮಾಡುತ್ತೇನೆ ಎಂದು ಹೇಳಿದ್ದೀರಿ. ದಯವಿಟ್ಟು

ಮಾತನಾಡದೇ ಇರುವ ಸದಸ್ಯರ ಕಡೆಗೆ ಹೆಚ್ಚು ಗಮನ ಕೊಟ್ಟು ಅವರ ಕೆಲಸವನ್ನು ಮಾಡಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ:- Yes. ಮಾತನಾಡಿರುವವರು, ಮಾತನಾಡದೆ ಇರುವವರು ಎಲ್ಲರ ಕಡೆ ಗಮನ ಕೊಡುತ್ತೇನೆ. ಒಟ್ಟಾರೆ infrastructure develop ಮಾಡಲಿಕ್ಕೆ ಏನು ಸಾಧ್ಯವಿದೆ .. ನೋಡಿ ನಾನು ಒಂದು ವರ್ಷದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಕಿ.ಮೀ. ಇರುವುದನ್ನು ನಾನು in this first year develop ಮಾಡಿದ್ದೇನೆ. Any body can verify. ಮತ್ತೆ ಎಲ್ಲಾ ಕ್ಷೇತ್ರಗಳಲ್ಲಿಯೂ, entire 176 ತಾಲ್ಲೂಕಿನಲ್ಲಿಯೂ ಒಂದಲ್ಲ ಎರಡು ಕೆಲಸಗಳು ಆಗುತ್ತಿವೆ. IB ಗಳ ಬಗ್ಗೆ ಹೇಳಿದ್ದಾರೆ. IB ಗಳನ್ನು ಮಾಡಲಿಕ್ಕೆ ಎಷ್ಟು ಅಗತ್ಯವಿದೆ ಅಷ್ಟನ್ನು ಮಾಡಲಿಕ್ಕೆ ನಾನು already ಸೂಚನೆ ಕೊಟ್ಟಿದ್ದೇನೆ. ನಾವು Quality Control Wingಗಳನ್ನು ಸ್ಥಾಪನೆ ಮಾಡಿದ್ದೇವೆ. ಸುಮಾರು 4 circle, ಒಬ್ಬ ಚೀಫ್ ಇಂಜಿನಿಯರ್‌ರವರನ್ನು ಅದಕ್ಕೆ ನೇಮಿಸಿದ್ದೇವೆ. 8 divisions, 16 sub-divisions. ಗ್ಯಾಂಗ್‌ಮನ್ ಬಗ್ಗೆ ಹೇಳುತ್ತೇನೆ, ವಲಯ ಮುಖ್ಯ ಇಂಜಿನಿಯರ್‌ಗಳ 16 ಹುದ್ದೆಗಳನ್ನು ಸೃಷ್ಟಿ ಮಾಡಿದ್ದೇವೆ. ಮೈಸೂರು ವಿಭಾಗ ಮತ್ತು ವಿವಿಧ ಜಿಲ್ಲೆಗಳಿಗೆ ನಾಲ್ಕು ವಿಭಾಗಗಳಲ್ಲಿಯೂ ಹಾಕಿದ್ದೇವೆ. ಹೆಚ್ಚುವರಿಯಾಗಿ 220 ಜನರನ್ನು ಹಾಕಿದ್ದೇವೆ. ಇದರ ಉದ್ದೇಶ quality ಆಗಬೇಕು, time bound ಆಗಬೇಕು ಅದನ್ನೆಲ್ಲಾ ನಿರ್ದಿಷ್ಟವಾಗಿ ..ಮೊದಲು ಆರು ತಿಂಗಳಲ್ಲಿ ಈ ಕೆಲಸವನ್ನೇ ನಾವು ಪ್ರಾರಂಭ ಮಾಡಿರುವುದು.

ಶ್ರೀ ಎಂ.ಟಿ. ಕೃಷ್ಣಪ್ಪ:- ಅವರಿಗೆ promotion ಸಿಕ್ಕಿರಲಿಲ್ಲವೇ? ಅವರಿಗೆ re-habilitation ಮಾಡಲಿಕ್ಕೆ ಆ post ಅನ್ನು create ಮಾಡಿರುವಿರಾ?

ಡಾ॥ ಹೆಚ್.ಸಿ. ಮಹದೇವಪ್ಪ:- ಕೃಷ್ಣಪ್ಪನವರೇ, ನಾನು ಬಂದ ಮೇಲೆ promotion ವಿಷಯದಲ್ಲಿ ಯಾರ್ಯಾರಿಗೆ genuine demands ಇವೆ in accordance with the provision of law ಯಾರಿಗೂ wait ಮಾಡದೇ ಕೊಡಬೇಕೆಂದು ಹೇಳಿ we are working. ಒಳಗೆ ಕೆಲಸ ಮಾಡುವವರು Rule 32 ನಲ್ಲಿ ಒಂದು team ನಲ್ಲಿ ಕುಳಿತುಕೊಂಡು ಕೆಲಸ ಮಾಡಿ ಎಂದು

ಹೇಳಿದ್ದೇನೆ. ಹೆಚ್ಚು ಯೋಜನೆಗಳು ಹಾಳಾಗದೆ ಇರುವ ರೀತಿಯಲ್ಲಿ ಕಡಿಮೆ ಹಾಕಿದರೆ ಹಾಳಾಗುತ್ತದೆ, ಜಾಸ್ತಿ ಮಾಡಿದರೆ ಹೋಗುತ್ತದೆ ಎನ್ನುವ ಪ್ರಶ್ನೆಯಲ್ಲ, that is why I have made Tender Committee and Estimate Committee. To marginize the misuse and corruption ಇವತ್ತು ಇದೇ ಉದ್ದೇಶಕ್ಕೆ ಈ ರೀತಿಯ ಯೋಜನೆಗಳನ್ನು ಹಾಕಿರುವುದು.

ಶ್ರೀ ಗೋವಿಂದ ಎಂ. ಕಾರಜೋಳ:- ಒಂದು ನಿಮಿಷ ಸರ್, ಬಹಳ important road, inter-state connectivity ಇದೆ. National Highway 13 ಹೊಸಪೇಟೆಯಿಂದ ಬಿಜಾಪುರದವರೆಗೆ ಈಗಾಗಲೇ four lane ಆಗಿವೆ. ಬಿಜಾಪುರದಿಂದ ಸೋಲಾಪುರ್‌ದವರೆಗೂ sanction ಆಗಿದೆ. ಹೊಸಪೇಟೆ ಚಿತ್ರದುರ್ಗ ಆಗಿಲ್ಲ. ದಯವಿಟ್ಟು ಹೊಸಪೇಟೆ-ಚಿತ್ರದುರ್ಗ four lane ಆಗಬೇಕು.

ಡಾ|| ಹೆಚ್.ಸಿ. ಮಹದೇವಪ್ಪ:- ಹೊಸಪೇಟೆ - ಚಿತ್ರದುರ್ಗ four lane ಆಗಿರಬೇಕು. ನಾನು ನೋಡುತ್ತೇನೆ.

(ಗೊಂದಲ)

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ:- ಸರ್ ಅದು ಆಗಿಲ್ಲ, ಬಹಳ ದಿವಸಗಳಿಂದ ಪೆಂಡಿಂಗ್ ಇದೆ, ಹೊಸಪೇಟೆಯಿಂದ ಚಿತ್ರದುರ್ಗದವರೆಗೆ four lane ಆಗಿಲ್ಲ. ಹಾಗೆ ಬಿಜಾಪುರದಿಂದ ಸೋಲಾಪುರ್‌ದವರೆಗೆ four lane ಆಗಬೇಕು.

(ಗೊಂದಲ)

ಉಪಾಧ್ಯಕ್ಷರು:- ಒಬ್ಬೊಬ್ಬರೆ ಕೇಳಿ.

ಡಾ|| ಹೆಚ್.ಸಿ. ಮಹದೇವಪ್ಪ:- ಆಗುಂಬೆ, ಶಿರಾಡಿಘಾಟ್, ಮಂಗಳೂರು, ಮೂಡಬಿದರೆ ಇವೆಲ್ಲ ಕೊಟ್ಟಿದ್ದೇವೆ ನೋಡಿ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ:- ಹುಬ್ಬಳ್ಳಿ ಬಾಗೇವಾಡಿಗೆ four lane ಆಗಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ:- OK. The lane will always go by PCU. PCU ಎಂದರೆ passenger car unit. ಒಂದು ಲೇನ್ ಇದ್ದರೆ 2,000/- ಎರಡು ಲೇನ್ ಇದ್ದರೆ 6,000/- 4 ಲೇನ್ ಇದ್ದರೆ 15000/- ಮತ್ತು 40000/- ಆಗುತ್ತದೆ. ಲೇನ್‌ಗಳನ್ನು ನಮ್ಮ ಬಿ.ಆರ್. ಪಾಟೀಲರು ಅಗಲ ಮಾಡಿ ಎಂದು ಹೇಳಿದರು. The lane will always go by PCU. Passenger car unit. ಒಂದು ಲೇನ್ ಹೋದರೆ 3.5 ಇದ್ದಾಗ ಚಿಕ್ಕದಾಗಿರುತ್ತದೆ. ಬಸ್ಸು ಅಥವಾ ಲಾರಿಗಳಿಗೆ ಇರುವ ಅಗಲ 2.2.- 2.5 ಮೀಟರ್. ನಾವು single lane ಮಾಡಿರುವುದು 3.5 ಮೀಟರ್. Wherever PCU is there certainly we will consider such things. PCU ಗಳನ್ನು ಲೇನ್‌ಗಳ ಮೇಲೆ ಮಾಡುವಂಥದ್ದು. ಇನ್ನು ರಸ್ತೆ 20,30 ವರ್ಷಗಳು ಬರಬೇಕೆಂದರೆ again I told ಯಾವರೀತಿ crust ಇರಬೇಕು. ಆ ಮಣ್ಣಿನ ಗುಣಮಟ್ಟ 3% ಗಿಂತ ಕಡಿಮೆ ಇದ್ದರೆ ತುಂಬಾ ಖರ್ಚಾಗುತ್ತದೆ. ಅದರಲ್ಲಿ 6%, 8%, 10% ಇದ್ದರೆ ಕಡಿಮೆ ಹಣ ಖರ್ಚಾಗುತ್ತದೆ. 10, 15, 20 ವರ್ಷಗಳಿಗೆ ಮಾಡಬಹುದು. ನಾವು ಆ crust ಅನ್ನು ಬಲಪಡಿಸಿಕೊಂಡು ಮೇಲಿನ ಎರಡು ಪದರಗಳನ್ನು ಮಾಡಿದರೆ ಕನಿಷ್ಠ 5 ವರ್ಷಗಳಿಗೊಂದು ಸಾರಿ ನೋಡಿಕೊಂಡು ಮಾಡುವ ರೀತಿಯಲ್ಲಿ ನಾವು ಸಧ್ಯದ ಹಣಕಾಸು ಪರಿಸ್ಥಿತಿಗೆ ಬರುತ್ತೇವೆ. ಮತ್ತು ನಾವು ಯಾವರೀತಿ ಕೆಲಸ ಮಾಡುತ್ತಿದ್ದೇವೆ. ನಾವು ಹಿಂದೆ ಎಲ್ಲಾ one third grant ಕೊಡುತ್ತಿದ್ದವು. Now 50% ₹ 5 crore and above ಇದ್ದರೆ 50% ಹಣ ಕೊಡಲೇಬೇಕು. Below ₹ 5 crore 100% ಹಣ ಕೊಟ್ಟುಬಿಡುತ್ತೇವೆ. ನಾವು ಇದೇ first time ಕೊಟ್ಟಿದ್ದು. ಇದೆಲ್ಲಾ ತಮಗೆ ಕೆಲಸ ಮಾಡಿರುವವರಿಗೆ ಗೊತ್ತಿದೆ. One third grant ಅನ್ನೇ ಕೊಡುತ್ತಿದ್ದುದು. After I took over, after government come to power, one thirdಅನ್ನು below ₹ 5 crore full ಕೊಡುತ್ತಿದ್ದೇವೆ. Above ₹ 5 crore 50% grant ಕೊಡುತ್ತೇವೆ. The intention is stipulated timeನಲ್ಲಿ ಆ project ಕೊಟ್ಟಿರುವ ಯೋಜನೆ ಮುಗಿಯಬೇಕೆನ್ನುವುದು. That is the reason.

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ:– ಸಚಿವರೇ National High way ಬಗ್ಗೆ ಹೇಳುತ್ತಿದ್ದೇನೆ.

ಡಾ॥ ಹೆಚ್.ಸಿ. ಮಹದೇವಪ್ಪ:– ಇನ್ನೊಂದು ಹತ್ತು ನಿಮಿಷ ಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಆಮೇಲೆ ಅರ್ಧಗಂಟೆ ಉತ್ತರ ಕೊಡುವಿರಂತೆ ಬಿಡಿ.

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ:– ಹೊಸಪೇಟೆಯಿಂದ ಹುನಗುಂದಗೆ ಆಗಲೇ four way ಆಗಿದೆ ಮತ್ತು ಹುನಗುಂದ ನಂತರ ಬಿಜಾಪುರದವರೆಗೆ ಆಗಿದೆ. ಅದು incomplete ಆಗಿದೆ. ಆದರೆ ಇನ್ನು ಕೆಲವೊಂದು ಕಡೆ ಕೆಲಸಗಳು ಉಳಿದಿವೆ. ಅದು ಮೊನ್ನೆ ಕಳೆದ ಎರಡು ವರ್ಷಗಳ ಹಿಂದೆಯಷ್ಟೇ ರಸ್ತೆ ನಿರ್ಮಾಣವಾಗಿದೆ. ತದನಂತರ ಹೊಸಪೇಟೆಯಿಂದ ಚಿತ್ರದುರ್ಗ ನನಗೆ ಭರವಸೆ ಸಮಿತಿಯಲ್ಲಿ ನಿಮ್ಮ ಇಲಾಖಾಧಿಕಾರಿಗಳು ಹೇಳಿದ್ದಾರೆ, ಏಳು ಬಾರಿ ಟೆಂಡರ್ ಆದರೂ ಸಹ ಯಾರು ಮುಂದೆ ಬಂದಿಲ್ಲ ಆ ಕೆಲಸವನ್ನು ಕೈಗೆತ್ತಿಕೊಂಡಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ, ದಯವಿಟ್ಟು ನಮಗೆಲ್ಲಾ ಆ ಕಡೆಯ ಶಾಸಕರಿಗೆ ಬೆಂಗಳೂರಿಗೆ ಬರುವುದಕ್ಕೆ ಅದೊಂದೆ ರಸ್ತೆ ಇರುವುದು, ಹೊಸಪೇಟೆಯಿಂದ ಚಿತ್ರದುರ್ಗ ಮಾಡಿಕೊಡಬೇಕು. ಇನ್ನೊಂದು ಕಾರವಾರದ ಕಾಗೇರಿ ರಸ್ತೆ ಬಹಳ ಮುಖ್ಯವಾದ ರಸ್ತೆ. ಕಾರವಾರದವರೆಗೆ ಏನು ನಮ್ಮ ಗ್ರಾನೈಟ್ ಕಲ್ಲುಗಳು ಹೋಗುತ್ತವೆ ಅಲ್ಲಿಗೆ ಸಾಗಾಣಿಕೆ ಮಾಡಲಿಕ್ಕೆ ಗದಗ್ ಮತ್ತು ಹುಬ್ಬಳ್ಳಿ ಮೂಲಕ ಹೋಗುವ ರಸ್ತೆ ಏನಿದೆ ಅದು ಬಹುದಿನಗಳ ಬೇಡಿಕೆ ಇದೆ. ಆ ರಸ್ತೆಯನ್ನು ಪ್ರಾರಂಭ ಮಾಡಿ. ಈ ಬಗ್ಗೆ ನಾನು ತಮ್ಮಲ್ಲಿ ಈಗಾಗಲೇ ಮನವಿ ಮಾಡಿಕೊಂಡಿದ್ದೇನೆ.

ಡಾ॥ ಹೆಚ್.ಸಿ. ಮಹದೇವಪ್ಪ:– ದೇವನಹಳ್ಳಿಯ toll ಬಗ್ಗೆ ಹೇಳುತ್ತೇನೆ ಅದಕ್ಕೆ ಬರುತ್ತಿದ್ದೇನೆ. ಉಪಾಧ್ಯಕ್ಷರೆ, ಅವರು ಹೊಸಪೇಟೆ ಹುನಗುಂದ ರಸ್ತೆಯ ಬಗ್ಗೆ ಹೇಳಿದ್ದಾರೆ. ಅದಕ್ಕೆ ಇನ್ನೂ ಯಾರು ಬಂದಿಲ್ಲ, National Highway Authority of Indiaದವರು re-tender ಮಾಡಿದ್ದಾರೆ,

ನಾನು ಸಂಬಂಧಪಟ್ಟ Dr. Mathur ಎನ್ನುವವರು ಇದ್ದಾರೆ, ಅವರ ಜೊತೆಯಲ್ಲಿ ಚರ್ಚೆ ಮಾಡಿ ಅದನ್ನು ಆದಷ್ಟುಬೇಗ ಪ್ರಾರಂಭ ಮಾಡಿಸುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸಚಿವರೆ, ಒಂದು ನಿಮಿಷ, ಈ ಸದಸ್ಯರಿಗೆ ಒಂದು ಮಾತು ಹೇಳಿಬಿಡಿ, ಮಾತು ಯಾರು ಜಾಸ್ತಿ ಆಡುತ್ತೀರಿ, ಅವರಿಗೆ ಮಾತಿನಲ್ಲೇ ಉತ್ತರ, ಮಾತು ಕಡಿಮೆ ಮಾಡಿದವರಿಗೆ ಕೆಲಸದ ಮೇಲೆ ಮಾಡಿಕೊಡುತ್ತೇನೆ ಎಂದು ಹೇಳಿಬಿಡಿ. ಎಲ್ಲಾ ಶಾಸಕರು ಸುಮ್ಮನಾಗಿ ಬಿಡುತ್ತಾರೆ.

ಶ್ರೀ ಪಿ.ಎಂ. ಅಶೋಕ್:– ಸರ್, 2.00 ಗಂಟೆಯಾಯಿತು, ದಯವಿಟ್ಟು ಊಟಕ್ಕೆ ಬಿಟ್ಟು ಆಮೇಲೆ ಕಲಾಪವನ್ನು ಮುಂದುವರೆಸಬಹುದು. ಊಟ ಮಾಡಿದರೆ ಆಮೇಲೆ ಎಲ್ಲಾ ಸುಮ್ಮನಾಗಿಬಿಡುತ್ತಾರೆ. 5–10 ನಿಮಿಷದಲ್ಲಿ ಮುಗಿಸಿ, ಆಮೇಲೆ ಊಟವಾದ ಮೇಲೆ ಬೇಕಾದಷ್ಟು ಜನಕ್ಕೆ ಮಾತನಾಡಲಿಕ್ಕೆ ಅವಕಾಶ ಕೊಡಬಹುದು.

ಉಪಾಧ್ಯಕ್ಷರು:– Almost clarifications ಗೆ ಉತ್ತರ ಕೊಟ್ಟಿದ್ದೀರಿ.

ಡಾ|| ಹೆಚ್.ಸಿ. ಮಹದೇವಪ್ಪ:– ಮಾನ್ಯ ಉಪಾಧ್ಯಕ್ಷರೆ, 1997 ರಲ್ಲಿ ವಾಜಪೇಯಿಯವರ ಕಾಲದಲ್ಲಿ ಟೋಲ್ ದೇಶದಲ್ಲಿ ಜಾರಿಗೆ ಬಂದಿತ್ತು. ಜನ participate ಮಾಡಿ infrastructure build ಮಾಡಿ connectivity establish ಮಾಡುವುದು it is a good project. ಈಗ ಅಲ್ಲಲ್ಲಿ ಟೋಲ್‌ಗಳ ಬಗ್ಗೆ ಮಾತುಗಳು ಪ್ರಾರಂಭವಾಗಿವೆ. Nation building processನಲ್ಲಿ people must participate. It is difficult for any government for that matter to build the nation without the people participation. ಅದನ್ನು ಮಾಡುವಾಗ ವೈಜ್ಞಾನಿಕವಾಗಿ ಮಾಡಬೇಕು, ಶೋಷಣೆಯಾಗದ ರೀತಿಯಲ್ಲಿ ಮಾಡುವ ರೀತಿಯಲ್ಲಿ ಹಿಂದಿನ ಯುಪಿಎ ಸರ್ಕಾರ ಹಾಗು ಈಗಿನ ಸರ್ಕಾರ ಕೂಡ re-think ಮಾಡುತ್ತಿದ್ದಾರೆ. I met Surface Transport Minister then and now. ಮುಂದೆ ನಾವು ಮಾಡುವಾಗ service road is a must.

ಶ್ರೀ ಪಿಳ್ಳ ಮುನಿಶಾಮಪ್ಪ:– Service road ಕೊಡುವುದಾಗಿ ತಾವೇ ಹೇಳಿದ್ದೀರಿ.

ಡಾ॥ ಹೆಚ್.ಸಿ. ಮಹದೇವಪ್ಪ:– ದೇವನಹಳ್ಳಿಯ ಬಗ್ಗೆ ನೀವು ಹೇಳಿರುವ point ನನಗೆ ಜ್ಞಾಪಕ ಇದೆ. ನೀವು ಕುಳಿತುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್:– ಮುಂದೆ ಮಾಡುವಾಗ service road is a must ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. What about the present road?

ಡಾ॥ ಹೆಚ್.ಸಿ. ಮಹದೇವಪ್ಪ:– ಸುರೇಶ್ ಕುಮಾರ್‌ರವರೆ ತಮಗೆ ಗೊತ್ತಿದೆ. ಇವೆಲ್ಲಾ ಕೂಡ ಹಿಂದೆ ಆಗಿರುವುದು. Concession agreement ಇದೆಯೆಲ್ಲಾ, for example...

SRI S. SURESH KUMAR:- When it is against the interest of the stake holder how can we tolerate?

Dr. H.C. MAHADEVAPPA:- No. No. Certainly we can't. Nobody cannot tolerate.

SRI S. SURESH KUMAR:- Then.

Dr. H.C. MAHADEVAPPA:- That is why I appealed to the Union Government to relook in to the aspect and you also should try and all of us will try. Because, it is the business of the Union Government. This is the national toll policy framed during 1997 when Vajpayeeji was Prime Minister.

SRI K. SHIVAMURTHY:- May I request the Minister to allow us to have a break and have the food. We should take the lunch in time. Clarification ಆಮೇಲೆ ಮಾತನಾಡಿ.

Dr. H.C. MAHADEVAPPA:- I am not shifting the responsibility. I am also equally concerned. We will never go by the people those whose who are well off . . . ನಾವೆಲ್ಲಾ movement ನಿಂದ ಬಂದಿರುವವರು. ಸುಮ್ಮನೆ ಏಕೆ?

ಶ್ರೀ ಡಿ.ಸಿ. ತಮ್ಮಣ್ಣ:- ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ರಾಷ್ಟ್ರೀಯ ಹೆದ್ದಾರಿಗಳೇನಿದೆ, it is for the development of the country. Those roads are not for luxury. ತಾವು ಹೇಳಿದ ಹಾಗೆ John F Kennedy ಏನು ನೀವು ಉವಾಚ ಮಾಡಿದ್ದೀರಿ, ಅದು ನಿಜವಾಗಿಯೂ ಸತ್ಯ. ಆದ್ದರಿಂದ, ಇವತ್ತಿನ ನಮ್ಮ ರಾಷ್ಟ್ರೀಯ ಹೆದ್ದಾರಿಗಳಲ್ಲಿ service road ಇಲ್ಲವೇ ಇಲ್ಲ. ರಾಷ್ಟ್ರೀಯ ಹೆದ್ದಾರಿಗಳೆಲ್ಲಾ ಏನಾಗಿದೆ ಎಂದರೆ, ಎರಡೂ ಕಡೆಗಳಲ್ಲಿ ...

ಡಾ|| ಹೆಚ್.ಸಿ. ಮಹದೇವಪ್ಪ:- ಮಾನ್ಯ ತಮ್ಮಣ್ಣನವರೇ, ನಾನು even ದೇವನಹಳ್ಳಿಗೂ ಕೂಡ service road ಮಾಡಬೇಕೆಂದು objection ಹಾಕಿ ಇದೆಲ್ಲಾ ಮಾಡಿ ಕೇಂದ್ರ ಸರ್ಕಾರಕ್ಕೆ ಹೇಳಿ ಮೀಟಿಂಗ್ ಮಾಡಿದ್ದೇನೆ. Our Concessionaire is not agreeable . . ಆದರೆ, ಲೋಕಲ್ ಆಗಿ ಓಡಾಡುವವರಿಗೆ free pass ಕೊಟ್ಟು, one-one time ಬರುವವರಿಗೆ ಕಡಿಮೆ ಮಾಡಬೇಕೆಂದು ಕೆಲವರು ಒಪ್ಪಿದ್ದಾರೆ. Total ಒಪ್ಪಿದ್ದಾರೆ. Again I have to re-appeal to the Union Government.

(ಗೊಂದಲ)

ಶ್ರೀ ಪಿಳ್ಳ ಮುನಿಶಾಮಪ್ಪ (ದೇವನಹಳ್ಳಿ):- ಮಾನ್ಯ ಅಧ್ಯಕ್ಷರೆ, ದೇವನಹಳ್ಳಿಯಲ್ಲಿ ಮಾಡುತ್ತಿಲ್ಲ ಸರ್.

ಡಾ|| ಹೆಚ್.ಸಿ. ಮಹದೇವಪ್ಪ:- ಪರ್ಯಾಯವಾಗಿ ಏನು ರಸ್ತೆಯಿದೆ ಅದನ್ನೂ ಕೂಡ ನಾನು ಸರ್ವೆ ಮಾಡಿಸಿದ್ದೇನೆ.

ಶ್ರೀ ಪಿಳ್ಳ ಮುನಿಶಾಮಪ್ಪ:- ಸುಮಾರು 5 ಕಿ.ಮೀ.ಗೆ ಮಾತ್ರ ಕೊಡುತ್ತಿದ್ದಾರೆ ಬಿಟ್ಟರೆ ಬೇರೆ ಯಾವುದೇ ವ್ಯವಸ್ಥೆ ಮಾಡುತ್ತಿಲ್ಲ ಸರ್.

ಡಾ॥ ಹೆಚ್.ಸಿ. ಮಹದೇವಪ್ಪ:– ಸಾರ್ವಜನಿಕರಿಗೆ ತೊಂದರೆಯಾಗದ ರೀತಿ ಪರ್ಯಾಯ ವ್ಯವಸ್ಥೆ ಮಾಡುತ್ತಿದ್ದೇನೆ. Service road ಎಲ್ಲಿಯವರೆಗೆ ಮಾಡುವುದಕ್ಕೆ ಆಗುತ್ತದೆ ಎಂದು with Secretary and my chief Engineer ಸರ್ವೆ ಮಾಡಿ ಮಾಡುವುದಕ್ಕೆ I am trying sincerely. Toll ವಿಚಾರ ಆಗಿರುವುದರಿಂದ ಮತ್ತೆ ಅಲ್ಲಿಗೆ ಹೋಗಬೇಕು.

ಶ್ರೀ ಬಸವರಾಜ ಬೊಮ್ಮಾಯಿ:– ಡಾಕ್ಟರ್ ನಿಮ್ಮ ಉತ್ತರ ಸಮರ್ಪಕವಾಗಿದೆ. ನೀವು ಎಲ್ಲಾ ಸಮಸ್ಯೆಗಳನ್ನು ಇಲ್ಲಿಯೇ ಬಗೆಹರಿಸಿದ್ದೀರಿ. ನಿಮಗೆ ನಿಜವಾಗಲೂ ಕೂಡ ಅಭಿನಂದನೆ ಸಲ್ಲಿಸುತ್ತೇನೆ. ನಿಮ್ಮಂತಹ ಸಾಮರ್ಥ್ಯ ಇರುವಂತಹವರು ಇದ್ದಾಗಲೇ ಇಂತಹ ಕ್ಲಿಷ್ಟ ಸಮಸ್ಯೆ ಪರಿಸ್ಥಿತಿಗಳನ್ನು ಬಗೆಹರಿಸಬೇಕು ಎನ್ನುವಂತಹ ಆಸೆಯಿಂದ ಶಾಸಕರು ಕೇಳುತ್ತಿದ್ದಾರೆ. ಪ್ರಶ್ನೆ ಇಷ್ಟೆ. ಇಲ್ಲಿ ನೀವು ಏನು ಆಶ್ವಾಸನೆ ಕೊಟ್ಟಿದ್ದೀರಿ ಅದನ್ನು ಮಾಡಿದರೆ ನಾವು ಅಭಿನಂದನೆ ಸಲ್ಲಿಸಿದ್ದಕ್ಕೆ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ನಮಗೆ ಗೊತ್ತಿದೆ. ಡಾ॥ ಮಹದೇವಪ್ಪನವರಿಗೆ ರಸ್ತೆ ಮೇಲೆ ರೈಲ್ ಬಿಡುವುದು ಹೇಗೆ ಗೊತ್ತು ಎಂಬುದು ನಮಗೆ ಗೊತ್ತಾಗುತ್ತದೆ. ಹಾಗೆ ಆಗಬಾರದು ಎಂಬುದು ನಮ್ಮ ಉದ್ದೇಶ.

ಡಾ॥ ಹೆಚ್.ಸಿ. ಮಹದೇವಪ್ಪ:– ಬಸವರಾಜ ಬೊಮ್ಮಾಯಿರವರೆ, ನಾನು ಏನು ಎಂಬುದು ನಿಮಗೆ ಚೆನ್ನಾಗಿ ಗೊತ್ತು. you are a witness. ಬೊಮ್ಮಾಯಿಯವರೇ, you know very well what I am?

ಶ್ರೀ ಬಸವರಾಜ ಬೊಮ್ಮಾಯಿ:– ಊಟಕ್ಕೆ ಟೈಮ್ ಆಗಿದೆ. ದಯವಿಟ್ಟು ಅನುಕೂಲ ಮಾಡಿಕೊಡಿ.

ಡಾ॥ ಹೆಚ್.ಸಿ. ಮಹದೇವಪ್ಪ:– ಇನ್ನು 5 ನಿಮಿಷ ಸಮಯ ಕೊಡಿ.

(ಗೊಂದಲ)

ಶ್ರೀ ಪಿಳ್ಳ ಮುನಿಶಾಮಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು single side ಹತ್ತು ರೂಪಾಯಿಗಳು ಮತ್ತು double side ಇಪ್ಪತ್ತು

ರೂಪಾಯಿಗಳನ್ನು ಕಡಿಮೆ ಮಾಡಿಸಿ ಎಂದು ಹೇಳಿದ್ದರು. ದಯವಿಟ್ಟು ಅದನ್ನು . . .

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಅವರಿಗೆ ಹೇಳಿದ್ದೇನೆ. Union Surface Transport Ministry ಗೆ ಕಳುಹಿಸಲಾಗಿದೆ. ಜೊತೆಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಎರಡು lane ಆಗಿದೆ ಎಂದು ಹುಬ್ಬಳ್ಳಿಯ ವಿಷಯ ಹೇಳಿದರು. Concessionaire ಅವರು ಮಾಡಬೇಕು ಇಲ್ಲದಿದ್ದರೆ NHAI ನವರು take over ಮಾಡಬೇಕು. That also we had a meeting. ತಾವು ಹೇಳಿದ ಹಾಗೆ 29 ಕಿ.ಮೀ. ಬೈಪಾಸ್‌ದ್ದು ಅದನ್ನು either the Concessionaire should do it or it should be taken over.

ಶ್ರೀ ಗೋವಿಂದ ಎಂ. ಕಾರಜೋಳ:– ಸರ್ ನಮ್ಮದು ಒಂದು ಮುಧೋಳ ಬೈಪಾಸ್‌ದು ಹೇಳಲಿಲ್ಲ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಈಗಾಗಲೇ land acquisition amount ಕಟ್ಟಿದ್ದೇವೆ.

ಡಾ॥ ಹೆಚ್.ಸಿ. ಮಹದೇವಪ್ಪ:– ಈಗ 32 ಬೈಪಾಸ್‌ಗಳನ್ನು ಮಾಡುವುದಕ್ಕೆ ನಾವು ಹೇಳಿದ್ದೇವೆ. ಅದರಲ್ಲಿ ಮುಧೋಳ ಕೂಡ ಸೇರಿದೆ. ಮುಧೋಳ ಕೂಡ ಬೈಪಾಸ್‌ಗೆ ಸೇರಿದೆ. ಇನ್ನೂ ಬೇಕಾದಷ್ಟು ಹೇಳಬೇಕು ಎಂದು ನನಗೆ ಆಸೆಯಿದ್ದರೂ ಸಮಯವಾಗಿದೆ. ಮರಳಿನ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಹೇಳಿದ್ದಾರೆ. ಬಹಳ ವರ್ಷಗಳಿಂದ ಮರಳಿನ ಬಗ್ಗೆ ಯಾರೂ ತಲೆಕೆಡಿಸಿಕೊಂಡಿರಲಿಲ್ಲ. 2004, 2005, 2006 ರಿಂದ ಈಚೆಗೆ slow ಆಗಿ ದೊಡ್ಡ ಮಾಫಿಯಾ ಆಗಿ ಪರಿವರ್ತನೆಯಾಗಿದೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಮಂತ್ರಿಗಳೆ, ಒಂದೇ ಸೆಕೆಂಡ್‌ನಲ್ಲಿ ಹೇಳುತ್ತೇನೆ. ಮರಳಿನ ನೀತಿ ತರಬೇಕಾದಾಗ ಎಲ್ಲಾ ತಾಲ್ಲೂಕುಗಳಲ್ಲಿಯೂ small farmers ಗೆ ಅವರವರ ಅವಶ್ಯಕತೆಗೆ . . .

ಡಾ॥ ಹೆಚ್.ಸಿ. ಮಹದೇವಪ್ಪ:– ನಾನು ಹೇಳುತ್ತೇನೆ ಬಿಡಿ ಚಲುವರಾಯಸ್ವಾಮಿ. ನೀವು ಹೇಳಿದ್ದಕ್ಕೆ ನಾನು ಹೇಳಿದೆ.

ಶ್ರೀ ಎನ್. ಚಲುವರಾಯಸ್ವಾಮಿ:- ಅವರವರ ಅವಶ್ಯಕತೆಯ ಲಭ್ಯತೆಯನ್ನು ಕೊಡಿಸಿ ನೀವು ಮಾಡಿ. ಅದನ್ನು ಬಿಟ್ಟು ಕಾನೂನನ್ನು ಜಾರಿಗೆ ತಂದು ರೈತರನ್ನು ಜೈಲಿಗೆ ಹಾಕುವುದು, ಕಳ್ಳರನ್ನು ಮರಳು ತೆಗೆದುಕೊಂಡು ಹೋಗಿ ಎಂದು ಹೇಳುವುದು. ನೀವು ಇಲ್ಲಿ ಚರ್ಚೆ ಮಾಡಿದಷ್ಟೂ ಪೊಲೀಸ್‌ನವರಿಗೆ ಲಾಭವಾಗುತ್ತದೆ. ಚರ್ಚೆ ಮಾಡಬೇಡಿ.

ಡಾ॥ ಹೆಚ್.ಸಿ. ಮಹದೇವಪ್ಪ:- ನಾನು ಹೇಳುತ್ತೇನೆ ಬಿಡಿ. ನಾನು 1985ನೇ ಇಸವಿಯಲ್ಲಿ ಈ ಮನೆಗೆ ಮೊದಲು ಗೆದ್ದು ಬಂದಾಗ ನಮ್ಮ ತಾಲ್ಲೂಕು ನರಸೀಪುರದಲ್ಲಿ ವ್ಯಾಪಕವಾಗಿ ಮರಳು ಇತ್ತು. 2004-05ನೇ ಸಾಲಿನವರೆಗೆ ನನಗೆ ಈ ತರಹ ಮಾಫಿಯಾ ನಡೆಯುತ್ತಿದೆ ಎಂಬುದು ಗೊತ್ತೇ ಇಲ್ಲ. ಈ ತರಹ ಹೀಗೆ ದುಡ್ಡು ಬರುತ್ತದೆ, ಈ ತರಹ ಮಾಫಿಯಾ ನಡೆಯುತ್ತದೆ ಎಂಬುದು ಗೊತ್ತಿಲ್ಲ. Really, we don't know. Directly or indirectly none of us do not know anything about sand. 2005 ರ ನಂತರ ಅಲ್ಲಿ huge ಗಲಾಟೆಯಾಗಿ ಮುಚ್ಚುಗಳನ್ನೆಲ್ಲಾ ಹಿಡಿದುಕೊಂಡು ಕೇರಳಕ್ಕೆ ಹೋದವರ ಮೇಲೆ ಗಲಾಟೆಯಾದಾಗ ನನ್ನ ಮಗ ಕೇಳಿದ ಅದಕ್ಕೆ ಅವನ ಮೇಲೆ ಕೇಸ್ ಹಾಕಿದರು. ಅವನು ಅಡ್ಡ ಬರುತ್ತಿದ್ದಾನೆ ಎಂದು ಕೇಸ್ ಕೊಟ್ಟರು. ಲೋಕಾಯುಕ್ತಕ್ಕೆ ಕೊಟ್ಟರು. ಲೋಕಾಯುಕ್ತ ಎಲ್ಲಾ enquiry ಮಾಡಿತು. ಇದರಲ್ಲಿ ಸಾಕ್ಷಿ ಆಧಾರವಿಲ್ಲವೆಂದು ಕೈಬಿಟ್ಟರು. ಇದನ್ನು ಹಿಡಿದುಕೊಂಡು ಇವರ ಹುಡುಗರು ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ಹುಡುಗ ಇದ್ದಾರೆ ಎಂದು ಹೇಳುತ್ತಿದ್ದರು. ಆದರೆ ಆ ಹುಡುಗರಿಗೆ ಸಂಬಂಧವಿಲ್ಲ. ಮಾಫಿಯಾವನ್ನು ಸದೆಬಡಿಯಬೇಕು ಎಂದರೆ ಒಂದು ವ್ಯವಸ್ಥೆಗೆ ಹೇಗೆ ವಿರುದ್ಧವಾಗಿ ಹೋಗುತ್ತಾರೆ ಎಂಬುದು ಗೊತ್ತಾಗುತ್ತದೆ. ಅದನ್ನು ಪ್ರೋಗ್ರಾಮ್ ಮಾಡುತ್ತಾರೆ. ಸಾಕ್ಷಿ ಇಲ್ಲ, ಆಧಾರವಿಲ್ಲ, ಪುರಾವೆಯಿಲ್ಲ, ಲೋಕಾಯುಕ್ತ ಏನಿಲ್ಲವೆಂದು ಈ vested interest . . .

ಶ್ರೀ ಎಸ್. ಸುರೇಶ್ ಕುಮಾರ್:- ರಾಜ್ಯದಲ್ಲಿ ಎಲ್ಲರಿಗೂ ಒಂದು ವಿಶ್ವಾಸವಿದೆ. ಈ ಮರಳು ಲಾಬಿಗೆ ಇತಿಶ್ರೀ ಹಾಕುವುದಕ್ಕೆ ಕೇವಲ ಡಾ॥ ಮಹದೇವಪ್ಪನವರಿಂದ ಮಾತ್ರ ಸಾಧ್ಯ ಎಂದು ಇದೆ.

ಡಾ॥ ಹೆಚ್.ಸಿ. ಮಹದೇವಪ್ಪ:- Sir, day one ರಿಂದ ನಾವು ಇದನ್ನೇ fight ಮಾಡುತ್ತಿದ್ದೇವೆ. We have never indulged, we have never allowed. We will not allow.

ಶ್ರೀ ಎಸ್. ಸುರೇಶ್ ಕುಮಾರ್:- ನಿಮ್ಮ ಒಬ್ಬರಿಂದ ಮಾತ್ರ ಇದು ಸಾಧ್ಯ. ಬೇರೆ ಯಾರಿಂದಲೂ ಸಾಧ್ಯವಿಲ್ಲ. You will be knowing the culprits. So ದಯವಿಟ್ಟು ಅದನ್ನು ನಿಲ್ಲಿಸಿ.

ಡಾ॥ ಹೆಚ್.ಸಿ. ಮಹದೇವಪ್ಪ:- ನೋಡಿ ನೀವು sarcastic ಆಗಿ ಹೇಳಬೇಡಿ.

ಶ್ರೀ ಎಸ್.ಸುರೇಶ್ ಕುಮಾರ್:- ಇಲ್ಲ. ನಾನು ಬಹಳ ಪ್ರಾಮಾಣಿಕವಾಗಿ ಕೇಳುತ್ತಿದ್ದೇನೆ. ನಿಮಗೆ ಶಕ್ತಿಯಿದೆ. ನಿಲ್ಲಿಸಿ.

ಡಾ॥ ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ಅವರದ್ದು ಇದ್ದಗಲೂ ಒಂದು ನೀತಿ ಇತ್ತು. ನಿನ್ನೆ ಮಧ್ಯ ಪ್ರವೇಶ ಮಾಡಿ ಹೇಳಿದ್ದೇನೆ. ನಾವು ಬಂದಮೇಲೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಆಯಿತು. ಆ ಸಬ್ ಕಮಿಟಿಯಲ್ಲಿ ಅನೇಕ ಐತಿಹಾಸಿಕತೆ . . . environment clearance ತೆಗೆದುಕೊಳ್ಳಬೇಕು, ಕುಡಿಯುವ ನೀರು ಹೋಗುತ್ತಿದೆ, ಅಂತರ್ಜಲ ಹಾಳಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಹೇಳಿತು. ಆ ಕೋರ್ಟ್ ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಏನೇನು ಆಗುತ್ತಿದೆ ಎಂದು ನಾನು ಸರ್ಕಾರಕ್ಕೆ ಲೆಟರ್ ಬರೆದಿದ್ದೆ when I was in the opposition side. ಎಲ್ಲಾ detail ಆಗಿ ಬರೆದು ಮಾನ್ಯ ಉದಾಸಿಯವರಿಗೆ ಹೇಳಿ, ಸರ್ಕಾರಕ್ಕೆ ಹೇಳಿ, ಡಿ.ಸಿ. ಯವರಿಗೆ ಎಲ್ಲಾ ಹೇಳಿದ್ದೆ. ಆಮೇಲೆ ನಾನು ಅಲ್ಲಿಗೆ ಬಂದಮೇಲೆ ಅದನ್ನೆಲ್ಲಾ ನೋಡಿ ಈ ತರಹ ನೀತಿಯನ್ನು ತಂದಿದ್ದೇನೆ, ಪಾಯಿಂಟ್‌ಗಳನ್ನು ಗುರುತು ಮಾಡಿದ್ದೇವೆ.

ಶ್ರೀ ಪಿಳ್ಳ ಮುನಿಶಾಮಪ್ಪ:- ಮಾನ್ಯ ಅಧ್ಯಕ್ಷರೆ, ನನಗೆ answer ಕೊಡಲೇ ಇಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ:- ಅದು ಕೇಂದ್ರ ಸರ್ಕಾರದಲ್ಲಿದೆ. ನಾನು ಏನೇನು ಮಾಡಬೇಕೆಂದು request ಮಾಡಿದ್ದೇನೆ. ಮತ್ತೆ ಇನ್ನೊಂದು ಸಲ ಹೋಗಿ ಕೇಳುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಪಿಳ್ಳ ಮುನಿಶಾಮಪ್ಪ:- ಸರ್ ಪೂರ್ತಿ ಹೇಳುವುದನ್ನು ಕೇಳಿಬಿಡಿ ಸರ್. 13ನೇ ತಾರೀಖು 5ನೇ ತಿಂಗಳು 2014ರಲ್ಲಿ ತಾವೇ ಒಂದು ಹೇಳಿಕೆ ಕೊಟ್ಟಿದ್ದೀರಿ.

ಡಾ|| ಹೆಚ್.ಸಿ. ಮಹದೇವಪ್ಪ:- ಹೌದು ಅದನ್ನೇ ಹೇಳಿದ್ದೇವೆ.

ಶ್ರೀ ಪಿಳ್ಳ ಮುನಿಶಾಮಪ್ಪ:- 10 ರೂಪಾಯಿಗಳು single ಗೆ, double ಗೆ 20 ರೂಪಾಯಿಗಳು ಆ ರೀತಿ ಹೇಳಿದ್ದೀರಿ. ಎಲ್ಲಾ ವೈಜ್ಞಾನಿಕವಾಗಿ ಎಂದು ಹೇಳುತ್ತೀರಲ್ಲಾ, ಎಲ್ಲಾ ಅವೈಜ್ಞಾನಿಕವಾಗಿ ಮಾಡಿರುವುದಕ್ಕೆ ತಾವು ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ?

ಡಾ|| ಹೆಚ್.ಸಿ. ಮಹದೇವಪ್ಪ:- ಜನರ ಪರವಾಗಿ ಕೇಂದ್ರ ಸರ್ಕಾರಕ್ಕೆ request ಮಾಡಿದ್ದೇವೆ. ಆ toll ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. National Highway Authority of India ಕ್ಕೆ ಬರುತ್ತದೆ.

ಶ್ರೀ ಪಿಳ್ಳ ಮುನಿಶಾಮಪ್ಪ:- ಕೈಚೆಲ್ಲುವಂತಹ ಅವಶ್ಯಕತೆ ತಮಗೆ ಇಲ್ಲ. ತಮಗೂ ಜವಾಬ್ದಾರಿಯಿದೆ.

ಡಾ|| ಹೆಚ್.ಸಿ. ಮಹದೇವಪ್ಪ:- ನಾವು ಮರಳಿನ ವಿಚಾರದ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಜಗದೀಶ್ ಶೆಟ್ಟರ್ ಅವರು ಮತ್ತು ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ.

ಉಪಾಧ್ಯಕ್ಷರು:- ಅದು Central Governmentಗೆ ಸಂಬಂಧಪಟ್ಟಿದ್ದು ಎಂದು ಹೇಳುತ್ತಿದ್ದಾರೆ. ಅಲ್ಲಿನ ಪಾಲಿಸಿ ಎಂದು ಅವರು ಹೇಳುತ್ತಿದ್ದಾರೆ. ಅದನ್ನೇ ಒತ್ತಾಯ ಮಾಡುತ್ತಿದ್ದೀರಿ?

ಶ್ರೀ ಪಿಳ್ಳ ಮುನಿಶಾಮಪ್ಪ:– ಅವೈಜ್ಞಾನಿಕವಾಗಿ ಕಿ.ಮೀ.ಗೆ 10 ರೂಪಾಯಿಗಳಾದರೆ, 65 ಕಿ.ಮೀ.ಗಳು ಆಗುತ್ತದೆ. ಸರ್ 75 ರೂಪಾಯಿಗಳನ್ನು ಮಾಡಿದ್ದಾರೆ. 10 ರೂಪಾಯಿಗಳನ್ನು ಆದರೂ ಕಡಿಮೆ ಮಾಡಿಸುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿ.

ಡಾ|| ಹೆಚ್.ಸಿ. ಮಹದೇವಪ್ಪ:– ಸರ್ ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ನಾನು ಜನರಿಗೆ ಆಗುತ್ತಿರುವ ಕಷ್ಟವನ್ನು ನೋಡಿ ಮೀಟಿಂಗ್ ಮಾಡಿ ಚರ್ಚೆ ಮಾಡಿದ್ದೇನೆ. ಅವರು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ.

ಶ್ರೀ ಪಿಳ್ಳ ಮುನಿಶಾಮಪ್ಪ:– ಹಾಗಾದರೆ service road ಗೂ ಇಲ್ಲವೇ? ಅವರ ಇಚ್ಛೆ ಪ್ರಕಾರ ಹಣ ಹೆಚ್ಚಿಗೆ ಮಾಡಿದ್ದಾರೆ. ಯಾರಿಗೂ ಸಾರ್ವಜನಿಕರಿಗೆ ಬಡವರಿಗೆ ಹೋಗುವುದಕ್ಕೆ ಅವಕಾಶವಿಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ:– ನಾನು ಮಾತನಾಡಿ ನೀವೂ ಮಾತನಾಡಿದರೆ ಹೇಗಪ್ಪ ಆಗುತ್ತದೆ? ನಾನು ಮಾತನಾಡುತ್ತೇನೆ, ನೀವು ಮಾತನಾಡುತ್ತೀರಿ ಹೇಗೆ? What are you doing? ನಾನು ಮೀಟಿಂಗ್ ಮಾಡಿದ್ದೇನೆ. ಈ ಚರ್ಚೆಯಾದ ತಕ್ಷಣವೇ ನಾನು ದಿಲ್ಲಿಯಲ್ಲಿದ್ದೆ. ಇದೇ ವಿಷಯಕ್ಕೆ ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರನ್ನು ಭೇಟಿ ಮಾಡಿ, ಜನರಿಗೆ ತೊಂದರೆಯಾಗುತ್ತದೆ, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಸರ್ ಏಕಾಏಕಿ ಹೆಚ್ಚಿಸಿರುವುದರಿಂದ . . . . It is the longest escalator in the country. 2009–10ರಲ್ಲಿ in agreement based on the Court direction by the then Government. ಅದು ಆದಮೇಲೆ ನಾನು ಒಳ್ಳೆಯ ಉದ್ದೇಶದಿಂದ...ಏಕಾಏಕಿ ಹೆಚ್ಚಿಸಿದ್ದರಿಂದ ಸಾರ್ವಜನಿಕರಿಗೆ ಅದು ಭಾರವಾಯಿತು. ಅದಕ್ಕೆ ಅಲ್ಲಿರುವವರಿಗೆ localರವರಿಗೆ concession ಕೊಡಬೇಕು. ಎರಡೂ ಕಡೆಗಳಲ್ಲಿ service road ಮಾಡಬೇಕು. ಆಮೇಲೆ signal free toll ಹಾಕಬೇಕು, ಇಷ್ಟೆಲ್ಲಾ conditions ಹಾಕಿ ನಾನು proceedings ಮಾಡಿ ಕೇಂದ್ರ ಸರ್ಕಾರಕ್ಕೆ ಅವರು ಮಾಡಲೇ ಬೇಕು ಎಂದು ಹೇಳಿದಾಗ concession is not agreeable. So I am

requesting again the Surface Transport Ministry to reconsider the issue. ಅದನ್ನು ಮಾಡುತ್ತಿದ್ದೇವೆ. It is in the reach of the Surface Transport Ministry, Government of India. The State Government will persuade the matter time and again. ಸರ್ ಆಮೇಲೆ ಈ ಅಕ್ರಮ ಮರಳು ಸಾಗಾಣಿಕೆ ಒಟ್ಟು 11,811 ಪ್ರಕರಣಗಳಲ್ಲಿ 1795 ಲಕ್ಷ ರೂ. ರಷ್ಟು ದಂಡ ಹಾಕಿದ್ದೇವೆ ಮತ್ತು 504 ಮೊಕದ್ದಮೆ ಹಾಕಿದ್ದೇವೆ. ಅಕ್ರಮ ಮರಳು ದಾಸ್ತಾನಿನಲ್ಲಿ ಒಟ್ಟು 539 ಪ್ರಕರಣಗಳಲ್ಲಿ 221 ಲಕ್ಷ ರೂಪಾಯಿಗಳ ದಂಡ ವಸೂಲು ಮಾಡಲಾಗಿದೆ. 111 ಮೊಕದ್ದಮೆ ದಾಖಲು ಮಾಡಿಕೊಂಡಿದ್ದೇವೆ. 853 ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೇವೆ. Filter ಮರಳಲ್ಲಿ 807 ಪ್ರಕರಣಕ್ಕೆ ಕೇಸ್ ಹಾಕಿ, 137 ಲಕ್ಷ ರೂಪಾಯಿಗಳ ದಂಡ ಹಾಕಿ ವಸೂಲು ಮಾಡಿ 268 ಮೊಕದ್ದಮೆ ಮಾಡಿದ್ದೇವೆ. ಆದರೂ ಸಹ ಈ ದಂಧೆಯನ್ನು ತಪ್ಪಿಸುವುದಕ್ಕೆ ಸರ್ಕಾರ ಖಂಡಿತವಾಗಿ ಗೂಂಡಾ ಕಾಯಿದೆಯನ್ನು ತಂದು ಯಾರ್‍ಯಾರು ಇಲ್ಲಿ indulge ಆಗಿದ್ದಾರೆ, ಅವರನ್ನು ಬಿಡದೇ ಮಟ್ಟಾ ಹಾಕದೇ ಇದ್ದರೆ ಇಲ್ಲಿನ ಪರಿಸರ, ಯುವಕರು, ಗೂಂಡಾಯಿಸಂ ಮತ್ತು ನಮ್ಮ ಅಂತರ್ಜಲ, ನಮ್ಮ infrastructure ಉಳಿಯುವುದಿಲ್ಲ. ಗೂಂಡಾಯಿಸಂಗೆ ಕಾಯಿದೆ ತಂದು ಖಂಡಿತವಾಗಿ ನಾವು ಮಾಡುತ್ತೇವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಪ್ರಚೋದನೆ ಕೊಡತಕ್ಕಂತಹ ಅಧಿಕಾರಿಗಳನ್ನು ಸಹ ಗೂಂಡಾ ಕಾಯಿದೆ ತಂದು ಮಾಡಬೇಕು. ಅವರಿಗೆ ಅವರದ್ದೂ ಸಹ support ಇದೆ.

ಡಾ|| ಹೆಚ್.ಸಿ. ಮಹದೇವಪ್ಪ:– ಬಹಳಷ್ಟು ಜನ ಸದಸ್ಯರು ಒಂದು ಪ್ರಮುಖವಾದಂತಹ ವಿಷಯದ ಬಗ್ಗೆ 1997ನೇ ಇಸವಿಯ ವಿಷಯದ ಬಗ್ಗೆ...

ಶ್ರೀ ಅಪ್ಪಾಜಿ ಎಸ್. ನಾಡಗೌಡ:– ಒಂದು ನಿಮಿಷ. ಒಂದು clarification ಇದೆ. ಈಗ ತಾವು ಮರಳು ನೀತಿ ಬಗ್ಗೆ ಹೇಳುತ್ತಿದ್ದೀರಿ. ಈಗ ಹೆಚ್ಚಿನ ನೀರಾವರಿ projects ನಡೆದಂತಹದ್ದು ಬಿಜಾಪುರ ಜಿಲ್ಲೆಯಲ್ಲಿ. ಮರಳು ನಮ್ಮಲ್ಲಿ ಕೇವಲ ಭೀಮಾ ಪಾತ್ರದಲ್ಲಿ ಬಿಟ್ಟರೆ ಬೇರೆ ಎಲ್ಲಿಯೂ ಕೂಡ

ಸರಿಯಾದಂತಹ ಮರಳು ಸಿಗುತ್ತಿಲ್ಲ. ಅದನ್ನು classify ಮಾಡಿ, ಮರಳಿನ ಬಗ್ಗೆ ಏನಪ್ಪ ಎಂದರೆ, area ಕಡಿಮೆ ಇದ್ದರೂ ಕೂಡ ಅಲ್ಲಿ ಲೋಕಲ್ PWD ಮತ್ತು ನಿಮ್ಮ ಇಲಾಖೆಯವರು ಅದನ್ನು ತೆಗೆದುಕೊಂಡು ಅಲ್ಲಿ auction ಮಾಡಿದರೆ ಅದು legalize ಆಗುತ್ತದೆ ಮತ್ತು ಜನರಿಗೆ ಅನುಕೂಲವಾಗುತ್ತದೆ. ಅದಕ್ಕೆ A,B,C, grade ಮಾಡಿ . ..

DR. H.C. MAHADEVAPPA:- We have identified the points ಮತ್ತು Environmental Committee Department ದ್ದು clearance ತೆಗೆದುಕೊಂಡು ಸುಪ್ರೀಂ ಕೋರ್ಟ್‌ನಿಂದ judgment ಆಗಿದ್ದರಿಂದ delay ಆಗಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಎ.ಸಿ. ಸಮಿತಿ ಮಾಡಿದ್ದೇವೆ. ಮಾನ್ಯ ಚೆಲುವರಾಯಸ್ವಾಮಿಯವರು ಹೇಳಿದ ಹಾಗೆ ಆ ಮರಳನ್ನು ಸಂಗ್ರಹ ಮಾಡಿದಂತಹ 50% rate ನಲ್ಲಿ ಲೋಕಲ್‌ಆಗಿ ಯಾರು ಮನೆ ಕಟ್ಟುತ್ತಾರೆ ಅವರಿಗೆ ಕೊಡಬೇಕು ಎಂದು ಜಿಲ್ಲಾಡಳಿತಕ್ಕೆ ನಾವು ಅಧಿಕಾರ ಕೊಟ್ಟಿದ್ದೇವೆ. ಅವರು ಏನು ಗಾಡಿಯಲ್ಲಿ ಲೋಡ್ ಮಾಡುತ್ತಿದ್ದಾರೆ, ಮನೆ ಕಟ್ಟುತ್ತಿದ್ದಾರೆ ಅದಕ್ಕೆ ಕೊಟ್ಟಿದ್ದೇವೆ. Government building ಗಳಿಗೆ 10 ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗೆ 50% M-sand ಉಪಯೋಗಿಸಬೇಕೆಂದು ನಾವು ಆರ್ಡರ್ issue ಮಾಡಿದ್ದೇವೆ. ಇದರಲ್ಲಿ iron slag ಇದೆ. ಅದೆಲ್ಲವನ್ನು ಟೆಸ್ಟ್ ಮಾಡಿಸಿದ್ದೇವೆ. ಅದನ್ನು ಕೂಡ ರಸ್ತೆಗೆ 50% ಉಳಿಸಬೇಕೆಂದು ಹೇಳಿದ್ದಾರೆ. ಅಂತಿಮವಾಗಿ ಪರ್ಯಾಯವಾಗಿ ಮರಳು ಸಿಗುವುದು manufactured sand.

ಶ್ರೀ ಜಗದೀಶ್ ಶೆಟ್ಟರ್:- ಅಕ್ರಮ ಮರಳು ಗಣಿಗಾರಿಕೆ ಬಗ್ಗೆ ಹಲವಾರು ವಿಚಾರಗಳನ್ನು ಸದನದಲ್ಲಿ ಚರ್ಚೆ ಮಾಡಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಇದಕ್ಕೆ ಅನೇಕ ಉದಾಹರಣೆಗಳನ್ನು ಸಹ ಕೊಟ್ಟಿದ್ದೇವೆ. ಆನೇಕಲ್ ಬಗ್ಗೆ ಹೇಳಿದ್ದೇವೆ.

ಡಾ|| ಹೆಚ್.ಸಿ. ಮಹದೇವಪ್ಪ:- ಖಂಡಿತಾ ತೆಗೆದುಕೊಳ್ಳುತ್ತೇವೆ. ಅದನ್ನು ಕೊಡಿ. ಹಾವೇರಿ ಜಿಲ್ಲೆ, ರಾಣೇಬೆನ್ನೂರು, ಯಾದಗಿರ್, ಹಿಟ್ಟುವಳ್ಳಿ ಬಗ್ಗೆ ಹೇಳಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:- Filter ಮರಳು ರಾಜಾರೋಷವಾಗಿ ನಡೆಯುತ್ತಿದೆ.

ಡಾ॥ ಹೆಚ್.ಸಿ. ಮಹದೇವಪ್ಪ:- Filter sand it is totally banned. Export of sand to other states is not permitted. Sun set ಆದಮೇಲೆ ಮರಳು ಸಾಗಣೆ ಮಾಡಬಾರದೆಂದು ಮಾಡಿದ್ದೇವೆ ಮತ್ತೆ ಅದನ್ನು online ಮಾಡಿದ್ದೇವೆ. ಪರ್ಮಿಟ್ ಕೊಡುವಾಗ ಒಂದು ಸರಿಯಾಗಿರುವುದನ್ನು ಕೊಟ್ಟರೆ 10-12 ಅನ್ನು fake ಮಾಡುತ್ತಿದ್ದರು. SHPP ಮಾಡೆಲ್ ಕೊಟ್ಟು, ಒಂದಾದ ಮೇಲೆ ಇನ್ನೊಂದು ನಕಲು ಮಾಡುವುದಕ್ಕೆ ಆಗಬಾರದ ರೀತಿಯಲ್ಲಿ ಟೆಕ್ನಾಲಜಿಯನ್ನು introduce ಮಾಡಿದ್ದೇವೆ. Online ನಲ್ಲಿ, ಫೋನ್ ಮಾಡಿದರೆ ಗ್ರಾಹಕರಿಗೆ ಮರಳು ಸಿಗಬೇಕು. No trading. ಗ್ರಾಹಕರು ತೆಗೆದುಕೊಂಡು ಹೋಗುವಂತೆ ಕಟ್ಟು ನಿಟ್ಟಾದ ಕ್ರಮಗಳನ್ನು ಕೈಗೊಂಡಿದ್ದೇವೆ. ಇದಕ್ಕೆ ಬಗ್ಗಲಿಲ್ಲವೆಂದರೆ ಖಂಡಿತವಾಗಿಯೂ ಗೂಂಡಾ ಕಾಯಿದೆ ತಂದು ಈ ಮಾಫಿಯಾವನ್ನು ಸದೆ ಬಡಿಯಲೇಬೇಕು. ಖಂಡಿತವಾಗಿಯೂ ಇದನ್ನು ಮಾಡೇ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:- ಟೆಂಡರ್‌ನ್ನು ಪ್ಯಾಕೇಜ್ ಮಾಡುತ್ತೀರಿ. ಏಕೆ ಪ್ಯಾಕೇಜ್ ಬೇಕು? ರಸ್ತೆಗಳಿಗೆ ಪ್ಯಾಕೇಜ್ ಎಂದು ಕೊಟ್ಟು ಆಂಧ್ರ ಕಂಪನಿಯವರು ಬಂದು ಅರ್ಧಕ್ಕೆ ನಿಲ್ಲಿಸುತ್ತಾರೆ, ಯಾವುದನ್ನೂ complete ಮಾಡುವುದಿಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ:- ಕೃಷ್ಣಪ್ಪ ಅವರೇ ಗಡಿಬಿಡಿ ಮಾಡಬೇಡಿ, ಮರೆತು ಹೋಗುತ್ತೇನೆ. ಪ್ಯಾಕೇಜ್ ಮಾಡಿ ದೊಡ್ಡ ದೊಡ್ಡ ಕಂಪನಿಗಳಿಗೆ ಕೋಡುತ್ತಾರೆಂದು ಅಭಿಪ್ರಾಯವಿದೆ. ನಮ್ಮ ಸ್ಥಳೀಯ contractors ಅನುಕೂಲವಾಗುವ ರೀತಿಯಲ್ಲಿ we will reduce the packages. Minimize ಮಾಡುತ್ತೇವೆ. ಲೋಕಲ್ ಜನ ಬರಬೇಕೆನ್ನುವ ಕಾಳಜಿ ನಮಗೂ ಇದೆ. ಎಷ್ಟೋ ಜನ contractors ಇಲ್ಲೇ ಇದ್ದಾರೆ, ಎಷ್ಟೋ ಜನ ಯುವಕರು

ಅದರಲ್ಲೇ ವೃತ್ತಿ ಮಾಡುವವರಿದ್ದಾರೆ. we will encourage them by bringing down the size of the package. ಒಟ್ಟಾರೆ 25,000 contractors ಇದ್ದು, ಅದರಲ್ಲಿ ಕಡಿಮೆ ಮತ್ತು above ಹಾಕುವವರು ಇದ್ದಾರೆ. ಹಾಗಾಗಿ ಅದಕ್ಕೊಂದು software develop ಮಾಡುತ್ತೇವೆ. ಯಾರಿಗೆ credibility ಇದೆ, ಯಾರು ಎಷ್ಟೆಷ್ಟು ಕೆಲಸ ಮಾಡಿದ್ದಾರೆ ಎನ್ನುವುದನ್ನು ನೋಡಿಕೊಂಡು . . . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಒಂದು ನಿಮಿಷ. ತಾವು 25,000 contractors ಇದ್ದಾರೆಂದು ಹೇಳಿದಿರಿ. ಅವರ ಬಿಲ್ ಪೆಂಡಿಂಗ್ ಎಷ್ಟಿದೆ?

ಡಾ|| ಹೆಚ್.ಸಿ. ಮಹದೇವಪ್ಪ:– ಕುಮಾರಸ್ವಾಮಿ ಅವರೆ, ಮಾರ್ಚ್ ತಿಂಗಳವರೆವಿಗೂ ಎಲ್ಲಾ ಬಿಲ್ಲುಗಳನ್ನು ಕ್ಲಿಯರ್ ಮಾಡಿದ್ದೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಎಲ್ಲವನ್ನೂ ಕ್ಲಿಯರ್ ಮಾಡಿದ್ದೀರಾ?

ಡಾ|| ಹೆಚ್.ಸಿ. ಮಹದೇವಪ್ಪ:– ಹೌದು. You verify, there is no pending bill. 1,260 ಕೋಟಿ ರೂ.ಗಳಿಗಿಂತಲೂ ಹೆಚ್ಚಿಗೆ ಬಿಲ್ ಬಿಟ್ಟು ಹೋಗಿದ್ದರು. ಅದನ್ನು ಮಾರ್ಚ್ ತಿಂಗಳಿಗೆ ಎಲ್ಲಾ ಬಿಲ್ಲುಗಳನ್ನು ಕ್ಲಿಯರ್ ಮಾಡಿದೆವು.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಬಿ. ನಿಂಗಯ್ಯ:– ಹಾಸನ ಮತ್ತು ಮಂಗಳೂರು ಜಿಲ್ಲೆಯದ್ದು ಆಗಿಲ್ಲ. ಆದಷ್ಟು ಬೇಗ ಮಾಡಿ ಕೊಡಿ.

ಡಾ|| ಹೆಚ್.ಸಿ. ಮಹದೇವಪ್ಪ:– ಅಲ್ಲಿ Central Government ಆಡಿಟ್‌ನವರು raid ಮಾಡಿದಾಗ ಅವರಿಗೆ ಲೇಬರ್ ಸರಿಯಾಗಿ ಕೊಟ್ಟಿರುವುದಿಲ್ಲ. ಅವರು ಕೋರ್ಟಿಗೆ ಹೋದ ಮೇಲೆ ಅವರು ಮಾಡಿ ಎಂದು ಹೇಳಿದ್ದಾರೆ. That problem is also been solved. "ಮಾನ್ಯ ಅಧ್ಯಕ್ಷರೆ ನಿಮ್ಮ ಬಗ್ಗೆ ಹೆಮ್ಮೆ ಮತ್ತು ಗೌರವ ಬಹಳ ಕಾಲದಿಂದಲೂ ಇದೆ. ಆದರೆ ನಿನ್ನೆ ವಿಪರೀತ ಸಿಟ್ಟು ಬಂದು ಕಾರಣವೇನೆಂದರೆ; ಈ ಸದನ ಏನಿದೆ, ಇದು ಸಾರ್ವಭೌಮ ಸದನ ಇದು ಯಾರ ಸ್ವತ್ತು ಅಲ್ಲ, ಸ್ವಾರ್ಥಕ್ಕಾಗಿ, ಲಾಭಕ್ಕಾಗಿ ಈ

ಒಂದು ಪ್ರಜಾಪ್ರಭುತ್ವ ವೇದಿಕೆಯನ್ನು ಬಳಸಿಕೊಳ್ಳುವುದಕ್ಕೆ ಬರಲ್ಲ ಎಂದು ಹೇಳಿದ ಮಾತು ಡಾ|| ಅಂಬೇಡ್ಕರ್ ಅವರು ಮಾತನಾಡಿದ ರೀತಿಯಲ್ಲಿತ್ತು." ಹಾಗಾಗಿ ನನಗೆ ಹೆಮ್ಮೆ, ಗೌರವವಿದೆ.

1997ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ ಒಂದು infrastructure develop ಮಾಡಬೇಕೆಂಬ ಪ್ರಯತ್ನಗಳು ನಡೆದು, ರಾಜ್ಯ ಸರ್ಕಾರದ ಸಚಿವ ಸಂಪುಟದ ಸಭೆಯಲ್ಲಿ ದೊಡ್ಡ Infrastructure Build ಮಾಡುವುದಕ್ಕೆ ತೀರ್ಮಾನವಾಯಿತು. ಆಗ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದರು. ಆಗ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸಚಿವ ಸಂಪುಟದ ಸಹೋದ್ಯೋಗಿಗಳಾಗಿದ್ದೆವು. Infrastructure develop ಮಾಡುವುದಕ್ಕೆ 1997 ರ agreement ಒಂದು ಒಳ್ಳೆಯ ಉದ್ದೇಶದಿಂದ ಕೂಡಿತ್ತು. ತದನಂತರದ ದಿನಗಳಲ್ಲಿ 40–50 ಕಿ.ಮೀ. ಬಿಟ್ಟರೆ ಎಲ್ಲವೂ ಹಾಗೆಯೇ ಉಳಿದು ಬಿಟ್ಟಿತು. ಅದಕ್ಕೆ ಎಷ್ಟು ಜಾಗ ಬೇಕು, ಇತ್ಯಾದಿ ಎಲ್ಲವೂ 1997ರ framework agreement ನಲ್ಲಿ guidelines ಎಲ್ಲವೂ ಇದೆ. ಅದಕ್ಕೆ ಮಾನ್ಯ ಸದಸ್ಯರುಗಳು, ಸಾರ್ವಜನಿಕರು, ಸಂಘಟನೆಗಳು, ರಾಜಕೀಯ ಪಕ್ಷದ ಮುಖಂಡರು ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಾ, ಮಾಡುತ್ತಾ, ಅನುಮಾನಗಳನ್ನು ಹುಟ್ಟಿಸುತ್ತಾ, ಹುಟ್ಟಿಸುತ್ತಾ, ಆ ಕಂಪನಿಯ ಮಾಲೀಕರೋ ಅಥವಾ Director ಆಗಿದ್ದಾರೋ ನನಗೆ ಗೊತ್ತಿಲ್ಲ. ಅವರು ಈ ಮನೆಯ ಗೌರವಾನ್ವಿತ ಸದಸ್ಯರಾಗಿದ್ದಾರೆ. ಅವರೂ ಒಂದು ಫೈಲ್ ಅನ್ನು ತೆಗೆದುಕೊಂಡು ಒಂದು, I will clarify all doubts ಎಂದು ಹೇಳುತ್ತಾರೆ. ನಮ್ಮ ಸದಸ್ಯರುಗಳು ಸಹ ಸರ್ಕಾರ ಈಗ ಕೊಡಿ, ಆಗ ಕೊಡಿ ಎಂದು ಹೇಳುತ್ತಾರೆಂದು ಹೇಳುತ್ತಾರೆ. ಅವೆಲ್ಲವುಗಳಿಗೆ ತೆರೆಎಳೆಯುವುದಕ್ಕೆ ಪಾರದರ್ಶಕವಾಗಿ we will welcome builders, investors, to invest and to build infrastructure in the state. The State Government will support. We will stand by them. The practice should be ethical. It should be according to the provisions of the law and agreement. ಅದಕ್ಕಾಗಿ ಎಲ್ಲಾ ಅನುಮಾನಗಳು ಹೋಗಬೇಕೆಂದು ಹೇಳಿ "ಸದನ ಸಮಿತಿ" ಮಾಡಬೇಕೆಂದು ಸದನ ಏನು

ಹೇಳಿದೆ, ಸರ್ಕಾರ ಯಾರ ಕೈಗೊಂಬೆಯೂ ಅಲ್ಲ, ಯಾರ ಹಿಡಿತದಲ್ಲಿಯೂ, ಯಾರ ಹಂಗಿನಲ್ಲಿಯೂ ಇಲ್ಲ, ಸದನ ಸಮಿತಿ ಮಾಡಿ ಒಂದು ತೀರ್ಮಾನ ಬರಲಿ ಎನ್ನುವುದಕ್ಕೆ ಸರ್ಕಾರವು ಒಪ್ಪಿರುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸದನ ಸಮಿತಿಗೆ ಕಾಲ ಮಿತಿಯನ್ನು ಹಾಕಿ.

ಅಧ್ಯಕ್ಷರು:– ಅದನ್ನು ಮಾಡೋಣ ಬಿಡಿ.

ಶ್ರೀ ಸತೀಶ್ ಸೈಲ್ ಕೃಷ್ಣ (ಉತ್ತರಕನ್ನಡ):– ಮಾನ್ಯ ಅಧ್ಯಕ್ಷರೆ, ಕಳಪೆ ಕಾಮಗಾರಿ ಆಗುವುದಕ್ಕೆ ಕಾರಣವೇನೆಂದರೆ; below ಹೋಗುವುದೇ ಆಗುತ್ತದೆ. Below ಹೋಗುವುದಕ್ಕೆ ಒಂದು ಕ್ಯಾಪ್ ಮಾಡಿ ಏಕೆಂದರೆ estimated cost ಇರುತ್ತದೆ.

ಡಾ॥ ಹೆಚ್.ಸಿ. ಮಹದೇವಪ್ಪ:– That is why I constituted an estimate committee instead of single person, a committee will look into all these aspects.

ಅಧ್ಯಕ್ಷರು:– OK., Good.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ತಾವು ಮತ್ತು ಇಡೀ ಸದನ ಒಂದೂವರೆ ದಿನಕ್ಕಿಂತ ಹೆಚ್ಚು ಕಾಲ ಲೋಕೋಪಯೋಗಿ ಇಲಾಖೆಯ ಮೇಲೆ ರಾಜಕೀಯವನ್ನು ಬೆರಸದೆ ಅಭಿವೃದ್ಧಿ ಮಾಡುವುದಕ್ಕೆ ಉತ್ತಮವಾದ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿರುತ್ತಾರೆ. ಸರ್ಕಾರದ ಬದ್ಧತೆ Infrastructure develop ಮಾಡುವುದು, Network ಅನ್ನು establish ಮಾಡುವುದು, Economical Activities involve ಮಾಡುವುದು, Tourism encourage ಮಾಡುವುದು, Education ಮಾಡುವುದು. Ultimately state should be benefited and thre agenda of development should be on the priority. ಅದಕ್ಕಾಗಿ ಎಲ್ಲಾ ರೀತಿಯಲ್ಲಿ ಪ್ರಯತ್ನಗಳನ್ನು ಮಾಡಿದ್ದೇವೆ. 2014–15ನೇ

ಸಾಲಿನ ನಮ್ಮ Demands ಗೆ ಈ ಸದನ ಒಪ್ಪಗೆ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– OK., **ಅಧ್ಯಕ್ಷರು:–** ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ

ದಿನಾಂಕ: 31.03.2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ: 20ಕ್ಕೆ ಸಮಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವ್ನೂ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮೊಬಲಗನ್ನು ಮಂಜೂರು ಮಾಡುತ್ತದೆ.

ಪ್ರಸ್ತಾವದ ಪರವಾಗಿರುವವರು “ಹೌದು” ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು “ಇಲ್ಲ” ಎಂದು ಸೂಚಿಸಬೇಕು

ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ ಎಮದು ಭಾವಿಸುತ್ತೇನೆ

ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶಕ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಸಂಖ್ಯೆ: 20– ಲೋಕೋಪಯೋಗಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2014 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ “ಲೋಕೋಪಯೋಗಿ” ಇದಕ್ಕೆ ಸಂಬಂಧಿಸಿದ

ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 258986.05 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಅಧ್ಯಕ್ಷರಿಗೆ ಹಾಗೂ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಬಹಳ ವರ್ಷಗಳಿಂದ ಇರುವಂತಹ ಒಂದು ಹೋರಾಟಕ್ಕೆ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು:– ಈಗ ಸದನವನ್ನು ಪುನಃ 3 ಗಂಟೆ 15 ನಿಮಿಷಕ್ಕೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮದ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಭೋಜನ ವಿರಾಮದ ನಂತರ 3.ಗಂಟೆ 30 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು:– ಉತ್ತರ ಪ್ರಾರಂಭಿಸಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– ಮಾನ್ಯ ಉಪಾಧ್ಯಕ್ಷರೆ, ನನಗೆ ಎರಡೇ ಎರಡು ನಿಮಿಷ ಅವಕಾಶ ಕೊಡಿ. ನಾನು ಇಡೀ ಸದನದಲ್ಲಿ ಮಾತನಾಡಿಲ್ಲ. ನನ್ನ ಕ್ಷೇತ್ರ. . .

ಉಪಾಧ್ಯಕ್ಷರು:– ಪಾಟೀಲರೆ, ಉತ್ತರದ ನಂತರ clarification ಸಮಯದಲ್ಲಿ ಕೇಳಿ. Discussion close ಆಗಿದೆ. ಅಲೋ ಮಾಡುವುದಕ್ಕಾಗುವುದಿಲ್ಲ. ನೀವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ (ದೇವರ ಹಿಪ್ಪರಗಿ):– ನೀರಾವರಿ ಯೋಜನೆಗಳು ಆಗತಕ್ಕಂತಹ ಭಾಗದಿಂದ ನಾವು ಬಂದಿದ್ದೇವೆ. ಮಾನ್ಯ

ಉಪಾಧ್ಯಕ್ಷರೆ ನಾನು ತಮ್ಮಲ್ಲಿ ವಿನಂತಿ ಮಾಡಿದ್ದೆ, ತಾವು ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ. ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ, ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾವು ಆ ಭಾಗದಿಂದ ಬಂದಿರುವವರು. ನಾನು ಈ ಸದನದಲ್ಲಿ ಒಂದೇ ಒಂದು ಪದ ಮಾತನಾಡಿಲ್ಲ. ನಾನು ಆ ಕ್ಷೇತ್ರದಿಂದ ಬರುವುದರಿಂದ ನಮಗೆ ಹೆಚ್ಚಿನ ಪ್ರಮಾಣದ ನೀರಾವರಿ ಏರಿಯಾ ಬರುತ್ತದೆ. ನಮಗೆ ತಾವು ಅವಕಾಶ ಮಾಡಿಕೊಡಬೇಕು. ಐದೇ ನಿಮಿಷ ಅವಕಾಶ ಕೊಡಿ ನಾನು ಜಾಸ್ತಿ ಮಾತನಾಡುವುದಿಲ್ಲ. only five minutes ಅದಕ್ಕಿಂತ ಒಂದು ನಿಮಿಷ ನಾನು ಜಾಸ್ತಿ ಮಾತನಾಡುವುದಿಲ್ಲ.

ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ, ನಾನು ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಇವತ್ತು ಬಹುತೇಕ ಕರ್ನಾಟಕ ರಾಜ್ಯದಲ್ಲಿ ಬಹಳ ಪ್ರಮುಖವಾದ ನದಿ ಕೃಷ್ಣಾ ನದಿ. ಆದರೆ ಏಕೋ ಗೊತ್ತಿಲ್ಲ ವಿದಾನಸಭೆ ಅಧಿವೇಶನದಲ್ಲಿ ಚರ್ಚೆ ಮಾಡಿರತಕ್ಕಂತಹ ಸಮಯ ನೋಡಿದರೂ ಕೂಡ 64ವರ್ಷಗಳಲ್ಲಿ ಕೃಷ್ಣೆ ಬಗ್ಗೆ ಬಹಳ ಕಡಿಮೆ ಚರ್ಚೆಯಾಗಿದೆ. ಕಳೆದ ಬಾರಿ ಅಧಿವೇಶನದಲ್ಲಿ ಒಂದೆರಡು ಬಾರಿ ಚರ್ಚೆಯಾಗಿರುವುದು ಬಿಟ್ಟರೆ ಹಿಂದೆ ಒಂದು ಸಾರಿ ಮಾತ್ರ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆಯಾಗಿತ್ತು. ನಾನು ಏಕೆ ಈ ಮಾತುಗಳನ್ನು ಹೇಳುತ್ತೇನೆಂದರೆ, 100ಕ್ಕೆ 60% ಭಾಗ ಕೃಷ್ಣ ಬೇಸಿನ್‌ನಲ್ಲಿ ಬರುತ್ತದೆ. ಆದರೆ ಮೊನ್ನೆ ತೀರ್ಪು ಬಂದ ಮೇಲೆ ಸಾಕಷ್ಟು ಸಾರಿ ಈ ಸರ್ಕಾರದ ಗಮನಕ್ಕೆ ತಂದಿದ್ದೇವೆ. ವಿಶೇಷಾಗಿ ಬಿಜಾಪುರ ಜಿಲ್ಲೆಗೆ ನೀರಿನ ಹಂಚಿಕೆ ಮಾಡತಕ್ಕಂತಹ ಸಂದರ್ಭದಲ್ಲಿ ಏನು ತೀರ್ಪು ಬಂದಿದೆ ಆ ಸಂದರ್ಭದಲ್ಲಿ ಅನ್ಯಾಯವಾಗಿದೆ, ಅದರ ಬಗ್ಗೆ ಸರ್ಕಾರ ಗಂಭೀರವಾದ ಚಿಂತನೆಗಳನ್ನು ಮಾಡಬೇಕು. ಬಿಜಾಪುರ ಜಿಲ್ಲೆಗೆ ಆಗಿರತಕ್ಕಂತಹ ಅನ್ಯಾಯವನ್ನು ಏಕೆ ಸರಿಪಡಿಸಬೇಕೆಂದರೆ, ಪ್ರಮುಖವಾಗಿ ಕೃಷ್ಣ ಬೇಸಿನ್‌ಗೆ 60% ನೀರಾವರಿ ಆಗತಕ್ಕಂತಹ ಏರಿಯಾ ನಾರಾಯಣಪುರ ಮತ್ತು ಆಲಮಟ್ಟಿ ಡ್ಯಾಂ ಏನು ಕಟ್ಟಿದ್ದಾರೆ ಅಲ್ಲಿ ಭೂಮಿ ಮುಳುಗಿರತಕ್ಕಂಥದ್ದು, ಹಳ್ಳಿಗಳು ಮುಳುಗಿರತಕ್ಕಂಥದ್ದು ಅವಳಿ ಬಿಜಾಪುರ

ಜಿಲ್ಲೆ. ಆ ಜನರಿಗೆ ಇವತ್ತಿಗೂ ಕೂಡ ನಾವು ಕುಡಿಯುವ ನೀರು ಕೊಟ್ಟಿಲ್ಲ. ಇದು ಬಹಳ ಗಂಭೀರವಾದುದು. ನಾನು ಮಾನ್ಯ ಮಂತ್ರಿಗಳಲ್ಲಿ ಈ ಸದನದ ಮುಖಾಂತರ ವಿನಂತಿ ಮಾಡುತ್ತೇನೆ ಏಕೆಂದರೆ ಹೋದ ಸಾರಿ ಕೂಡ ನಾವು ಅಧಿವೇಶನದಲ್ಲಿ ಚರ್ಚೆಗೆ ತಂದಿದ್ದೆವು. ನೀರಿನ ಅಲಾಟ್‌ಮೆಂಟ್ ಏನಾಗಿದೆ, ಅದರಲ್ಲಿ ಬಿಜಾಪುರ ಜಿಲ್ಲೆಯ ಜನರಿಗೆ ನೀರಿನ ಹಂಚಿಕೆ ಏನು ಮಾಡುತ್ತೀರಿ ಅದರಲ್ಲಿ ಮುಂಗಾರು ಬೆಳೆಗೆ ರಿಫ್ ಗೆ ಮೊದಲು ಪ್ರಾಶಸ್ತ್ಯವಾಗಿ ನೀರಿನ ಹಂಚಿಕೆಯಾಗಬೇಕು. ಏಕೆಂದರೆ ಇವತ್ತಿನವರೆಗೆ ಅಲ್ಲಿ ನೀರಿನ ಹಂಚಿಕೆಯಾಗಿಲ್ಲ. ನೀವು ಏನೇ ಡ್ಯಾಂಗಳನ್ನು ಕಟ್ಟುವುದಕ್ಕೆ ಹೋಗಬಹುದು ಆದರೆ ಕಾಲುವೆಗಳನ್ನು ಹೀಗೆ ಮಾಡುತ್ತಿದ್ದೀರಿ. ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನಾವೆಲ್ಲರೂ ಶಾಂತ ರೀತಿಯಿಂದ ಕಾಯುತ್ತಿದ್ದೇವೆ ಏಕೆಂದರೆ, ತಾವು ನಮ್ಮ ಜಿಲ್ಲೆಯವರು ಮಂತ್ರಿಗಳಾಗಿದ್ದೀರಿ, ನಾವೆಲ್ಲರೂ ಕೂಡ ನಿಮಗೆ ಬೆಂಬಲವಾಗಿದ್ದೇವೆ. ನಮ್ಮ ಜಿಲ್ಲೆಗೆ ನೀರಿನ ಹಂಚಿಕೆಯಲ್ಲಿ ಆಗಿರತಕ್ಕಂತಹ ಅನ್ಯಾಯವನ್ನು ನೀವು ಸರಿಪಡಿಸಲೇಬೇಕು. ಒಂದು ವೇಳೆ ಇದು ಆಗದೇ ಹೋದರೆ ಮುಂದೆ ತೊಂದರೆಯಾಗುತ್ತದೆ. ಅದಕ್ಕೆ ನಾನು ವಿನಂತಿ ಮಾಡುತ್ತೇನೆ, ಆದಷ್ಟು ಬೇಗ N Block allotment ಇವತ್ತು A scheme ನಲ್ಲಿ ಆಗಿರತಕ್ಕಂತಹ 173 TMC ಏನಿದೆ. + 138.9 TMC Water ಏನು B Scheme ನಲ್ಲಿ ಆಗಿದೆ, ಅವೆರಡನ್ನೂ ಸೇರಿಸಿ N Block allotment ಅನ್ನು ತೆಗೆದುಕೊಂಡು ಇಡೀ ರಾಜ್ಯಕ್ಕೆ ಆಗಿರತಕ್ಕಂತಹ ಅಲಾಟ್‌ಮೆಂಟ್ ಅನ್ನು ತೆಗೆದುಕೊಂಡು ಅದನ್ನು ನೀವು ಕರೀಫ್ ಮುಂಗಾರು ಬೆಳೆಗೆ ನೀವು ಕೊಡಬೇಕು. ಏಕೆಂದರೆ, ನಮ್ಮಲ್ಲಿ ಬಹಳ ಪ್ರಮುಖವಾಗಿ ಬರಗಾಲ ಬರುವುದು ಮುಂಗಾರಿಗೆ. ಹಿಂಗಾರಿಗೆ ಬರಗಾಲ ಬರುವುದಿಲ್ಲ. ಹಿಂಗಾರು ನಾವು ಹೇಗೋ ಬೆಳೆದುಕೊಳ್ಳುತ್ತೇವೆ. ಮಾನ್ಯ ಗೋವಿಂದ ಕಾರಜೋಳರವರು ಇಲ್ಲಿದ್ದಾರೆ. ಹಿಂಗಾರಿನಲ್ಲಿ ನಾವು ಜೋಳ ಬೆಳೆಯುವುದಕ್ಕೆ ಸ್ವಲ್ಪ ಮಳೆ ಬಂದರೆ ಸಾಕು ನಾವು ಬೆಳೆದುಕೊಳ್ಳುತ್ತೇವೆ. ಆದರೆ ಪ್ರಮುಖವಾಗಿ ಮುಂಗಾರಿಗೆ ನೀರಿನ ಹಂಚಿಕೆ ಆಗಲೇ ಬೇಕು. ಇದನ್ನು ನಾನು ಸರ್ಕಾರಕ್ಕೆ ಮತ್ತು ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ, ನಾವೆಲ್ಲಾ ನಿಮ್ಮ ಜೊತೆಗಿದ್ದೇವೆ. ಅದನ್ನು ಮಾಡಿ.

ಎರಡನೆಯದು ನಾನು ವಿನಂತಿ ಮಾಡುವುದು ಇಲ್ಲಿ ನೀರಾವರಿ ವಿಷಯ ಬಂದಾಗ ಆ ಕಡೆ ಕೂತಾಗ ಕೂಡ ನಾವು ಆಗ್ರಹ ಮಾಡಿದ್ದೇವೆ. ಅದೇ ಆಗ್ರವನ್ನು ಈ ಕಡೆಯಿಂದ ಕೂಡ ನಾವು ಮಾಡುತ್ತೇವೆ. ನಮ್ಮ ಜನರು 64 ವರ್ಷದಿಂದ ಎಲ್ಲವನ್ನೂ ಕಳೆದುಕೊಂಡು ನೀರಾವರಿ ಒಂದೇ ಆಸೆ ಇಟ್ಟುಕೊಂಡು ಕೂತಿದ್ದಾರೆ. ಆದರೆ ನಮ್ಮ ಜನರಿಗೆ ಏನೂ ಕೊಡಬೇಕಾದ ಅವಶ್ಯಕತೆ ಇಲ್ಲ. ಅವರಿಗೆ ನೀರಾವರಿ ಮಾಡಿ ಕೊಟ್ಟರೆ ಸಾಕು ಅವರು ಬದುಕಿಕೊಳ್ಳುತ್ತಾರೆ. ಆದರೆ ಇವತ್ತು ಏನಾಗಿದೆ, ಮೊದಲು ನಮಗೆ A schemeನಲ್ಲಿ ಹಂಚಿಕೆಯಾದ ನೀರನ್ನು ಬೇರೆಯವರು ತೆಗೆದುಕೊಂಡು ಹೋದರು. ಅದಕ್ಕೆ ಅನೇಕ ರಾಜಕೀಯ ಕಾರಣಗಳು ಇವೆ. ಇಲ್ಲಿ ನಾನು ಚರ್ಚೆ ಮಾಡುವುದಕ್ಕೆ ನಿಂತರೆ ಬಹಳ ದೊಡ್ಡ ಗಂಭೀರ ಚರ್ಚೆಯಾಗುತ್ತದೆ. ಅದಕ್ಕೆ ದಾಖಲಾತಿಯೂ ಇದೆ. ಯಾರ್‍ಯಾರು ಹೇಗೇಗೆ ಬಿಜಾಪುರ ಬಾಗಲಕೋಟೆ ಜನರಿಗೆ ನೀರು ಕೊಡದೆ ತೆಗೆದುಕೊಂಡು ಹೋದರು ಎನ್ನತಕ್ಕಂಥದ್ದು ಇದೆ, ಎಲ್ಲೆಲ್ಲಿ ತೆಗೆದುಕೊಂಡು ಹೋದರೂ ಎನ್ನುವುದೂ ಇದೆ, ಯಾರ್‍ಯಾರ ಕಾಲದಲ್ಲಿ ತೆಗೆದುಕೊಂಡು ಹೋದರೂ ಎನ್ನುವುದೂ ಇದೆ. ಆದರೆ ಅದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ವಿನಂತಿ ಮಾಡುತ್ತೇನೆ, ಆದರೆ ಇನ್ನು ಮೇಲೆ ನಾವು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ನೀವೇನಾದರೂ ಮತ್ತೆ ಅದೇ ಒತ್ತಡಗಳಿಗೆ, ಅದೇ ರಾಜಕೀಯ ತಂತ್ರಗಳಿಗೆ ಮಂತ್ರಿಗಳೇನಾದರೂ ಮತ್ತೆ ನೀರಿನ ಹಂಚಿಕೆಯಲ್ಲಿ ನಮ್ಮ ಜಿಲ್ಲೆಗೆ ಅನ್ಯಾಯ ಮಾಡುವುದಕ್ಕೆ ಹೋದರೆ ಅಲ್ಲಿ ಈ ಸಾರಿ ಮತ್ತೆ ನಾವು ಅದಕ್ಕೆ ಒತ್ತಡ ಹಾಕಬೇಕಾಗುತ್ತದೆ. ಅದಕ್ಕೆ ನಾನು ವಿನಂತಿ ಮಾಡುತ್ತೇನೆ. ಈಗೇನು A schemeನಲ್ಲಿ ನಮಗೆ ಬರಬೇಕಾದ ನೀರಿನಲ್ಲಿ ಅನ್ಯಾಯವಾಗಿದೆ, ಅದನ್ನು ಪುನಃ ಹಂಚಿಕೆ ಮಾಡಬೇಕು. ಇದು ಒಂದು. ಎರಡನೆಯದು, projects ಅನ್ನು ತಾವು ಪ್ರಾರಂಭ ಮಾಡಿದಿರಿ, ಇವತ್ತು ಕಳೆದ ಬಾರಿ BJP ಸರ್ಕಾರ ಇತ್ತು ಇದ್ದಂತಹ ಸಂದರ್ಭದಲ್ಲಿ ನಾವು ನೀವು ಎಲ್ಲರೂ ಕೂಡ ಆಗ್ರಹ ಮಾಡಿದೆವು. ಕನಿಷ್ಟ ಒಂದು ವರ್ಷಕ್ಕೆ 10,000 ಕೋಟಿ ರೂ.ಗಳನ್ನು ಆ ಭಾಗಕ್ಕೆ ಕೊಡಬೇಕು ನೀರಾವರಿ ಯೋಜನೆಗಳನ್ನು

ಸಂಪೂರ್ಣ ಮಾಡಬೇಕೆಂದು ಕೇಳಿದೆವು. ಅದಕ್ಕೆ ಚುನಾವಣೆ ಪೂರ್ವದಲ್ಲಿ ಮಂತ್ರಿಗಳಾದಿಯಾಗಿ ನಾವೆಲ್ಲರೂ ಕೂಡ ಹೊಸಪೇಟೆಯಿಂದ ಕೂಡಲಸಂಗಮದವರೆಗೆ ಪಾದಯಾತ್ರೆ ಮಾಡಿದೆವು. ಬಸವಣ್ಣನ ಎದುರಿಗೆ ಪ್ರಮಾಣ ಮಾಡಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ ಈ ಭಾಗದ ಸಂಪೂರ್ಣ ನೀರಾವರಿ ಯೋಜನೆಗಳನ್ನು ಮಾಡಿ ಕೊಡುತ್ತೇವೆಂದು ಬಸವಣ್ಣನ ಎದುರಿಗೆ ಪ್ರಮಾಣ ಮಾಡಿದ್ದೇವೆ. ನಾನು ಈ ಸರ್ಕಾರಕ್ಕೆ ಹಾಗೂ ಮಂತ್ರಿಗಳಿಗೆ ನೆನಪಿಸುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನೀರಾವರಿ ವಿಷಯದಲ್ಲಿ ನಾವು ರಾಜಕೀಯ ಮಾಡುವುದು ಬೇಡ. ನೀರಾವರಿ ವಿಷಯದಲ್ಲಿ ಯಾರೇ ಆಗಿರಲಿ, ಮಾನ್ಯ ಗೋವಿಂದ ಕಾರಜೋಳರವರಿಗೂ ಹೇಳುತ್ತೇನೆ, ನೀವು ನಗಬೇಕಾದ ಅವಶ್ಯಕತೆ ಇಲ್ಲ, ನೀವೂ ಬಹಳ ಕಡಿಮೆ ಖರ್ಚು ಮಾಡಿಲ್ಲ. ಆದರೆ ಈಗಲೂ ನಾನು ನಮ್ಮ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ನಿಮ್ಮ ಜೊತೆಯಲ್ಲಿ ನಾವು ನಿಂತುಕೊಳ್ಳುತ್ತೇವೆ. ರಾಜಕೀಯವಾಗಿ ನಿಮಗೆ ಅವರು ಏನೇ ಮಾಡಬಹುದು, ಆದರೆ ನಾನು ನಿಮ್ಮ ಜೊತೆಯಲ್ಲಿದ್ದೇವೆ. ಇವತ್ತು ನಾನು ವಿನಂತಿ ಮಾಡುತ್ತೇನೆ, ಅಲ್ಲಿರುವಂತಹ 18 ಮತಕ್ಷೇತ್ರಗಳಲ್ಲಿ 17ಕ್ಷೇತ್ರಗಳಲ್ಲಿ ಆಡಳಿತ ಪಕ್ಷದವರನ್ನು ಜನ ಗೆಲ್ಲಿಸಿದ್ದಾರೆ. ಕಾರಣವೇನೆಂದರೆ, ನಾವೇನು ಪಾದಯಾತ್ರೆ ಮಾಡಿ ಜನರಿಗೆ ಮಾತು ಕೊಟ್ಟಿದ್ದೇವೆ, ಆ ಮಾತಿನ ಪ್ರಕಾರ ನಾವು ಇರಬೇಕು. ನಾನು ಮಂತ್ರಿಗಳಿಗೆ ಆಗ್ರಹ ಮಾಡುತ್ತೇನೆ, ಮಂತ್ರಿಗಳ ಜೊತೆಗೆ ನಾನು ಬೆಂಬಲಕ್ಕೆ ನಿಲ್ಲುತ್ತೇನೆ. ನೀರಿನ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಕನಿಷ್ಟ 10,000 ಕೋಟಿ ರೂ.ಗಳನ್ನು UKPಗೆ ಮೀಸಲಾಗಿಡಬೇಕು. ನಾನು ನಿಜವಾಗಿ ನೋವಿನಿಂದ ಈ ಮಾತನ್ನು ಹೇಳಬೇಕಾಗಿದೆ. 2013–14ನೇ ಸಾಲಿನಲ್ಲಿ . . .

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ನಿಮಗೆ ಅಡ್ಡಿ ಮಾಡುವುದಿಲ್ಲ, 10,000 ಸಾಕಾಗುವುದಿಲ್ಲ, ಪ್ರತಿ ವರ್ಷ 20,000 ಇಡಬೇಕು.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– ಅವರು ಇದ್ದಾಗ 5 ವರ್ಷದಲ್ಲಿ 11,000 ಎಕರೆ ನೀರಾವರಿ ಮಾಡಿದ್ದು. ಆದರೆ ನಮ್ಮ ಸರ್ಕಾರ ಬಂದ ಮೇಲೆ

ಕೆನಾಲ್‌ಗಳನ್ನು ಜೋರಾಗಿ ಮಾಡುತ್ತಿದ್ದಾರೆ. ಮಾನ್ಯ ಗೋವಿಂದ ಕಾರಜೋಳರವರಿಗೆ ಗೊತ್ತಿದೆ. ಮತ್ತೆ ರಾಜಕೀಯ ಬೆರೆಸಬೇಡಿ.

ಶ್ರೀ ಗೋವಿಂದ ಎಂ ಕಾರಜೋಳ:– ನೀವು ಮಾತನಾಡುತ್ತಾ ರಾಜಕೀಯದ ಕಡೆ ಹೋಗಬೇಡಿ. ನೇರವಾಗಿ ಇದ್ದದ್ದನ್ನು ಮಾತನಾಡಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– ನಾನು ನೀರಾವರಿ ವಿಷಯದಲ್ಲಿ ನಿಮ್ಮ ಜೊತೆಗಿದ್ದೇನೆ ಬೇರೆ ವಿಷಯದಲ್ಲಿ ಇಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಇವತ್ತು ನಮ್ಮ ಪ್ರಾಜೆಕ್ಟ್ ಮುಗಿಯಬೇಕು, ಯು.ಕೆ.ಪಿ. ಯ ಮೂರನೇ ಹಂತದ ಯೋಜನೆಗಳು ಮುಗಿಯಬೇಕೆಂದರೆ ಹಿಂದಿನ ಸರ್ಕಾರವಿದ್ದಂಥ ಸಂದರ್ಭದಲ್ಲಿ 17200 ಕೋಟಿ ರೂ.ಗಳಿಗೆ ಇವತ್ತು ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದಾರೆ. ಈಗ ಅದು escalation ಆಗಿ ಸುಮಾರು 25 ಸಾವಿರ ಕೋಟಿ ರೂ.ಗಳಾಗಿದೆ. ಇವತ್ತು ನಾನು ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಆದರೆ ನಾನು ಅವರ ಮೇಲೆ ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಅಲ್ಲಿ ನಮ್ಮ ಪರಿಸ್ಥಿತಿ ಏನಾಗಿದೆಯೆಂದರೆ 2013–14 ನೇ ಸಾಲಿನಲ್ಲಿ ನಮ್ಮ ಸರ್ಕಾರ ಬಂದಾಗ ನಮ್ಮ ಕೆ.ಬಿ.ಜೆ.ಎನ್.ಎಲ್.ಗೆ ಕೊಟ್ಟಿರತಕ್ಕಂಥ ದುಡ್ಡು ಎಷ್ಟೆಂದರೆ ಕೇವಲ 3300 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. 3300 ಕೋಟಿ ರೂ.ಗಳಲ್ಲಿ ಅದೂ ಬಿಜಾಪುರ ಜಿಲ್ಲೆಗೆ ಯು.ಕೆ.ಪಿ. ಮೂರನೇ ಹಂತಕ್ಕೆ ಖರ್ಚಾಗಿರತಕ್ಕಂಥದ್ದು 915 ಕೋಟಿ ರೂ.ಗಳು. ಈ ಸಾರಿ ಬಜೆಟ್‌ನಲ್ಲಿ 4100 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಈ ಸಾರಿ ಮಾರ್ಚ್‌ನಿಂದ ಇಲ್ಲಿಯವರೆಗೆ 400 ಕೋಟಿ ರೂ.ಗಳು ಖರ್ಚಾಗಿದೆ. ಇದೇ ವೇಗದಲ್ಲಿಯೇ ಹೋದರೆ ಇನ್ನು 50 ವರ್ಷಗಳು ನೀರಾವರಿ ಯೋಜನೆಗಳನ್ನು ಮುಗಿಸುವುದಕ್ಕೆ ಬೇಕಾಗುತ್ತದೆ. ನಾನು ನಮ್ಮ ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ. ಸಾಲ ತೆಗೆದುಕೊಂಡು ಬನ್ನಿ. ಈ ಹಿಂದೆ ಸಾಲ ತೆಗೆದುಕೊಂಡು ಕಾಮಗಾರಿ ಕೆಲಸಗಳನ್ನು ಮಾಡಿದ್ದಾರೆ. ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಲ ತಂದರೆ ತಪ್ಪಿಲ್ಲ. ಇವತ್ತು ಒಂದ್ಹತ್ತಿಪ್ಪತ್ತು ಸಾವಿರ ಕೋಟಿ ರೂ.ಗಳನ್ನು ಸಾಲ ತಂದಾದರೂ ಸರಿ ಆ ಭಾಗದ ಜನ ಇವತ್ತೇನು ಸನ್ಮಾನ್ಯ ಸಿದ್ದರಾಮಯ್ಯನವರ

ನಾಯಕತ್ವಕ್ಕೆ ಬೆಂಬಲವನ್ನು ಕೊಟ್ಟು, ಅಲ್ಲಿ ಸುಮಾರು ಎಲ್ಲ ಕ್ಷೇತ್ರಗಳಲ್ಲಿ ನಮಗೆ ಬೆಂಬಲವನ್ನು ಕೊಟ್ಟಿದ್ದಾರೆ. ಅವರಿಗೆ ನಾವು ನ್ಯಾಯ ಕೊಡಿಸಬೇಕಿದೆ. ಅದಕ್ಕಾಗಿ ನಾನು ವಿನಂತಿಯನ್ನು ಮಾಡುತ್ತೇನೆ. ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ. ಎಲ್ಲಾ ಶಾಸಕರುಗಳು ನಿಮ್ಮ ಜೊತೆಯಲ್ಲಿದ್ದೇವೆ. ನಾವೆಲ್ಲರೂ ನಿಮ್ಮ ಜೊತೆ ನಿಲ್ಲುತ್ತೇವೆ. ಕನಿಷ್ಟ 10 ಸಾವಿರ ಕೋಟಿ ರೂ.ಗಳನ್ನು ಪ್ರತಿ ವರ್ಷ ಕೆ.ಬಿ.ಜೆ.ಎನ್.ಎಲ್. ನ ಮೂರನೇ ಹಂತದ ಯೋಜನೆಗಳನ್ನು ಸಂಪೂರ್ಣಗೊಳಿಸುವುದಕ್ಕೆ ಸರ್ಕಾರ ಹಣ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಅದರ ಜೊತೆಯಲ್ಲಿ ನಾನು ಕೊನೆಗೆ ಒಂದೇ ಮಾತನ್ನು ಹೇಳುತ್ತೇನೆ. ಇವತ್ತು R&R ಮಾಡುತ್ತಿದ್ದೀರಿ. ನಾನು ವಿನಂತಿ ಮಾಡುತ್ತೇನೆ. R&R ಮಾಡುವಂಥ ಸಂದರ್ಭದಲ್ಲಿ ಹಿಂದೆ ಮಾಡಿದಂಥ ಸಂದರ್ಭದಲ್ಲಿ ಏನಾಯಿತು ಎಂಬ ಬಗ್ಗೆ ಗೋವಿಂದ ಕಾರಜೋಳ್ ಸಾಹೇಬರಿಗೆ ಗೊತ್ತಿದೆ. ಅವರು ಅಲ್ಲಿಯವರೆಗೆ ಬಂದಿದ್ದಾರೆ. ಮೂರು ಮೂರು ಸಾವಿರ ಕೊಟ್ಟು ಅವರನ್ನು ಗುಳೆ ಎಬ್ಬಿಸಿದ್ದಾರೆ. ಆದರೆ ಈ ಸಾರಿ ಆ ರೀತಿಯಾಗಬಾರದು. ಇಲ್ಲಿಯವರೆಗೂ ಅದಕ್ಕೆ ಭೂಮಿ ಬೆಲೆ ನಿಗದಿಯಾಗಿಲ್ಲ. ಎಷ್ಟು ಕೊಡಬೇಕು ಎಂಬುದಕ್ಕೆ ತಕ್ಷಣ ಭೂಮಿ ಬೆಲೆಯನ್ನು ನಿಗದಿ ಮಾಡಬೇಕು. ಅಲ್ಲೇನು ಮುಳುಗಡೆಯಾಗತಕ್ಕಂಥ ಜನರಿದ್ದಾರೆ ಅವರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕಂಥ ಕೆಲಸವಾಗಬೇಕು. ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಇವತ್ತು ಮಂತ್ರಿಗಳು ಇಲ್ಲಿಯೇ ಇದ್ದಾರೆ. ಆದರೆ ಅನೇಕ ಜನ ಹಿಂದೆ ಒಂದು ಪ್ರಾಜೆಕ್ಟ್ ಮಾಡಿಟ್ಟಿದ್ದಾರೆ. ಬೆಳಿಗ್ಗೆ ಕೂಡ ಚರ್ಚೆಗೆ ಬಂತು. ಮಾನ್ಯ ಸಭಾಧ್ಯಕ್ಷರು ಕೂತಿದ್ದಂಥ ಸಂದರ್ಭದಲ್ಲಿ ಆ ಕಡೆಯಿಂದ ಬೊಮ್ಮಾಯಿಯವರು ಮಾತನಾಡುವಂಥ ಸಂದರ್ಭದಲ್ಲಿ ಚರ್ಚೆಗೆ ಬಂತು. ಏನೆಂದರೆ ಪ್ರಾಜೆಕ್ಟ್ ಯಾರೋ ಮಾಡಿಬಿಟ್ಟಿರುತ್ತಾರೆ. ಪ್ರಾಜೆಕ್ಟ್ ಮಾಡಿದ್ದೇ ಬೇರೆ ಇರುತ್ತದೆ, ಇಲ್ಲಿ ಆಗತಕ್ಕಂಥದ್ದೇ ಬೇರೆ ಇರುತ್ತದೆಂದು. ನಾನು ವಿನಂತಿ ಮಾಡುತ್ತೇನೆ. ಅನೇಕ ಜನರಿಗೆ ಆ ಟೆಕ್ನಾಲಜಿಯೇ ಗೊತ್ತಿರುವುದಿಲ್ಲ. ಟೆಕ್ನಿಕಲ್ ನಾಲೆಡ್ಜ್ ಇರುವುದಿಲ್ಲ. ಯಾರೋ ಬಂದು ಪ್ರಾಜೆಕ್ಟ್ ಮಾಡಿರುತ್ತಾರೆ. ಈಗ ನಾವು ಅಲ್ಲಿಂದ

ಆಯ್ಕೆಯಾಗಿ ಬಂದಿರುತ್ತೇವೆ. ನಾವು ಕೂಡ ಇಂಜಿನಿಯರ್‌ಗಳಾಗಿದ್ದೇವೆ, ನಾವೇನೂ ಯಾರೂ ಅನಕ್ಷರಸ್ಥರಲ್ಲ, ನಾವೆಲ್ಲಾ ಇಂಜಿನಿಯರ್‌ಗಳೆ. ಆದರೆ ನಾವು ಹೇಳಿದರೆ ಆರು ವರ್ಷವಾದರೂ ಕೂಡ ಈ ಕಡೆಯಿಂದ ಲೈನ್ ಆ ಕಡೆಗೆ change ಮಾಡುವುದಿಲ್ಲ. ಬ್ಯುರೋಕ್ರಸಿ ಅಷ್ಟರಮಟ್ಟಿಗೆ ನಮ್ಮಲ್ಲಿದೆ. ಇವತ್ತು ಯಾವುದೇ ಒಂದು ಯೋಜನೆಯನ್ನು ಮಾಡುವಂಥ ಸಂದರ್ಭದಲ್ಲಿ ಆ ಜನರಿಗೆ ನ್ಯಾಯ ಕೊಡುವಂಥದ್ದಾಗಬೇಕು. ಉದಾಹರಣೆಗೆ ಹೇಳುತ್ತೇನೆ, ಇವತ್ತು ನಮ್ಮಲ್ಲಿ ಕಪ್ಪು ಭೂಮಿಯಿದೆ. ಅಲ್ಲಿ ನೀರಾವರಿ ಯಶಸ್ವಿಯಾಗಬೇಕಾದರೆ ನಮಗೆ ಮೈಕ್ರೋ ಇರಿಗೇಶನ್, ಡ್ರಿಪ್ ಇರಿಗೇಶನ್ ಆಗಬೇಕು.

ಶ್ರೀ ಗೋವಿಂದ ಎಂ. ಕಾರಜೋಳ್:- ಮಾನ್ಯ ಉಪಾಧ್ಯಕ್ಷರೆ, ಎ.ಎಸ್. ಪಾಟೀಲರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಹಿಂದೆ ರೈತರ ಭೂಮಿಗೆ 2 ಸಾವಿರ, 3 ಸಾವಿರ ಕೊಟ್ಟು ಅವರನ್ನು ಒಕ್ಕಲೆಬ್ಬಿಸಿರತಕ್ಕಂಥದ್ದು ಸತ್ಯ. ಅದಕ್ಕಾಗಿ ನಾವು 1996-97 ರಲ್ಲಿ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಭೂಮಿ ಬೆಲೆ ನಿಗದಿ ಮಾಡುವುದಕ್ಕೆ non officials ಸೇರಿಸಿಯೇ ಕಮಿಟಿ ಮಾಡಿದ್ದೆವು. ಆ ಕಮಿಟಿಯಲ್ಲಿಯೂ ನಾನೂ ಇದ್ದೆ. ಕೃಷ್ಣಾ ನದಿ ದಂಡೆಯಲ್ಲಿ ಬರತಕ್ಕಂಥ ಎಲ್ಲಾ ಶಾಸಕರನ್ನು ಸೇರಿಸಿದ್ದರು. ಡಿವಿಜನಲ್ ಕಮಿಷನರ್ ಅಧ್ಯಕ್ಷರಾಗಿದ್ದರು ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಡೈರೆಕ್ಟರ್‌ರವರು ಮತ್ತು ಸಂಬಂಧಪಟ್ಟ ಆರ್ಥಿಕ ಇಲಾಖೆಯ ಅಧಿಕಾರಿಗಳು, ಹೀಗೆ ಎಲ್ಲರೂ ಸೇರಿದಂತೆ ಒಂದು ಕಮಿಟಿಯನ್ನು ಮಾಡಿದ್ದರು. ಆ ರೀತಿಯ ಕಮಿಟಿಯನ್ನು ಅನೌನ್ಸ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಈ ವಿಷಯದಲ್ಲಿ ಗೋವಿಂದ ಕಾರಜೋಳ್ ಸಾಹೇಬರಿಗೆ ನನ್ನ ಬೆಂಬಲವಿದೆ. ಮಾನ್ಯ ಉಪಾಧ್ಯಕ್ಷರೆ, ನಾನು ಮಂತ್ರಿಗಳಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:- ಮಾನ್ಯ ಕಾರಜೋಳ್‌ರವರೆ, Land Acquisition Act ಗೆ ತಿದ್ದುಪಡಿಯ ಅಗತ್ಯವಿದೆ. ಹೊಸ Land

Acquisition Act ಪ್ರಕಾರ ಅದರ ಅಡಿಯಲ್ಲಿ ನಮ್ಮ ರಾಜ್ಯದಲ್ಲಿ ಏನು ಅದಕ್ಕೆ ರೂಲ್ಸ್‌ನ್ನು ಮಾಡುತ್ತಾರೋ, ಈಗ ತಾವೇನು ಹೇಳಿದಿರಿ ಹೊಸ land reforms ಪ್ರಕಾರ ಮಾಡಿದರೆ ದುಡ್ಡು ಬರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ್:– ನಿಮಗೆ ತಪ್ಪು ಕಲ್ಪನೆಯಿದೆ. 4 ಪಟ್ಟು ಎಂದಿದೆ. ನಾವು ಸಬ್ ರಿಜಿಸ್ಟ್ರಾರ್ ಗೈಡೆನ್ಸ್ ವ್ಯಾಲ್ಯುವಿನ 4 ಪಟ್ಟು ಎಂದಿದೆ. ಇವತ್ತು ಮಾರ್ಕೆಟ್ ವ್ಯಾಲ್ಯುಗೂ ಮತ್ತು ಇದಕ್ಕೂ ಟ್ಯಾಲಿ ಆಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು:– ಪಾಟೀಲರೆ, ನೀವು ಬೇಗ ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜಿಲ್ಲೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ಸಚಿವರನ್ನು ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಕೇವಲ ಪೋಸ್ಟ್ ಕೊಟ್ಟರೆ ಸಾಲದು. ಆ ನೀರಾವರಿ ಸಚಿವ ಪಟ್ಟವನ್ನು ಕೊಟ್ಟು ಅಲ್ಲಿ ನೀವು ದುಡ್ಡು ಕೊಡದೇ ಹೋದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ನಾಳೆ ಅವರಿಗೂ ಕೆಟ್ಟ ಹೆಸರು ಬರುತ್ತದೆ, ಅವರ ಜೊತೆಗೆ ನಿಂತಿರುವ ನಮಗೆಲ್ಲರಿಗೂ ಕೆಟ್ಟ ಹೆಸರು ಬರುತ್ತದೆ. ಅದಕ್ಕಾಗಿ ನಾವು ನಿಮ್ಮಲ್ಲಿ ವಿನಂತಿ ಮಾಡುತ್ತೇವೆ, ಯು.ಕೆ.ಪಿ. ಪ್ರಾಜೆಕ್ಟ್‌ಗೆ ನೀವೇನು ಬಸವಣ್ಣನ ಎದುರಿಗೆ, ನಾವೆಲ್ಲರೂ ಪ್ರತಿಜ್ಞೆ ಮಾಡಿದ್ದೇವೆ, ಏಕೆಂದರೆ ನಮ್ಮ ಭಾಗದಲ್ಲಿರತಕ್ಕಂಥ ಸಮಸ್ಯೆ ಬಹಳ ಗಂಭೀರವಾದುದು. ಅದಕ್ಕಾಗಿ ನಾನು ವಿನಂತಿಯನ್ನು ಮಾಡುತ್ತೇನೆ, ಕನಿಷ್ಟ 10 ಸಾವಿರ ಕೋಟಿ ರೂ.ಗಳನ್ನು ನೀರಾವರಿಗೆ ತೆಗೆದಿಡಬೇಕು. ಆಮೇಲೆ ಮುಂದಿನ 5 ವರ್ಷಗಳಲ್ಲಿ ಕಾಲಮಿತಿಯಲ್ಲಿ ಕೆಲಸವಾಗಬೇಕು. ಅದರ ಜೊತೆಗೆ ನನ್ನ ಕ್ಷೇತ್ರದ ಬೂದಿಹಾಳ್–ಪಿರಾಪುರ್ ಏತ ನೀರಾವರಿ ಯೋಜನೆ ಬಗ್ಗೆ ಮಾನ್ಯ ಮಂತ್ರಿಗಳು ಬಜೆಟ್‌ನಲ್ಲಿ ಅನೌನ್ಸ್ ಮಾಡಿಸಿದ್ದಾರೆ. ಅದರಲ್ಲಿ ಅನೇಕ modifications ಆಗುತ್ತಿವೆ. ಅದರಲ್ಲಿ ನಾನು

ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಬೂದಿಹಾಳ್‌–ಪಿರಾಪುರ್ ಪ್ರಾಜೆಕ್ಟ್‌ನ್ನು ... ನೀವು ಗೋವಿಂದ ಕಾರಜೋಳ್‌ರವರನ್ನು ಕೇಳಿ ಹೇಗೆ ಮಾಡಿಸಬೇಕೆಂದು, ಅವರು ಹೇಳುತ್ತಾರೆ. ಎರಡು ತಿಂಗಳಲ್ಲಿ ಅವರು ಕಾರಜೋಳ ನೀರಾವರಿ ಯೋಜನೆಯ ಪ್ರಾಜೆಕ್ಟ್‌ನ್ನು ಮಾಡಿಮುಗಿಸಿಬಿಟ್ಟರು. ನಾವು ಕಳೆದ ಹನ್ನೆರಡು ತಿಂಗಳಿನಿಂದ ನಿಮ್ಮ ಹಿಂದೆ ಬಿದ್ದಿದ್ದೇವೆ. ಇವತ್ತಿಗೂ ನಮಗೆ ಅಪ್ರುವಲ್ ಸಿಗುತ್ತಿಲ್ಲ. ಅದಕ್ಕಾಗಿ ನಾನು ದಯಮಾಡಿ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ, ಬೂದಾಳ್ ಪಿರಾಪುರ್ ನನ್ನ ಕ್ಷೇತ್ರದಲ್ಲಿ ಬಹಳ ಪ್ರಮುಖವಾದ ಯೋಜನೆ. ಅದನ್ನು ತಾವು ಕೊಡಬೇಕು. ಈ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ನಮ್ಮ ಭಾಗದ ಜನರಿಗೆ ನ್ಯಾಯವನ್ನು ಒದಗಿಸಬೇಕು. ಅಲ್ಲಿ ಕನಿಷ್ಠ 10 ಸಾವಿರ ಕೋಟಿ ರೂ.ಗಳನ್ನು ಮುಂದಿನ ಬಜೆಟ್‌ನಲ್ಲಿ ಅನೌನ್ಸ್ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಮಾತನಾಡುವುದಿಲ್ಲ, ಕೇವಲ ಒಂದೇ ಒಂದು ಸಲಹೆಯನ್ನು ಮಾನ್ಯ ಮಂತ್ರಿಗಳಿಗೆ ನೀಡುತ್ತೇನೆ. ಮಾನ್ಯ ಮಂತ್ರಿಗಳೆ, ನಿನ್ನೆ ನಿಮ್ಮ ಹತ್ತಿರ ಖಾಸಗಿಯಾಗಿ ಮಾತನಾಡಿದ್ದೇನೆ. ಕೆ.ಆರ್.ಎಸ್. ನಿಂದ ಮಾರ್ಕೋನಹಳ್ಳಿಗೆ ಒಂದು ಹೈ ಲೆವೆಲ್ ಕಾಲುವೆ ಮಾಡುವುದರ ಮೂಲಕ flood ಬಂದಾಗ ನೀರು ಬರುವುದರಿಂದ ಹತ್ತು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಶಿಂಷಾ ನದಿಯಲ್ಲಿ ನೀರು ಹರಿಯುತ್ತದೆಂದು ಹೇಳಿದ್ದೆ. ಇನ್ನು ಎರಡನೆಯದಾಗಿ ನಾಗಮಂಗಲ ತಾಲ್ಲೂಕಿಗೆ ನೀರು ಕೊಡುವುದಕ್ಕೆ ಆಗುತ್ತಿಲ್ಲ. ನಮಗೆ ಬೆಳೆಗೆ ಬೇಡ ಕಡೇ ಪಕ್ಷ ಕೆರೆಗಾದರೂ ನೀರು ಬೇಕು, ಕುಡಿಯುವ ನೀರಿಗಾಗಿ, ಹೇಮಾವತಿಯಿಂದ ಸಾಧ್ಯವಾಗುತ್ತಿಲ್ಲ ಎನ್‌ಬಿಸಿ ಮತ್ತು ಟಿಬಿಸಿಯಿಂದ. ದಯಮಾಡಿ ನಾಗಮಂಗಲ ಹೆಚ್.ಎಲ್.ಬಿ.ಸಿ.ಗೆ ಚನ್ನರಾಯಪಟ್ಟಣದಿಂದ ನೇರವಾಗಿ ತೆಗೆದುಕೊಂಡು ಬಂದರೆ ಒಂದಷ್ಟು ನೀವೇನು ಕೊಡುತ್ತೀರೋ ಅಲೋಕೇಶನ್ ಅದರಲ್ಲಿ ನಾವು ಮ್ಯಾನೇಜ್ ಮಾಡುವುದಕ್ಕಾಗುತ್ತದೆ. ನಿಮ್ಮ ಅಧಿಕಾರಿಗಳಿಗೆ ಅದರ ಬಗ್ಗೆ ಡೈರೆಕ್ಷನ್ ಕೊಟ್ಟು tailend ಗೆ ...

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):- ನಿನ್ನೆ ನೀವೇನು ನನಗೆ ಕೊಟ್ಟಿದ್ದೀರೋ ಅದ್ನು ನಾನು ಈಗಾಗಲೇ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ಅದನ್ನು ವೆರಿಫೈ ಮಾಡಬೇಕೆಂದು ಹೇಳಿದ್ದೇನೆ.

ಶ್ರೀಮತಿ ವೈ. ರಾಮಕ್ಕ:- ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿಗಾಗಿ ಎತ್ತಿನಹೊಳೆ ನೀರಾವರಿ ಯೋಜನೆ ಬಗ್ಗೆ ಕೇಳಿ ಕೇಳಿ ಸಾಕಾಯಿತು. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿಲ್ಲದೆ ಎಷ್ಟೋ ಜನರು ವಲಸೆ ಹೋಗುತ್ತಿದ್ದಾರೆ. ಈಗಾಗಲೇ ಸಾವಿರಾರು ಜನರು ವಲಸೆ ಹೋಗಿದ್ದಾರೆ. ನಮ್ಮ ಜನರು ನನಗೆ ಮತ ಹಾಕಿ ಗೆಲ್ಲಿಸಿ ಕಳುಹಿಸಿದ್ದರೂ ಕೂಡ ನಮ್ಮ ಜನರಿಗೆ ಪ್ರೋಯೋಜನವಾಗುತ್ತಿಲ್ಲವೆಂದು ಜನರು ಹೇಳುತ್ತಿದ್ದಾರೆ. ಆದಷ್ಟು ಬೇಗ ಎತ್ತಿನಹೊಳೆ ಯೋಜನೆ ಜಾರಿಗೆ ತಂದು ಕುಡಿಯುವ ನೀರನ್ನು ಒದಗಿಸಬೇಕೆಂದು ನಾನು ನಿಮ್ಮಲ್ಲಿ ಕೋರಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳೆ, ಅವರು ಎತ್ತಿನಹೊಳೆ ಪ್ರಾಜೆಕ್ಟನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳಿದ್ದಾರೆ.

6. ವಿತ್ತೀಯ ಕಾರ್ಯಕಲಾಪಗಳು

2014-15ನೇ ಸಾಲಿನ ಜಲಸಂಪನ್ಮೂಲ ಇಲಾಖೆಯ ಬೇಡಿಕೆಗಳ ಮೇಲೆ ಮಾನ್ಯ ಮಂತ್ರಿಗಳಿಂದ ಉತ್ತರ

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):- ತಮ್ಮ ಪರವಾಗಿ ಹೇಳಿದ್ದಾರೆ.

ಉಪಾಧ್ಯಕ್ಷರು:- ಆಯಿತು. ತಾವು ಉತ್ತರ ಹೇಳಲು ಪ್ರಾರಂಭ ಮಾಡಿ.

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):- ಮಾನ್ಯ ಉಪಾಧ್ಯಕ್ಷರೆ, 2014-15 ನೇ ಸಾಲಿನ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಗಳಿಗೆ ನಾನು ಉತ್ತರಿಸಿ ಮಾಹಿತಿಗಳನ್ನು ನೀಡುತ್ತಿದ್ದೇನೆ. ರಾಜ್ಯದ ಒಟ್ಟು ನೀರಾವರಿ ಪ್ರದೇಶ, ನೀರಾವರಿಯ ವಿಸ್ತೀರ್ಣ 1.92 ಚದರ ಕಿ.ಮೀ.

ನೀರಾವರಿಗೆ ಒಳಪಡುವಂಥ ಪ್ರದೇಶ 61 ಲಕ್ಷ ಹೆಕ್ಟೇರ್. ಅಂದರೆ ಮೂರನೇ ಒಂದು ಭಾಗ 30 perecent ಆಗುತ್ತದೆ. ಬೃಹತ್ ಮತ್ತು ಮಧ್ಯಮ ನೀರಾವರಿಯಡಿಯಲ್ಲಿ 38.9 ಲಕ್ಷ ಹೆಕ್ಟೇರ್ ಬರುತ್ತದೆ, ಅಂದರೆ ನೀರಾವರಿಗೆ ಒಳಪಡಬೇಕಾದಂಥ ಕ್ಷೇತ್ರದಲ್ಲಿ 66%. ಸಣ್ಣ ನೀರಾವರಿ ಸುಮಾರು 10 ಲಕ್ಷ ಹೆಕ್ಟೇರ್ ಬರುತ್ತದೆ. ಒಟ್ಟು ಬಹುಶಃ ಸಣ್ಣ ನೀರಾವರಿ ಇಲಾಖೆ ಅವೆಲ್ಲವನ್ನು ಕೂಡ ಬಹುತೇಕ 99% ಉಪಯೋಗಿಸಿದೆ. ಇನ್ನು ಅಂತರ್ಜಲ ನೀರಾವರಿ, ಅಂದರೆ ಬೋರ್‌ವೆಲ್, ಬಾವಿಗಳ ಮುಖಾಂತರ ಇವತ್ತಿನ ದಿವಸ ನೀರಾವರಿ ಏನು ಮಾಡುತ್ತೇವೋ ಅದು ಸುಮಾರು 16 ಲಕ್ಷ ಹೆಕ್ಟೇರ್ ಎಂದು ಅಂದಾಜು ಮಾಡಲಾಗಿದೆ. ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಯಡಿಯಲ್ಲಿ ಪ್ರಗತಿ ಇರುವಂಥ ಆಗಿರುವಂಥ ಯೋಜನೆಗಳು ಸುಮಾರು 28.36 ಲಕ್ಷ ಹೆಕ್ಟೇರ್, ಅಂದರೆ 38.19% ಇವತ್ತಿನ ದಿವಸ against 38.19 ಲಕ್ಷ ಹೆಕ್ಟೇರ್‌ಗಳಿಗೆ ಅನುಗುಣವಾಗಿ 28..36, ಅಂದರೆ 38.19 ರಲ್ಲಿ 28.36 ಲಕ್ಷ ಹೆಕ್ಟೇರ್ ಇವತ್ತಿನ ದಿವಸ ನಮ್ಮ potential create ಆಗಿದೆ. ಮಾನ್ಯ ಬೊಮ್ಮಾಯಿಯವರು ಇಲ್ಲ. ಬಾಕಿ ಕಾಮಗಾರಿಗಳಿಂದ ನಮಗೆ ನೀರಾವರಿ ಉಳಿದಿರುವುದು ಸುಮಾರು 9.83 ಲಕ್ಷ ಎಂದರೆ 10 ಲಕ್ಷ ಹೆಕ್ಟೇರ್ on going works ನಿಂದ ಆಗಬೇಕು. 10 ಲಕ್ಷ ಹೆಕ್ಟೇರ್ ಏನು ಕಾಮಗಾರಿ ಆಗಬೇಕಾಗಿದೆ, ಅದರಲ್ಲಿ ಯುಕೆಪಿ stage–3, ಅಪ್ಪರ್ ಭದ್ರಾ ಮತ್ತು ಸಿಂಗಟಾಲೂರು ಇವು ಮುಖ್ಯವಾದಂತಹ ಯೋಜನೆಗಳು. ರಾಜ್ಯದ ಜಲಾನಯನ ಪ್ರದೇಶ ಏನಿದೆ, ಕೃಷ್ಣಾ ಬೇಸಿನ್‌ಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಕೊಡುತ್ತಿದ್ದೇನೆ. ಇವತ್ತು 970 ಟಿಎಂಸಿ ನೀರಿನಲ್ಲಿ ಸುಮಾರು 59% ಪ್ರದೇಶ ವ್ಯಾಪ್ತಿಗೆ ನೀರಾವರಿ ಬರುತ್ತದೆಂದು ಅಂದಾಜು ಮಾಡಲಾಗಿದೆ. ಕಾವೇರಿ ಬೇಸಿನ್‌ನಲ್ಲಿ 388 ಟಿಎಂಸಿ ನೀರಿನಲ್ಲಿ 19% ಪ್ರದೇಶ ವ್ಯಾಪ್ತಿಗೆ ನೀರಾವರಿ ಬರುತ್ತದೆ. ಗೋದಾವರಿ ಬೇಸಿನ್‌ನಲ್ಲಿ ಸುಮಾರು 50 ಟಿಎಂಸಿ ನೀರಿನಲ್ಲಿ 2% ಪ್ರದೇಶಕ್ಕೆ ನೀರಾವರಿ ಬರುತ್ತದೆಂದು ಅಂದಾಜು ಮಾಡಲಾಗಿದೆ. ಉತ್ತರ ಪಿನಾಕಿನಿ 4% ವ್ಯಾಪ್ತಿ ಪ್ರದೇಶವಿದ್ದು, ದಕ್ಷಿಣ ಪಿನಾಕಿನಿ 1% ಪ್ರದೇಶ ವ್ಯಾಪ್ತಿ, ಪಾಲಾರ್ 1.5% ವ್ಯಾಪ್ತಿ ಪ್ರದೇಶವಿದ್ದು, ಒಟ್ಟು 32 ಟಿಎಂಸಿ ಇದ್ದರೂ ಕೂಡ ತಮಗೆ ಗೊತ್ತಿದೆ,

ಅಲ್ಲಿ ಇವತ್ತಿನ ದಿವಸ ಯೀಲ್ಡ್ ಬಹಳ ಕಡಿಮೆ ಆಗಿದೆ ಎನ್ನುವ ಮಾಹಿತಿ ತಮಗೂ ಕೂಡ ಇದೆ. ಪಶ್ಚಿಮವಾಹಿನಿ ನದಿಗಳು ಏನಿವೆ ಅದು ಸುಮಾರು 13% ಪ್ರದೇಶ ವ್ಯಾಪ್ತಿ ಬರುತ್ತದೆ, 2,000 ಟಿಎಂಸಿ ಬರುತ್ತದೆ. ಇವತ್ತು ನೀರಾವರಿ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ ಮತ್ತು ಉಪಯುಕ್ತ ಸಲಹೆಗಳು ಬಂದಿವೆ. ನಾನು ಕೆಲವು ಮಾಹಿತಿಯನ್ನು ನೀಡುತ್ತೇನೆ. ಮಾನ್ಯ ಗೋವಿಂದ ಕಾರಜೋಳರವರ ಮೇಲೆ ನಮಗೆ ವಿಶೇಷವಾದ ಪ್ರೀತಿ ಇದೆ. ಅದು ಲಕ್ಷ್ಮಣ ಸವದಿಯವರಿಗೆ ಗೊತ್ತಿದೆ. ಕಳೆದ ನಾಲ್ಕು ವರ್ಷಗಳ ಸಾಲಿನಲ್ಲಿ 2010–11ಕ್ಕೆ ಸಾಧಿಸಿದಂತ . . . .

ಶ್ರೀ ಬಿ.ಎ. ಮೊಹಿದ್ದೀನ್ ಬಾವಾ:– ಮಾನ್ಯ ಅಧ್ಯಕ್ಷರೆ, 2014–15 ರಲ್ಲಿ ಪಶ್ಚಿಮವಾಹಿನಿಯನ್ನು ತೆಗೆದುಕೊಳ್ಳುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್:– ಅದು ಸಣ್ಣ ನೀರಾವರಿ ಇಲಾಖೆಯಲ್ಲಿ ಬರುತ್ತದೆ. ಅದರ ಬಗ್ಗೆ ಉತ್ತರ ಕೊಡುವಾಗ ಮುಂದೆ ಹೇಳುತ್ತೇನೆ. ಮಾನ್ಯ ಕಾರಜೋಳರವರೆ ತಾವು ನೋಟ್ ಮಾಡಿಕೊಂಡರೆ ಒಳ್ಳೆಯದು. ಮಾಹಿತಿಯ ಒಂದು ಕಾಪಿಯನ್ನು ಕೊಡುತ್ತೇನೆ. 2010–11 ರಲ್ಲಿ ಕೃಷ್ಣ ಭಾಗ್ಯ ಜಲ ನಿಗಮಕ್ಕೆ 1,411 ಕೋಟಿ ರೂಪಾಯಿ ಅನುದಾನ ಇತ್ತು, ಅದರಲ್ಲಿ 765 ಕೋಟಿ ರೂಪಾಯಿ ವೆಚ್ಚ ಮಾಡಿದೆ. ಕರ್ನಾಟಕ ನೀರಾವರಿ ನಿಗಮದಲ್ಲಿ 2,147 ಕೋಟಿ ರೂಪಾಯಿ ಅನುದಾನವಿದ್ದು, 2,012.27 ಕೋಟಿ ರೂಪಾಯಿ ಖರ್ಚು ಮಾಡಿದೆ. ಕಾವೇರಿ ನೀರಾವರಿ ನಿಗಮದಲ್ಲಿ 805 ಕೋಟಿ ರೂಪಾಯಿ ಅನುದಾನವಿದ್ದು, 534 ಕೋಟಿ ರೂಪಾಯಿ ಖರ್ಚು ಮಾಡಿದೆ. ನಿಗಮೇತ್ತರ ವಲಯಗಳು, ಈಗ ಅದನ್ನು ನಾವು ಮರ್ಜ್ ಮಾಡಿಕೊಂಡಿದ್ದೇವೆ. ಇವತ್ತು ಯಾವುದೂ ಕೆಲಸ ಉಳಿದಿಲ್ಲ. ಈಗ ಎಲ್ಲಾ ಕರ್ನಾಟಕ ನೀರಾವರಿ ನಿಗಮಕ್ಕೆ ಟ್ರಾನ್ಸ್‌ಫರ್ ಮಾಡಿಕೊಂಡಿದ್ದೇವೆ. ಆಗ 272 ಕೋಟಿ ರೂಪಾಯಿ ಅನುದಾನದಲ್ಲಿ 81 ಕೋಟಿ ರೂಪಾಯಿ ಖರ್ಚು ಮಾಡಿದೆ. ಕಾಡಾದಲ್ಲಿ 129 ಕೋಟಿ ರೂಪಾಯಿ ಅನುದಾನವಿದ್ದು, 111 ಕೋಟಿ ರೂಪಾಯಿ ವೆಚ್ಚ ಮಾಡಿದ್ದು. 4,766 ಕೊಟಿ ರೂಪಾಯಿ 3,506 ಕೋಟಿ ರೂಪಾಯಿ ಖರ್ಚು

ಮಾಡಿದ್ದರು. 2011–12ರಲ್ಲಿ 6,789.95 ಕೋಟಿ ರೂಪಾಯಿ ಅನುದಾನ ಇತ್ತು. ಅದರಲ್ಲಿ ಖರ್ಚು ಮಾಡಿದ್ದು 4,144 ಕೋಟಿ ರೂಪಾಯಿ. 2012–13ರಲ್ಲಿ 7,044 ಕೋಟಿ ರೂಪಾಯಿ ಅನುದಾನವಿದ್ದು, 5,029 ಕೋಟಿ ರೂಪಾಯಿ ಖರ್ಚು ಮಾಡಿದೆ. ನಮ್ಮ ಅವಧಿಯಲ್ಲಿ 2013–14ನೇ ಸಾಲಿನಲ್ಲಿ 8,402 ಕೋಟಿ ರೂಪಾಯಿ ಅನುದಾನವಿದ್ದು, ಅದರಲ್ಲಿ 6,730 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ನಮ್ಮ ಬಜೆಟ್ ಆಗಿರುವುದು ಜುಲೈನಲ್ಲಿ ಎಂದು ತಮಗೆ ಗೊತ್ತಿದೆ. ಫೆಬ್ರವರಿಯಲ್ಲಿ Code of Conduct ಬಂತು. ನಮಗೆ ಏಳು ತಿಂಗಳ ಕಾಲಾವಕಾಶ ಸಿಕ್ಕಿದೆ. ಹಿಂದಿನ ಸರ್ಕಾರ, ಅಂದರೆ peak performance 5th year ಎಂದರೆ ಯಾವುದೇ ಸರ್ಕಾರದಲ್ಲಿ ಅದು ಕೊನೇ ಘಟ್ಟ, ಅತ್ಯಂತ ಹೆಚ್ಚು ಹಣ ಖರ್ಚಾಗಬೇಕು. ಹಿಂದಿನ ಸರ್ಕಾರ ಖರ್ಚು ಮಾಡಿರುವುದು 5,529 ಕೋಟಿ ರೂಪಾಯಿ, ಆದರೆ ನಾವು ಏಳು ತಿಂಗಳಿನಲ್ಲಿ 6,730 ಕೋಟಿ ರೂಪಾಯಿ ಖರ್ಚು ಮಾಡಿದ್ದು, ಅಂದರೆ ನಾವು 1,200 ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಿದ್ದೇವೆ. ನಮ್ಮ ಹಿಂದಿನ ನೀರಾವರಿ ಸಚಿವರಾದ ಬಸವರಾಜ ಬೊಮ್ಮಾಯಿಯವರು potential create ಏನಾಗಿದೆ ಎಂದು ಪ್ರಶ್ನೆಯನ್ನು ಕೇಳುತ್ತಿದ್ದರು. ಈಗ 2011–12ರಲ್ಲಿ 1,30,000 potential create ಆಗಬೇಕಾಗಿತ್ತು, ಆದರೆ 47,894 ಆಗಿದೆ. 2012–13ರಲ್ಲಿ 85,270 ಆಗಬೇಕಾಗಿತ್ತು, 53,743 ಆಗಿದೆ. 2013–14ರಲ್ಲಿ 1,08,590 ನಮ್ಮ ಗುರಿ ಇತ್ತು, ಅದರಲ್ಲಿ 93,851 ನಾವು highest potential create ಮಾಡಿದ್ದೇವೆ. ಯಾವ್ಯಾವುದಕ್ಕೆ ಎಂದು ಕೇಳಿದರೆ, ಅದಕ್ಕೆ detail ಉತ್ತರ ಇದೆ, ಕೊಡು ಎಂದರೆ ಕೊಡುತ್ತೇನೆ. ಉದಾಹರಣೆಗಾಗಿ, 2013–14ಕ್ಕೆ ಇವತ್ತು ರಾಮತಾಣಾದಲ್ಲಿ 5,678, ತಿಮ್ಮಾಪುರದಲ್ಲಿ 4,440, ತಗ್ಗಿ ಸಿದ್ದಾಪುರದಲ್ಲಿ 2,878, ರೋಹಿಣಿ ಮಲ್ಲಿಕೆರೆಯಲ್ಲಿ 1,300, ಚಿಮ್ಮಲಗಿ ಎಲ್ಲಾ ಸೇರಿ 3,211 ಇದೆ. 2014–15ಕ್ಕೆ ಎಂದರೆ ಈ ವರ್ಷಕ್ಕೆ 1,20,000 ಹೆಕ್ಟೇರ್ potential create ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆ ನಿಟ್ಟಿನಲ್ಲಿ ಇವತ್ತು ನಾವು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. 2013–14ನೇ ಸಾಲಿನಲ್ಲಿ ನಾನು ಈಗಾಗಲೇ ಹೇಳಿದ ಹಾಗೆ 8,402ರಲ್ಲಿ 6,730 ಕೋಟಿ

ರೂಪಾಯಿ ಇವತ್ತು ಖರ್ಚು ಮಾಡಿದ್ದೇವೆ. ಕೃಷ್ಣ ಭಾಗ್ಯ ಜಲ ನಿಗಮದಿಂದ 2,556 ಕೋಟಿ ರೂಪಾಯಿಯ ಪ್ರಗತಿಯನ್ನು ಮಾಡಿದ್ದೇವೆ. ಕಾವೇರಿಗೆ ಸಂಬಂಧಪಟ್ಟಂತೆ ಯಾವಾಗ ಎಷ್ಟೆಷ್ಟು ಬಂದಿತ್ತು ಎಂದು ಮೊನ್ನೆ ಚಲುವರಾಯ ಸ್ವಾಮಿಯವರಿಗೆ ಮಾಹಿತಿಯನ್ನು ಕೊಟ್ಟಿದ್ದೇನೆ.

ಶ್ರೀ ಎನ್. ಚಲುವರಾಯಸ್ವಾಮಿ:– ನಮ್ಮ ಕೃಷ್ಣಪ್ಪನವರು 6,000 ಕೋಟಿ ರೂಪಾಯಿಯಲ್ಲಿ ಕಾವೇರಿ ಅಚ್ಚುಕಟ್ಟು ಪ್ರದೇಶಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಿದ್ದೀರೆದು ಕೇಳುತ್ತಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ:– ಕಾವೇರಿ ಬೇಸಿನ್‌ಗೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಿ.

ಶ್ರೀ ಎಂ.ಬಿ. ಪಾಟೀಲ್:– ಅದನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಸಮಯ ಕೊಟ್ಟರೆ ಅದರ ಮಾಹಿತಿಯನ್ನು ಕೂಡ ಮೊದಲಿನಿಂದ ಕೊಡುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ:– ನಮಗೆ ಸತತವಾಗಿ 15 ವರ್ಷಗಳಿಂದ ಕಾವೇರಿ ಬೇಸಿನ್‌ಗೆ ಅನ್ಯಾಯವಾಗುತ್ತಿದೆ.

ಶ್ರೀ ಎನ್. ಚಲುವರಾಯ ಸ್ವಾಮಿ:– ನಮಗೆ ಮೊನ್ನೆ ಮಾಹಿತಿ ಕೊಟ್ಟುಬಿಟ್ಟಿದ್ದೀರಿ. ಬಹಳ ಚೆನ್ನಾಗಿ ಉತ್ತರ ಕೊಡುತ್ತೀರಿ, ಮುಂದುವರೆಸಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಕುಮಾರಸ್ವಾಮಿಯವರು ಬಂದರು, ಈಗ ಬಹಳ ಖುಷಿಯಾಗಿದೆ. ಮಾನ್ಯ ಚಲುವರಾಯಸ್ವಾಮಿಯವರು ಕಾವೇರಿ ನೀರಾವರಿ ನಿಗಮದ ವಿಚಾರದಲ್ಲಿ ಕೇಳುತ್ತಿದ್ದರು. 2010–11ರಲ್ಲಿ 805 ಕೋಟಿ ರೂಪಾಯಿ ಇತ್ತು, ಅದರಲ್ಲಿ 534 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. 2011–12ರಲ್ಲಿ 1,249 ಕೋಟಿ ರೂಪಾಯಿ ಇತ್ತು, ಅದರಲ್ಲಿ 667 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. 2012–13ರಲ್ಲಿ 1,402 ಕೋಟಿ ರೂಪಾಯಿ ಇತ್ತು, ಅದರಲ್ಲಿ ವೆಚ್ಚ ಮಾಡಿದ್ದು 1,038 ಕೋಟಿ ರೂಪಾಯಿ. 2013–14ಕ್ಕೆ 1,455 ಕೋಟಿ ರೂಪಾಯಿ ಇದ್ದು, ಅದರಲ್ಲಿ ಖರ್ಚು ಮಾಡಿದ್ದು

1,224 ಕೋಟಿ ರೂಪಾಯಿ. ಈ ವರ್ಷ 2014–15ಕ್ಕೆ 1800 ಕೋಟಿ ರೂಪಾಯಿ ಅನುದಾನವನ್ನು ಒದಗಿಸಲಾಗಿದೆ. ಕಾಡಾ ಅಡಿಯಲ್ಲಿ ಬರುವುದರ ಬಗ್ಗೆ ಹೇಳುವುದಾದರೆ ಈ ವರ್ಷ ಬಹಳ ಮಹತ್ವದ್ದು. ಸುಮಾರು 1,20,000 ಹೆಕ್ಟೇರ್‌ನಿಂದ 3,00,000 ಹೆಕ್ಟೇರ್ ನಾವು ಕವರ್ ಮಾಡುವುದಕ್ಕೆ ಅವಕಾಶ ಇದೆ. ಮಾನ್ಯ ಕುಮಾರಸ್ವಾಮಿಯವರೆ, ತಾವು potential create ಮಾಡಬೇಕೆಂದು ಏನು ಕೇಳಿದಿರಿ, ಅದಕ್ಕೆ ನಾನು ಉತ್ತರ ಕೊಟ್ಟೆ. ತಾವು ತಡವಾಗಿ ಬಂದಿರಿ. Potential create ಮಾಡುವ ಕಡೆ ನಮ್ಮ ಗಮನ ಇರಬೇಕೆಂದು ಸಲಹೆಯನ್ನು ಕೊಟ್ಟಿದ್ದಿರಿ, ಅದಕ್ಕೆ ಸಂಬಂಧಪಟ್ಟಂತೆ ನಾನು ಉತ್ತರವನ್ನು ಕೊಡುತ್ತಿದ್ದೆ. ಹೋದವರ್ಷ ನಾವು 1,85,090 ರಲ್ಲಿ 93,851 highest potential ನಾವು create ಮಾಡಿ 92% ಮಾಡಿದ್ದೇವೆ. ಈ ವರ್ಷ ನಾವು 1.20ಲಕ್ಷ ಸುಮಾರು 3 ಲಕ್ಷ ಹೆಕ್ಟೇರ್ potential create ಮಾಡುವುದಕ್ಕೆ ಗಮನವನ್ನು ಹರಿಸಿದ್ದೇವೆ. ಕಾಡಾ ಅಡಿಯಲ್ಲಿ 56,627 ಹಕ್ಟೇರ್‌ಗೆ ಒಳಗಾಲುವೆಗಳನ್ನು ನಿರ್ಮಾಣ ಮಾಡಲಾಗಿದೆ. ವಿಶೇಷ ಘಟಕ ಯೋಜನೆ (ಎಸ್‌ಸಿಪಿ)ಯಡಿಯಲ್ಲಿ ನಮಗೆ 533 ಕೋಟಿ ರೂಪಾಯಿ ಗ್ರಾಂಟ್ ಇತ್ತು, 543 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಇಲ್ಲಿ ನೀವು ಗಮನಿಸಬೇಕಾದ ವಿಚಾರ ಎಂದರೆ 10 ಕೋಟಿ ರೂಪಾಯಿ ಜಾಸ್ತಿ ಖರ್ಚು ಮಾಡಿದ್ದೇವೆ. ಆದರೆ ಟಿಎಸ್‌ಪಿ ಸ್ವಲ್ಪ ತೊಂದರೆಯಾಗಿದೆ. ಅದನ್ನು ಈ ವರ್ಷ ಸರಿಪಡಿಸುತ್ತಿದ್ದೇವೆ. ಏಕೆಂದರೆ ನಾವು ಅಲೋಕೇಷನ್ ಮಾಡುವಾಗ 2011 census ತೆಗೆದುಕೊಂಡು ಎಸ್‌ಟಿ ಜನಾಂಗ ಜಾಸ್ತಿ ಇದೆ, ಅದರ ಅನುಗುಣವಾಗಿ ನಾವು ಕೊಡುತ್ತೇವೆ. ಬಹಳಷ್ಟು ಹಣ ಟಿಎಸ್‌ಪಿಯಲ್ಲಿ ಖರ್ಚು ಮಾಡುವುದಕ್ಕೆ ಆಗಿಲ್ಲ. ಕೆಲವು ಕಡೆಗಳಲ್ಲಿ ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳ ಎಲ್ಲೆಲ್ಲಿ ಎಸ್.ಟಿ. ಜನಾಂಗದವರು ಹೆಚ್ಚಿಗೆ ಇದ್ದಾರೆ. ಅದಕ್ಕೆ ಅನುಗುಣವಾಗಿ 2011ರ ಸೆನ್ಸಸ್ ಪ್ರಕಾರ ಕೊಡುತ್ತಿದ್ದೇವೆ. ಅಲ್ಲಿ ಏನಾಗಿದೆಯೆಂದರೆ, ಗಿರಿಜನ ಉಪ ಯೋಜನೆಯಡಿಯಲ್ಲಿ 184 ಕೊಟಿ ರೂ.ಗಳಿತ್ತು, ಅದರ ಬದಲಾಗಿ 93 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಇಲ್ಲಿ ಅರ್ಧದಷ್ಟು ಖರ್ಚಾಗಿದೆ, ಇನ್ನು ಅರ್ಧ it will carry

forward. ನಾವು ಬೆಳಗಾಂ ಅಧಿವೇಶನದಲ್ಲಿ ಕಾನೂನು ಏನು ತಂದಿದ್ದೇವೆ, ಯಾವುದೇ SCP-TSP ಹಣ ಖರ್ಚು ಆಗುದಿಲ್ಲ. ಅದನ್ನು next yearಗೆ carry forward ಆಗುತ್ತದೆ. ಈ ಸಾರಿ ಅದನ್ನು ಬಹಳ scientific ಆಗಿ, ವ್ಯವಸ್ಥಿತವಾಗಿ ಕೆಲಸ ಮಾಡುವಂಥದ್ದನ್ನು ಮಾಡುತ್ತೇವೆ. AIBP ಅಡಿಯಲ್ಲಿ ಗುಡ್ಡದ ಮಲ್ಲಾಪುರ.. .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಈಗ SCP-TSP ಬಗ್ಗೆ ಏನು ಹೇಳುತ್ತಿದ್ದೀರಿ. ಅದರಲ್ಲಿ ಕೆಲವೊಂದು ಕ್ಷೇತ್ರಗಳಲ್ಲಿ, ಈಗ ಉದಾಹರಣೆಗೆ ಅಥಣಿ ಕ್ಷೇತ್ರದಲ್ಲಿ ನಮಗೆ SCPಗೆ, TSPಗೆ ಇಷ್ಟು ಹಣವೆಂದು allocation ಮಾಡಿ ಕೊಡುತ್ತೀರಿ. ನಮ್ಮಲ್ಲಿ almost ಈಗ TSP ಮುಗಿಯುತ್ತಾ ಬಂದಿದೆ. ಅಲ್ಲಿ ಎಸ್.ಟಿ.ಜನಾಂಗಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ. ಅದನ್ನು almost ಎಲ್ಲಾ ಮುಗಿಸಿದ್ದೇವೆ ಇನ್ನು ಹೆಚ್ಚಿಗೆ ಹಣ ಖರ್ಚು ಮಾಡುವುದಕ್ಕೆ ನಮಗೆ ಅವಕಾಶವಿಲ್ಲ. ಅದನ್ನು conversion ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಂ.ಬಿ. ಪಾಟೀಲ್:- ನಾನು ಅದನ್ನು ಹೇಳುತ್ತೇನೆ, ಮುಂದೆ ಅದು ಬರುತ್ತದೆ. ತಾವು ಹೇಳೀದ ಹಾಗೆ ಇವತ್ತಿನ ದಿವಸ population 2011 ಸೆನ್ಸಸ್ ಪ್ರಕಾರ, ಕ್ಷೇತ್ರವಾರು ಎಲ್ಲಾ ಕಡೆಗಳಲ್ಲೂ ಇದ್ದಾರೆ. ಮತ್ತೆ ನಮ್ಮ ಶಾಸಕರ ಅಭಿಪ್ರಾಯವನ್ನು ತೆಗೆದುಕೊಂಡು ಅದನ್ನು conversion ಮಾಡುತ್ತೇವೆ. ಕೆಲವೊಂದು ಕಡೆಗಳಲ್ಲಿ ಎಸ್.ಟಿ.ಜನಾಂಗದವರಿಗೆ ಹೆಚ್ಚಿಗೆ ಹಣ ಬೇಕಾಗುತ್ತದೆ. ಕೆಲವೊಂದು ಕಡೆ 80%, ಕೆಲವೊಂದು ಕಡೆ 90% S.T funds ಕೇಳುತ್ತಾರೆ. ಅದನ್ನು ಈ ಸಾರಿ ಸರಿಪಡಿಸಿಕೊಂಡು ವ್ಯವಸ್ಥಿತವಾಗಿ ಕೊಡುವಂಥ ಕೆಲಸವನ್ನು ಮಾಡುತ್ತೇವೆ. ಇನ್ನು AIBPಯಡಿಯಲ್ಲಿ ಗುಡ್ಡದ ಮಲ್ಲಾಪುರ.. ..

ಶ್ರೀ ಎಸ್. ಚಿಕ್ಕಮಾದು:- ತಾವು ಯಾವುದೇ ಕಾರಣಕ್ಕೂ ಎಸ್.ಸಿ/ಎಸ್.ಟಿ. ಜನರಿಗೆ ಕೊಡುವಂಥ ಹಣವನ್ನು ಯಾವ ಕಾರಣಕ್ಕೂ ಬೇರೆಯವರಿಗೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಅವರಿಗೆ

ಪ್ರತ್ಯೇಕವಾಗಿ ಅನುದಾನ ಕೊಡಿ, TSPಗೆ ಕೊಡುವಂಥ ಹಣವನ್ನು TSP ಜನರು ಎಲ್ಲಿ ಹೆಚ್ಚಿಗೆ ಎಲ್ಲಿದ್ದಾರೆ, ಅಂಥ ಕಡೆಗಳಿಗೆ ಕೊಡಿ.

ಶ್ರೀ ಎಂ.ಬಿ. ಪಾಟೀಲ್:- ನಾವು ಅದನ್ನೇ ಮಾಡುತ್ತಿದ್ದೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ನಾವು ಅದನ್ನೇ ಹೇಳಿದ್ದು, ಎಸ್.ಟಿ.ಜನಾಂಗದವರಿಗೆ ಹೆಚ್ಚು ಕೊಡಿ ಎಂದು ಹೇಳಿದ್ದು, ಆ population ಎಲ್ಲೆಲ್ಲಿ ಜಾಸ್ತಿ ಇದ್ದಾರೆ, ಆ ಪ್ರಕಾರ ಕೊಡಿ ಎಂದು ಹೇಳಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, AIBP ಅಡಿಯಲ್ಲಿ ಗುಡ್ಡದ ಮಲ್ಲಾಪುರ, ಭೀಮಾ ಏತ ನೀರಾವರಿ ಯೋಜನೆ, ವರಾಹಿ ಯೋಜನೆ, ಹಿಪ್ಪರಗಿ ಮತ್ತು ಕಾರಂಜ ಯೋಜನೆಗಳಿಗೆ ಕೇಂದ್ರಸರ್ಕಾರದಿಂದ 199.82 ಕೋಟಿ ರೂ.ಗಳ ನೆರವನ್ನು ಪಡೆದುಕೊಂಡಿದ್ದೇವೆ. ತುಂಗಾ ಮೇಲ್ದಂಡೆ ಯೋಜನೆ ಹಾಗೂ ನಾರಾಯಣಪುರ ಎಡದಂಡೆ ಕಾಲುವೆ ಆಧುನೀಕರಣ ಯೋಜನೆಗಳಿಗೆ ಕೇಂದ್ರ ಜಲ ಆಯೋಗ ಹಾಗೂ ಕೇಂದ್ರ ಯೋಜನಾ ಆಯೋಗದಿಂದ ತೀರುವಳಿಯನ್ನು ಪಡೆದುಕೊಂಡಿದ್ದೇವೆ. NLBC ಮತ್ತು ತುಂಗಾ ಮೇಲ್ದಂಡೆ ಯೋಜನೆಗೆ ನಾವು ಇವತ್ತಿನ ದಿವಸ ಕೇಂದ್ರಸರ್ಕಾರದಿಂದ ಪರವಾನಗಿಯನ್ನು ಪಡೆದುಕೊಂಡಿದ್ದೇವೆ. ಜಲ ಆಯೋಗ ಮತ್ತು CWC ಮತ್ತು ಕೇಂದ್ರ ಯೋಜನಾ ಆಯೋಗದಿಂದ ಪಡೆದುಕೊಂಡಿದ್ದೇವೆ. 2014-15ನೇ ಸಾಲಿಗೆ ಒಟ್ಟು 10,000 ಕೋಟಿ ರೂ.ಗಳ ಅನುದಾನವನ್ನು ಜೂನ್ 2014ರ ಅಂತ್ಯದವರೆಗೆ 2,156 ಕೋಟಿ ರೂ.ಗಳನ್ನು ತುಂಬಿಸಿ, ನಾವು ಆರ್ಥಿಕ ಪ್ರಗತಿಯನ್ನು ಮಾಡಿದ್ದೇವೆ. ಈಗಾಗಲೇ ನಾನು ಹೇಳಿದಂತೆ ಒಂದು ಲಕ್ಷ ಇಪ್ಪತ್ತು ಸಾವಿರ ಹೆಕ್ಟೇರ್‌ನಲ್ಲಿ ಸುಮಾರು 3,000 ಹೆಕ್ಟಾರ್‌ಗೆ ನೀರಾವರಿ ಸಾಮರ್ಥ್ಯ ಕಲ್ಪಿಸುವ ಗುರಿಯನ್ನು ಹೊಂದಿದ್ದೇವೆ. ಅದರಲ್ಲಿ ನಾವು 2011 ಹೆಕ್ಟಾರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯವನ್ನು ಕೊಡುತ್ತಿದ್ದೇವೆ. ಕಾಡಾ ವ್ಯಾಪ್ತಿಯಲ್ಲಿ ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಲ ಕಾಲುವೆ, ಒಂದು ಲಕ್ಷ ಹೆಕ್ಟಾರ್ ಪ್ರದೇಶದಲ್ಲಿ ಬಿ ಸಿ ಕಾಲುವೆ, ಹಾಗೂ 30,000 ಹೆಕ್ಟಾರ್ ಪ್ರದೇಶದಲ್ಲಿ ಸವಳು-ಜವಳು ಭೂಮಿಯ ಅಭಿವೃದ್ಧಿ,

ವಿಶೇಷ ಘಟಕ ಯೋಜನೆಯಡಿಯಲ್ಲಿ 1,181.56 ಕೋಟಿ, ಹಾಗೂ ಗಿರಿಜನ ಉಪ ಯೋಜನೆ ಅಡಿಯಲ್ಲಿ ಸುಮಾರು 443.13 ಕೋಟಿ ರೂ.ಗಳ ಅನುದಾನ, ಕರ್ನಾಟಕ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆ ಕಾರ್ಯಕ್ರಮ K.I.S.W.R.M.I.P ಯೋಜನೆಯಡಿಯಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, AIDB ವತಿಯಿಂದ 150 ಮಿಲಿಯನ್ ಡಾಲರ್ ಅಂದರೆ ಸುಮಾರು 750 ಕೋಟಿ ರೂ.ಗಳ ಸಾಲ ಪಡೆಯುವುದಕ್ಕೆ ಇವತ್ತಿನ ದಿವಸ ಅನುಮೋದನೆಯನ್ನು ಪಡೆದುಕೊಂಡಿದ್ದೇವೆ. ಸಾಲ ಸಂಧಾನಕ್ಕೆ ಕೇಂದ್ರಸರ್ಕಾರದ Department of Economic Affairs ದಿಂದ ದಿನಾಂಕವನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಮೊದಲನೇ ಕಂತಿನಲ್ಲಿ ಗೊಂದಿನಾಲಾ ಅಣೆಕಟ್ಟಿನ ಅಧುನೀಕರಣ ಹಾಗೂ ಎರಡನೇ ಕಂತಿನಲ್ಲಿ ವಿಜಯನಗರ ನಾಲ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳುತ್ತೇವೆ. ನೀರಿನ ಹರಿವನ್ನು ಅಳೆಯಲು ಅತ್ಯಾಧುನಿಕ ತಂತ್ರಜ್ಞಾನದ telemetry ವ್ಯವಸ್ಥೆಯನ್ನು, ನೀರು ಬಳಕೆದಾರರ ಸಂಘವನ್ನು ಬಲಪಡಿಸುವುದು, ತರಬೇತಿ ನೀಡುವ ಕಾರ್ಯಕ್ರಮ, ಆಲಮಟ್ಟಿ ಅಣೆಕಟ್ಟನ್ನು 524.256ಮೀಟರ್‌ಗೆ ಎತ್ತರಿಸುವುದರಿಂದ ಮುಳುಗಡೆಯಾಗುವ ಭೂಸ್ವಾಧೀನ ಹಾಗೂ ಭೂ ನಿರ್ಮಾಣ ಕಾಮಗಾರಿಗಳನ್ನು ಚುರುಕುಗೊಳಿಸುವಂತೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿ, ಈಗಾಗಲೇ ಒಂದು ಸಭೆಯನ್ನು ಮಾಡಿದ್ದೇವೆ. ಮತ್ತೆ ನಾವು ಪ್ರಥಮ ಮೀಟಿಂಗ್‌ನಲ್ಲಿ ಒಂದು ಮಹತ್ವದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಎಲ್ಲವೂ ಕೂಡ ಈಗಾಗಲೇ mandatory ಆಗಿದೆ, ಆದರೆ ಆ ದಿವಸಕ್ಕೆ mandatory ಇರಲಿಲ್ಲ. ನಾವು ಏನು ನಿರ್ಧಾರ ಮಾಡಿದ್ದೇವೆಂದರೆ, ಈಗ ಏನೇನು ಹಳೆಯ ಕೇಸ್‌ಗಳು ಇವೆ, ಅವುಗಳಿಗೆ ಹೊಸ ಭೂ ಕಾಯಿದೆ ಏನು ಇದೆ. ಅದು 1ನೇ ಜನವರಿ 2014ಕ್ಕೆ new Land Acquisition Act ಕೇಂದ್ರಸರ್ಕಾರದಿಂದ ಬಂತು, ಅದರ ಪ್ರಕಾರ ನಾವು ಪರಿಹಾರ ಕೊಡುತ್ತೇವೆಂದು ನಾನು ಹೇಳಬಯಸುತ್ತೇನೆ. ಕೃಷ್ಣ ಮೇಲ್ದಂಡೆ ಯೋಜನೆ ಹಂತದ ಮೂರು ಕಾಮಗಾರಿಗಳನ್ನು ಚುರುಕುಗೊಳಿಸುವುದಕ್ಕೆ ಕ್ರಮ

ಕೈಗೊಳ್ಳುತ್ತಿದ್ದೇವೆ. ಇವತ್ತು ಎತ್ತಿನಹೊಳೆ ಯೋಜನೆಗೆ DPR ಸುಮಾರು 12,912 ಕೋಟಿ ರೂ.ಗಳಿಗೆ ಅನುಮೋದನೆಯನ್ನು ಕೊಟ್ಟಿದ್ದೇವೆ, 5 packageನಲ್ಲಿ 3,716 ಕೋಟಿ ರೂ.ಗಳಿಗೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಈಗಾಗಲೇ survey work complete ಆಗಿದೆ, ಕೆಲವರು mobilization ಮಾಡಿಕೊಳ್ಳುತ್ತಿದ್ದಾರೆ. ಈಗ ಮಳೆಗಾಲದ ಸಂದರ್ಭ ಬಿಟ್ಟು ಇವತ್ತಿನ ಕೆಲಸವನ್ನು ಪ್ರಾರಂಭ ಮಾಡುವ ಹಂತದಲ್ಲಿದ್ದಾರೆ. ಸೂಕ್ಷ್ಮ ನೀರಾವರಿ ಪದ್ಧತಿ 24,000 ಹೆಕ್ಟಾರ್ ಅಳವಡಿಕೆಯ ರಾಮತಾಳ್ ಮರು ಏತ ನೀರಾವರಿ ಯೋಜನೆ ಪ್ರಗತಿಯಲ್ಲಿದೆ. ಅಂಚಿ ಕೆರೆ ತುಂಬುವ ಯೋಜನೆ, ಸಂಕಬಿವಿಯಾರ್, ಭೂತನಾಳ್, ಬೇಗಂತಲಾಬ್, ಮಂದಾಪುರ ಕೆರೆಗಳನ್ನು ತುಂಬುವ ಯೋಜನೆಗಳಿಗೆ ಇವತ್ತಿನ ದಿವಸ ಅನುಮೋದನೆಯನ್ನು ಕೊಟ್ಟಿದ್ದೇವೆ. ಹೂವಿನ ಹಡಗಲಿ ತಾಲ್ಲೂಕಿನ 10 ಕೆರೆಗಳನ್ನು ತುಂಬಿಸುವ ಕಾಮಗಾರಿಯನ್ನು ಇವತ್ತಿನ ದಿವಸ ಕೈಗೆತ್ತಿಕೊಳ್ಳಲಾಗಿದೆ. ಸೂಕ್ಮ ನೀರಾವರಿ ಪದ್ಧತಿಯಲ್ಲಿ 1,04,975 ಎಕರೆ ಅಳವಡಿಕೆಯ ತುಗಚಿ ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಬಹುಶಃ ಇದು ನಮ್ಮ ದೇಶದಲ್ಲಿ ಅಷ್ಟೆ ಅಲ್ಲ, ಇಡೀ ಜಗತ್ತಿನಲ್ಲೇ ಅತೀ ದೊಡ್ಡದಾದಂಥ ಹನಿ ನೀರಾವರಿ ಪದ್ಧತಿಯಿಂದ ಮಾಡುವಂಥ ಯೋಜನೆಯಾಗಿದೆ. ರಾಜ ಪರಮೇಶ್ವರಿ, ಡಿ.ಜೆ.ಅಣೆಕಟ್ಟು, ನಾಲಾ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಶ್ರೀರಾಂದೇವರು ಅಣೆಕಟ್ಟು, ರಾಮಸ್ವಾಮಿ ಅಣೆಕಟ್ಟು, ಆಧುನೀಕರಣ ಕಾಮಗಾರಿಗಳನ್ನು ಕೊಟ್ಟಿದ್ದೇವೆ. ನೀರಾವರಿ ಪ್ರದೇಶದಲ್ಲಿ solar panel ಅಳವಡಿಸಿ, ವಿದ್ಯುತ್ ಉತ್ಪಾದನೆಗೆ ಒಂದು ಪೈಲೆಟ್ ಆಧಾರಿತ ಆಲಮಟ್ಟಿ ಬಲದಂಡೆ ಕಾಲುವೆ 8 ಕಿ.ಮೀ. ನಿಂದ 11 ಕಿ.ಮೀ.ವರೆಗೆ turnkey ಆಧಾರದ ಮೇಲೆ ಒಂದು ಮೆ.ವ್ಯಾ.ವಿದ್ಯುತ್ ಅನ್ನು ಉತ್ಪಾದನೆ ಮಾಡುವ ನಿಟ್ಟಿನಲ್ಲಿ ಗುತ್ತಿಗೆಯನ್ನು ವಹಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:– ಮಾನ್ಯ ಸಚಿವರೆ, ಈಗ ಅನೇಕ ಯೋಜನೆಗಳ ಬಗ್ಗೆ ಹೇಳುತ್ತಿದ್ದೀರಿ. ಈಗ ಅಪ್ಪರ್ ಭದ್ರಾಗೆ ಇರತಕ್ಕಂಥ ತೊಂದರೆ ಮತ್ತು ಅದರ ಬಗ್ಗೆ ಕಳೆದ ಒಂದು ವರ್ಷದಿಂದ ಏನು ಕ್ರಮ

ಜರುಗಿಸಿದ್ದೀರೆಂಬುದನ್ನು ಹೇಳಿ, ಏಕೆಂದರೆ ಅಪ್ಪರ್ ಭದ್ರ ಬಹಳ ಮುಖ್ಯವಾಗಿದೆ. Environment clearance ಸಮಸ್ಯೆ ಬಗ್ಗೆ ಏನು ಕ್ರಮ ಜರುಗಿಸುತ್ತಿದ್ದೀರಿ?

ಉಪಾಧ್ಯಕ್ಷರು:– ತಾವು clarification ಅನ್ನು ಆಮೇಲೆ ಕೇಳಿ.

ಶ್ರೀ ಎಂ.ಬಿ. ಪಾಟೀಲ್:– ನಾನು ಆ ವಿಷಯವನ್ನು ಹೇಳುತ್ತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಸಚಿವರೆ, ತಾವು ಬಬಲೇಶ್ವರ, ತುಗಚಿ ಮಾಡುತ್ತಿದ್ದೀರಿ, ಸಂತೋಷ. ಅದರ ಜೊತೆಗೆ ಬೂದಾಳ ಪಿರಾಪುರ್ ಅದನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ.ಬಿ. ಪಾಟೀಲ್:– ಬೂದಾಳ್, ಪಿರಾಪುರ್‌ಗೂ ಕೂಡ ನಾವು administrative approval ಅನ್ನು ಕೊಟ್ಟಿದ್ದೇವೆ. ಅದಕ್ಕೆ ಸ್ವಲ್ಪ modification ಕೇಳಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ತಾವು ಯಾವಾಗ ಪ್ರಾರಂಭ ಮಾಡುತ್ತೀರೆಂದು ಹೇಳಿದರೆ, ಅಷ್ಟೆ ಸಾಕು.

ಶ್ರೀ ಎಂ.ಬಿ. ಪಾಟೀಲ್:– ಈಗಾಗಲೇ ಬೂದಾಳ್ ಪಿರಾಪುರ್‌ಗೆ administrative approval ಕೊಟ್ಟು ಆಗಿದೆ, ಇದಕ್ಕೆ ಒಂದು ಟಿ.ಎಂ.ಸಿ.ನೀರನ್ನು ಒದಗಿಸಲಾಗಿದೆ. ಮಾನ್ಯ ಶಾಸಕರ ಒತ್ತಾಯ ಟಿ.ಎಂ.ಸಿ. ಇದ್ದು, ಅದನ್ನು ಬೇರೆ ಮೂಲದಿಂದ ತಂದು ಮಾಡುವುದಕ್ಕೆ ಒಂದು area ವನ್ನು ಹಸ್ತಾಂತರ ಮಾಡಿಕೊಳ್ಳಬೇಕೆನ್ನುವ ಪ್ರಸ್ತಾವನೆ ಇದೆ, ಆ ಬಗ್ಗೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ನ್ಯಾಯಾಧೀಕರಣದ ಬಗ್ಗೆ ನಾನು ಏನು ಹೇಳಬೇಕಾಗಿಲ್ಲ, ಬಹುಶಃ ಇದು ಎಲ್ಲರಿಗೂ ತಿಳಿದಿರುವಂಥ ವಿಚಾರವಾಗಿದೆ. ಕೃಷ್ಣ ಬೇಸಿನ್ ನ್ಯಾಯಾಧೀಕರಣ ನೀರಿನ ಅಂತಿಮ ಹಂಚಿಕೆ, ಬಚಾವತ್‌ನಲ್ಲಿ 734 ಟಿ.ಎಂ.ಸಿ. ಇದ್ದು, ಮಹಾರಾಷ್ಟ್ರಕ್ಕೆ 585 ಟಿ.ಎಂ.ಸಿ., ಆಂಧ್ರಪ್ರದೇಶಕ್ಕೆ 811 ಟಿ.ಎಂ.ಸಿ. ಇದೆ. ಒಟ್ಟು 2,130 ಟಿ.ಎಂ.ಸಿಯಲ್ಲಿ ನಮಗೆ 734 ಟಿ.ಎಂ.ಸಿ. ಇದೆ. ಈಗ ಶೇ. 65ರ ಅವಲಂಬನೆಯ ಹಂಚಿಕೆಯಲ್ಲಿ ಇವತ್ತು

173 ಟಿ.ಎಂ.ಸಿ.ಯಲ್ಲಿ ಒಟ್ಟಾರೆ ಹಂಚಿಕೆಯಾಗಿದೆ. ನ್ಯಾಯಾಧಿಕರಣ ಕೃಷ್ಣ ಮೇಲ್ದಂಡೆ ಯೋಜನೆಗೆ ಹೆಚ್ಚುವರಿಯಾಗಿ 130 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿ, ಇವತ್ತಿನ ದಿವಸ ಆಲಮಟ್ಟಿ ಅಣೆಕಟ್ಟೆಯನ್ನು 524 ಮೀಟರ್‌ಗೆ ಎತ್ತರಿಸಲು ಅನುಮತಿ ನೀಡುವ ಮೂಲಕ 36 ಟಿ.ಎಂ.ಸಿ.ನೀರನ್ನು ಮೂರು ಯೋಜನೆಗಳಾದಂಥ ತುಂಗಾ ಮೇಲ್ದಂಡೆ, ಭದ್ರ ಮೇಲ್ದಂಡೆ ಹಾಗೂ ಸಿಂಗಟಾಲೂರು ಯೋಜನೆಗಳಿಗೆ ಹಂಚಿಕೆ ಮಾಡಿದೆ. ನಾನು ಇವತ್ತಿನ ದಿವಸ ನ್ಯಾಯಾಧಿಕರಣದ details ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಸುಪ್ರೀಂ ಕೋರ್ಟಿಗೆ ಹೋಗಿದ್ದೇವೆ. ನಾವು Floor Leaders meeting ಕರೆದಿದ್ದೆವು. ಅಲ್ಲಿ ಕುಮಾರಸ್ವಾಮಿಯವರು, ಜಗದೀಶ ಶೆಟ್ಟರ್‌ರವರು ಎಲ್ಲರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಕೃಷ್ಣಾ ನ್ಯಾಯಾಧೀಕರಣ-2 ರ ಸ್ಪಷ್ಟೀಕರಣ ಅರ್ಜಿ ಬಂದ ಮೇಲೆ ನಾವು ಸುಪ್ರೀಂ ಕೋರ್ಟಿನಲ್ಲಿ ನಮ್ಮ ಹೊಸ S.L.P. file ಮಾಡಿದ್ದೇವೆ. ಅದರಲ್ಲಿ ಮುಖ್ಯವಾಗಿ ನಾವು manner of withdrawal clause ಬಗ್ಗೆ, ಎ.ಎಸ್. ಪಾಟೀಲ್ ನಡಹಳ್ಳಿಯವರು ಏನು ಹೇಳಿದರು ಅದರಂತೆ, ಅದರ ಬಗ್ಗೆ ನಾವು ನಮ್ಮ objections ಹೇಳಿದ್ದೇವೆ, ಅದರ ಬಗ್ಗೆ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದೇವೆ. ಕೃಷ್ಣ ಕಣಿವೆ ಒಂದು ಮತ್ತು ಎರಡನೇ ಹಂತದ ಕಾಮಗಾರಿಗಳ ವಿವರ ಈ ರೀತಿ ಇದೆ. ಒಂದು ಮತ್ತು ಎರಡನೇ ಹಂತದಲ್ಲಿ ನಾರಾಯಣಪುರ ಎಡದಂಡೆ ಕಾಲುವೆಗೆ 13.10 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅದರ ಅಚ್ಚುಕಟ್ಟು ಕ್ಷೇತ್ರ 47,223 ಹೆಕ್ಟೇರ್ ಆಗುತ್ತದೆ. ಶಹಾಪುರ ಶಾಖಾ ಕಾಲುವೆಗೆ 34 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 1,22,120 ಹೆಕ್ಟೇರ್ ಆಗುತ್ತದೆ. ಮುದಬಾಳ್ ಶಾಖಾ ಕಾಲುವೆಗೆ 14.10 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, 51,100 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರವಾಗುತ್ತದೆ. ಜೇವರ್ಗಿ ಶಾಖಾ ಕಾಲುವೆಗೆ 15.80 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 57,100 ಹೆಕ್ಟೇರ್ ಆಗುತ್ತದೆ. ಇಂಡಿ ಶಾಖಾ ಕಾಲುವೆಗೆ 37.50 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 1,31,260 ಹೆಕ್ಟೇರ್ ಆಗುತ್ತದೆ. ಆಲಮಟ್ಟಿ ಎಡದಂಡೆ ಕಾಲುವೆಗೆ 5.60 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು 20,235

ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರ ಆಗುತ್ತದೆ. ಆಲಮಟ್ಟಿ ಬಲದಂಡೆ ಕಾಲುವೆಗೆ 4.50 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 16.100 ಹೆಕ್ಟೇರ್ ಆಗುತ್ತದೆ. ನಾರಾಯಣಪುರ ಬಲದಂಡೆ ಕಾಲುವೆಗೆ 22.40 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 84,000 ಹೆಕ್ಟೇರ್ ಆಗುತ್ತದೆ. ಮುಳವಾಡ ಏತ ನೀರಾವರಿಗೆ 8.50 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 30,850 ಹೆಕ್ಟೇರ್ ಆಗುತ್ತದೆ. ಇಂಡಿ ಏತ ನೀರಾವರಿಗೆ 11.5 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು. ಅಚ್ಚುಕಟ್ಟು ಕ್ಷೇತ್ರ 41,900 ಹೆಕ್ಟೇರ್ ಆಗುತ್ತದೆ. ರಾಮಪುರ ಏತ ನೀರಾವರಿ ಯೋಜನೆಗೆ 5.60 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 20,235 ಹೆಕ್ಟೇರ್ ಆಗುತ್ತದೆ. ಒಟ್ಟಾರೆ 173 ಟಿ.ಎಂ.ಸಿ. ನೀರಿನಲ್ಲಿ 6,22,023 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರ ಸೃಷ್ಟಿಯಾಗಬೇಕಾಗಿತ್ತು. ಕಲ್ಪಿಸಿದ ನೀರಾವರಿ ಕ್ಷೇತ್ರ 6,18,000 ಹೆಕ್ಟೇರ್. ಇದುವರೆಗೆ ಆಗಿರುವ ಆರ್ಥಿಕ ವೆಚ್ಚ ₹ 12,412.77 ಕೋಟಿ. ಇದು ಪುನರ್ವಸತಿ, ಪುನರ್‌ನಿರ್ಮಾಣ ಹಾಗೂ ಭೂಸ್ವಾಧೀನ ಒಳಗೊಂಡಂತೆ ಖರ್ಚಾಗಿರುವಂಥಾದ್ದು. ಫಲಾನುಭವಿ ಜಿಲ್ಲೆಗಳೆಂದರೆ ಗುಲ್ಬರ್ಗಾ, ಯಾದಗಿರಿ, ಬಿಜಾಪುರ, ಬಾಗಲಕೋಟೆ ಮತ್ತು ರಾಯಚೂರು. ಕೃಷ್ಣಾ ಮೇಲ್ದಂಡೆ ಹಂತ–1ರ ಯೋಜನೆಯ ಮುಕ್ತಾಯ ವರದಿಯನ್ನು ಫೆಬ್ರವರಿ 2013ರಂದು ಮತ್ತು ಕೃಷ್ಣಾ ಮೇಲ್ದಂಡೆ ಹಂತ–2ರ ಯೋಜನೆಯ ಮುಕ್ತಾಯ ವರದಿಯನ್ನು ಆಗಸ್ಟ್ 2013ರಂದು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ. ಇನ್ನು ಮುಖ್ಯವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–3ರಲ್ಲಿ ಅಳವಡಿಸಿಕೊಳ್ಳುವ ಯೋಜನೆಗಳೆಂದರೆ, ಮುಳವಾಡ ಏತ ನೀರಾವರಿಗೆ 54.431 ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ, ಅಚ್ಚುಕಟ್ಟು ಕ್ಷೇತ್ರ 2,27,966 ಹೆಕ್ಟೇರ್ ಆಗುತ್ತದೆ. ಚಿಮ್ಮಲಗಿ ಏತ ನೀರಾವರಿಗೆ 20.789 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 87,000 ಹೆಕ್ಟೇರ್ ಆಗುತ್ತದೆ. ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆಗೆ 18.98 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 61,747 ಹೆಕ್ಟೇರ್ ಆಗುತ್ತದೆ. ಮಲ್ಲಾಬಾದ್ ಏತ ನೀರಾವರಿಗೆ 8.54 ಟಿ.ಎಂ.ಸಿ ನೀರು ಹಂಚಿಕೆಯಾಗಿದ್ದು,

ಅಚ್ಚುಕಟ್ಟು ಕ್ಷೇತ್ರ 33,730 ಹೆಕ್ಟೇರ್ ಆಗುತ್ತದೆ. ಇಂಡಿ ಏತ ನೀರಾವರಿ ಯೋಜನೆಯ ವಿಸ್ತರಣೆಗೆ 4.94 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಕ್ಷೇತ್ರ 19,923 ಹೆಕ್ಟೇರ್ ಆಗುತ್ತದೆ. ಕೊಪ್ಪಳ ಏತ ನೀರಾವರಿ ಯೋಜನೆಗೆ 11.555 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಅಚ್ಚುಕಟ್ಟು ಪ್ರದೇಶ 48,436 ಹೆಕ್ಟೇರ್ ಆಗುತ್ತದೆ. ಕೊಪ್ಪಳ ಏತ ನೀರಾವರಿಯಲ್ಲಿ ಬರುವ ಭೀಮಾ ಫ್ಲಾಂಕ್‌ನಲ್ಲಿ ಹನಿ ನೀರಾವರಿ ಪದ್ಧತಿಯೊಂದಿಗೆ ನೀರಾವರಿಗೆ ಒಳಪಡಿಸಲಾಗುವ ಅಚ್ಚುಕಟ್ಟು ಕ್ಷೇತ್ರ 1,12,000 ಹೆಕ್ಟೇರ್.

ಶ್ರೀ ಗೋವಿಂದ ಎಂ. ಕಾರಜೋಳ:– ಮಂತ್ರಿಗಳು ಒಂದು ನಿಮಿಷ ಯೀಲ್ಡ್ ಆಗಬೇಕು. ಅವರು ಈಗ ಓದುತ್ತಿರುವ ಪ್ರೋಗ್ರೆಸ್, ಸ್ವಾತಂತ್ರ್ಯ ಬಂದ ನಂತರ ಪ್ರಾರಂಭ ಮಾಡಿರುವ ಕಾಮಗಾರಿಗಳ ಆವತ್ತಿನಿಂದ ಇವತ್ತಿನವರೆಗಿನ ಪ್ರೋಗ್ರೆಸ್‌ಅನ್ನು ಹೇಳುತ್ತಿದ್ದಾರೆ. ನಾನು ನಿರ್ದಿಷ್ಟವಾಗಿ ಕೇಳುತ್ತಿರುವುದೇನೆಂದರೆ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂದರೆ ಕಳೆದ ಒಂದು ವರ್ಷ ಮೂರು ತಿಂಗಳಲ್ಲಿ ಎಷ್ಟೆಷ್ಟು ಪ್ರೋಗ್ರೆಸ್ ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್:– ಈಗಾಗಲೇ ಹೇಳಿದ್ದೇನಲ್ಲ. ನೀವು ಕೇಳುತ್ತೀರೆಂದು ನನಗೆ ಗೊತ್ತಿದೆ, ಅದಕ್ಕಾಗಿಯೇ ನಾನು ಕಾರಜೋಳರವರೇ ಎಂದು ಹೇಳಿಯೇ ವಿವರಗಳನ್ನು ಹೇಳಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ನೀವು ಹೇಳುತ್ತಿರುವುದನೆಲ್ಲ ನಾನು ಒಂದು ಸ್ಲಿಪ್‌ನಲ್ಲಿ ಬರೆದುಕೊಳ್ಳುತ್ತಾ ಕುಳಿತ್ತಿದ್ದೇನೆ. ಕಳೆದ ಒಂದು ವರ್ಷದ ಮೂರು ತಿಂಗಳಲ್ಲಿ ನೀವು ಮಾಡಿದಂಥ scheme–wise progress, expenditure ಮತ್ತು ಎಷ್ಟು ಹೆಕ್ಟೇರ್‌ಗೆ ನೀರುಣಿಸಿದರು ಎನ್ನುವುದಷ್ಟನ್ನು ಹೇಳಿದರೆ ಸಾಕು.

ಶ್ರೀ ಎಂ.ಬಿ. ಪಾಟೀಲ್:– ನಾನು ಕಾರಜೋಳರವರಿಗೇ ಏಕೆ ಅಡ್ರೆಸ್ ಮಾಡಿದೆ ಎಂದು ಈಗ ಗೊತ್ತಾಯಿತಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಕೇಳುತ್ತಿರುವ ಉದ್ದೇಶವಿಷ್ಟೇ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಜನರಾದ ನಾವು

ನಮ್ಮ ಆಸ್ತಿ–ಪಾಸ್ತಿ, ಮನೆ–ಮಠ ಎಲ್ಲವನ್ನೂ ಕಳೆದುಕೊಂಡು ನಿರಾಶ್ರಿತರಾಗಿದ್ದೇವೆ. ನಮಗೆ ಇವತ್ತಿಗೂ ಒಂದು ಹನಿ ನೀರಾವರಿ ಸಿಕ್ಕಿಲ್ಲ. ಒಂಭತ್ತು ಲಿಫ್ಟ್ ಇರಿಗೇಷನ್ ಸ್ಕೀಂಗಳು ನಮ್ಮ ಜಿಲ್ಲೆಯಲ್ಲೇ ಆಗಬೇಕಾಗಿವೆ. ಅವುಗಳ ಪ್ರೋಗ್ರೆಸ್‌ನ್ನೂ ನಿರಾಶ್ರಿತರಾದವರಿಗೆ ಹೇಳಬೇಕಲ್ಲವೇ? ನಾವು ಹುಟ್ಟಿದ ಮನೆ–ಮಠ ಎಲ್ಲವನ್ನೂ ಕಳೆದುಕೊಳ್ಳುವುದಲ್ಲದೇ, ನಮ್ಮ ಭಾವನಾತ್ಮಕವಾದ ಸಂಬಂಧಗಳನ್ನೂ ಕೂಡ ಕಳೆದುಕೊಂಡಿದ್ದೇವೆ.

ಶ್ರೀ ಎಂ.ಬಿ. ಪಾಟೀಲ್:– ನಾನು ಅದನ್ನೇ ಹೇಳುತ್ತಿದ್ದೇನೆ. ಕೇಳುವುದಕ್ಕೇ ನಿಮಗೆ ತಾಳ್ಮೆ ಇಲ್ಲ ಎಂದರೆ ಹೇಗೆ? ಮೊದಲು ನಾನು ಎಲ್ಲ ವಿವರಗಳನ್ನು ಕೊಟ್ಟು ನಂತರ, ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಬರುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿಯಲ್ಲಿ ಜಿಲ್ಲಾವಾರು ಅಚ್ಚುಕಟ್ಟು ಕ್ಷೇತ್ರ ಹೀಗಿದೆ; ಬಿಜಾಪುರದಲ್ಲಿ 3,21,866 ಹೆಕ್ಟೇರ್ ಪ್ರದೇಶ ಅಂದರೆ ಸುಮಾರು 80 ಟಿ.ಎಂ.ಸಿ. ನೀರು ಬಿಜಾಪುರ ಜಿಲ್ಲೆಗೆ ಬರುತ್ತದೆ. ಬಾಗಲಕೋಟೆ ಜಿಲ್ಲೆಯಲ್ಲಿ 28,573 ಹೆಕ್ಟೇರ್ ಪ್ರದೇಶ ಅಚ್ಚುಕಟ್ಟು ಕ್ಷೇತ್ರವಾಗುತ್ತದೆ. ಗುಲ್ಬರ್ಗದಲ್ಲಿ 28,107 ಹೆಕ್ಟೇರ್ ಪ್ರದೇಶ, ಯಾದಗಿರಿಯಲ್ಲಿ 40,164 ಹೆಕ್ಟೇರ್ ಪ್ರದೇಶ ಆಗುತ್ತದೆ. ಕಾರಜೋಳರವರೆ, ನೀವು ಹೇಳಿದ ಒಂಭತ್ತು ಏತ ನೀರಾವರಿ ಯೋಜನೆಗಳಿಗೆ ಇಷ್ಟಿಷ್ಟು ಎಂದು ಅದರಲ್ಲಿ ಅಲೋಕೋಷನ್ ಇದೆ. 278 TMC ನಾವು ನೀರು ಕೇಳಿದ್ದೇವು 130 ಕ್ಕೆ ಗೆರೆ ಕೊಯ್ದಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– tribunal ನಲ್ಲಿ ಕೊಟ್ಟಿರುವುದು N–Block allotment ಸರ್ಕಾರ ಮಾಡಿರುವುದು ನೀವು project-wise ಕೊಟ್ಟಿರುವುದು. ನೀವು ಅದನ್ನು project-wise ಮಾಡಿದ್ದೀರಿ ಎಂದು ಹೇಳಿದಿರಿ.

ಶ್ರೀ ಎಂ.ಬಿ. ಪಾಟೀಲ್:– ನಾವು ಕೊಟ್ಟಿರುವುದು ಅವರು ಅಪ್ರೂವ್ ಮಾಡಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– ನಾವು ಅದನ್ನೇ ಈಗ ಡಿಮಾಂಡ್ ಮಾಡುತ್ತಿರುವುದು N-Block ಎಂದು consider ಮಾಡಿ ಬದಲಾವಣೆ ಮಾಡಿ ಎಂದು.

ಉಪಾಧ್ಯಕ್ಷರು:– ಅವರು ಪೂರ್ತಿ ಉತ್ತರ ಹೇಳಿದ ಮೇಲೆ ನೀವು ಕೇಳಿ.

(ಗೊಂದಲ)

ಉಪಾಧ್ಯಕ್ಷರು:– ಪಾಟೀಲರೆ, ಮಧ್ಯೆ interfere ಆಗಬೇಡಿ. ಮಾನ್ಯ ಸಚಿವರೇ ನೀವು ಯಿಲ್ಡ್ ಆಗಬೇಡಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಎ.ಎಸ್. ಪಾಟೀಲರಿಗೆ ನಾನು ಭರವಸೆಯನ್ನು ಕೊಡುತ್ತೇನೆ. ಯಾವುದೇ ಕಾಲಕ್ಕೆ ಬಿಜಾಪುರ ಜಿಲ್ಲೆಗೆ ಅನ್ಯಾಯವಾಗುವುದಿಲ್ಲ. ಅದನ್ನು ನೀವು ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಒಂದು ತಪ್ಪಾಗಿದೆ. ಜಲಸಂಪನ್ಮೂಲ ಇಲಾಖೆಗೆ ಸಣ್ಣ ನೀರಾವರಿ ಸೇರಿದೆ. ನಮಗೆ ಗೊತ್ತಿಲ್ಲದೆ ಸಣ್ಣ ನೀರಾವರಿ ಇಲಾಖೆ ಬಗ್ಗೆ ನಾವು ಚರ್ಚೆಯೇ ಮಾಡಿಲ್ಲ. ಸಣ್ಣ ನೀರಾವರಿ ಬಗ್ಗೆ ಸ್ವಲ್ಪ ಮಾತನಾಡುವುದು ಇದೆ. ತಾವು ಚರ್ಚೆಗೆ ಅವಕಾಶ ಕೊಡಬೇಕು. ನಾವೆಲ್ಲ ಸಣ್ಣ ನೀರಾವರಿಯವರು. ನಮಗೇನೂ ದೊಡ್ಡ ನೀರಾವರಿ ಇಲ್ಲ. ಸಣ್ಣ ನೀರಾವರಿಯನ್ನು ನೀವು ಅದರಲ್ಲಿ ಸೇರಿಸಿದ್ದೀರೆಂದು ನಮಗೆ ಗೊತ್ತಿಲ್ಲ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಮ್ಮ ಸಣ್ಣ ನೀರಾವರಿ ಸಚಿವರು ಬಹಳ ಪವರ್‌ಫುಲ್ ಇದ್ದಾರೆ. ಅವರು ಎಲ್ಲರಿಗೂ ಸಮಾಧಾನಪಡಿಸಿದ್ದಾರೆ. ನಿಮ್ಮ ಹಾಗೆ ಗಟ್ಟಿ ಇದಾರೆ ಅವರು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಪವರ್‌ಫುಲ್ ಇದ್ದರೆ ಚರ್ಚೆ ಬೇಡವೆಂದಾ?

ಶ್ರೀ ಎಂ.ಬಿ. ಪಾಟೀಲ್:- ರಾಯಚೂರು ಜಿಲ್ಲೆಗೆ 75,160 ಹೆಕ್ಟೇರ್, ಕೊಪ್ಪಳಕ್ಕೆ 32,723, ಗದಗಕ್ಕೆ 3373 ಹೀಗಾಗಿ ಇಟ್ಟು 5,30,475 ಹೆಕ್ಟೇರ್. ಎಲ್ಲಾ ಸದಸ್ಯರು ಮತ್ತು ಹಿರಿಯ ಸದಸ್ಯರ ಭಾವನೆಗಳಿಗೆ ಸ್ಪಂದಿಸುತ್ತಾ ಕೃಷ್ಣ ಮೇಲ್ದಂಡೆ ಹಂತ-3ರಲ್ಲಿ ಏನಿದೆ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಹಾಗೂ ಭೂ ಸ್ವಾಧೀನ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಎಲ್ಲರಿಗೂ ಮಾಹಿತಿ ಬೇಕಾಗಿತ್ತು. ಆಲಮಟ್ಟಿ ಜಲಾಶಯದಿಂದ ಹಿನ್ನೀರಿನಲ್ಲಿ 524.256 ಮೀಟರ್‌ಗೆ ಸಂಗ್ರಹಣೆ ಹೆಚ್ಚಿಸಿದಲ್ಲಿ ಮುಳುಗಡೆ ಹೊಂದುವ ಸುಮಾರು 94,000 ಎಕರೆ ಜಮೀನುಗಳಿಗೆ ಈಗಾಗಲೇ Radar survey ಪೂರ್ಣಗೊಳಿಸಿದ್ದು ಹೊಸ ಭೂಸ್ವಾಧಿನ ಕಾಯಿದೆಯನ್ವಯ 77 ಗ್ರಾಮಗಳ 135,765 ಎಕರೆ ಕ್ಷೇತ್ರ ಭೂಸ್ವಾಧೀನ ಪ್ರಸ್ತಾವನೆಯನ್ನು ನಾವು ಸಲ್ಲಿಸಿದ್ದೇವೆ. ಜಮಖಂಡಿ ತಾಲ್ಲೂಕಿನ ಗುದ್ದಲಿ ಗ್ರಾಮದ 307 ಎಕರೆಗೆ 4(1) ಅಧಿಸೂಚನೆ ಹೊರಡಿಸಲಾಗಿದೆ. ಎರಡನೆಯದಾಗಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಏನು ಮುಳುಗಡೆ ಹೊಂದುವ ಜಮೀನುಗಳ ಭೂಸ್ವಾಧೀನತೆ ಹಾಗೂ ಮುಳುಗಡೆ ಹೊಂದುವ ಗ್ರಾಮಗಳ ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಮಗಾರಿಗಳ ತೀವ್ರ ಅನುಷ್ಠಾನಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಿದ ಉನ್ನತಾಧಿಕಾರ ಸಮಿತಿ ದಿನಾಂಕ 12.12.2013ರಂದು ಸಭೆಯನ್ನು ಜರುಗಿಸುತ್ತದೆ. ಅದಲ್ಲದೆ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಕ್ರಿಯಾ ಯೋಜನೆ ಪರಿಶೀಲನಾ ಸಮಿತಿಯು ಮೊದಲನೇ ಸಭೆ 16.01.2014ರಲ್ಲಿ ಜರುಗಿಸಿತು. ಹಳೆಯ ಭೂ ಸ್ವಾಧೀನ ಕಾಯಿದೆಗೆ ನಾನು ಈಗಾಗಲೇ ಹೇಳಿದ ಹಾಗೆ ಪ್ರಾರಂಭಿಸಿದ ಭೂಸ್ವಾಧೀನ ಪ್ರಕರಣಗಳ ಬಗ್ಗೆ ನಾವು ನಿರ್ಧಾರ ತೆಗೆದುಕೊಂಡು ಹೊಸ ಒಂದು ಭೂಸ್ವಾಧೀನ ಪ್ರಕರಣಗಳ ಬಗ್ಗೆ ನಾವು ನಿರ್ಧಾರ ತೆಗದುಕೊಂಡು ಹೊಸ ಒಂದು ಭೂಸ್ವಾಧೀನ ಕಾಯಿದೆಯ ಪರಿಹಾರ ನೀಡಲು ಅನುಸರಿಸಬೇಕಾದ ಮಾನದಂಡಗಳನ್ನು ಅಂತಿಮಗೊಳಿಸಲು ನಿರ್ಧರಿಸಿದೆ. ಬಹಳಷ್ಟು ಸದಸ್ಯರು ಭೂಸ್ವಾಧೀನ ಮತ್ತು ಪುನರ್‌ನಿರ್ಮಾಣದಲ್ಲಿ ವಿಳಂಬವಾಗುತ್ತಿದೆ ಎಂದು ಹೇಳಿದರು. ನಾನು ಎಲ್ಲ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಕೇಂದ್ರ

ಸರ್ಕಾರ 1.1.2014 ರಂದು ನೂತನ ಭೂ ಕಾಯಿದೆಯನ್ನು Land Acquisition Act ತಂದರು. ಇದರ ಪೂರಕವಾಗಿ ಮೂರು ನಾಲ್ಕು ತಿಂಗಳು ಮೊದಲು Land Acquisition Act ಬರುತ್ತದೆ ಎಂದು ಇತ್ತು. ಅಕ್ಟೋಬರ್, ನವೆಂಬರ್ ಡಿಸೆಂಬರ್‌ನಿಂದ ಹಿಡಿದು ಆಗಸ್ಟ್‌ವರೆಗೆ ಕೇವಲ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ಇಡೀ ದೇಶದಲ್ಲಿ ಎಲ್ಲಾ ಯೋಜನೆಗಳು ಸ್ಥಗಿತವಾಗಿವೆ. Land Acquisition Act ಏನು ಪಾಸಾಯಿತು ಅದಾದ ಮೇಲೆ ರಾಜ್ಯಗಳು ರೂಲ್ಸ್ ಫ್ರೇಮ್ ಮಾಡಬೇಕಾಗುತ್ತದೆ. ಅದು ರೆವಿನ್ಯೂ ಇಲಾಖೆಯ ಮುಖಾಂತರ ಆಗುವಂಥದ್ದು. ಈಗಾಗಲೇ ನಮ್ಮ ರಾಜ್ಯದಲ್ಲಿ ರೂಲ್ಸ್ ಫ್ರೇಮ್ ಮಾಡಿ objections ಕೇಳಿದ್ದಾರೆ. ಸುಮಾರು 9 ತಿಂಗಳು ಹೊಸ ಭೂ ಸ್ವಾಧೀನ ಕಾಯಿದೆ ಅನುಸರಿಸಬೇಕಾಗಿದ್ದರಿಂದ ವಿಳಂಬವಾಗಿದೆ. ಇದು ಕೇವಲ ನಮ್ಮ ರಾಜ್ಯದಲ್ಲಿ ಅಲ್ಲ ಇಡೀ ದೇಶದಲ್ಲಿ ಡಿಲೇ ಆಗಿದೆ. ಮುಖ್ಯವಾಗಿ ಮಾತನಾಡುವಾಗ ಕೆಲವೊಂದು ಅಭಿಪ್ರಾಯಗಳು ಬಂದವು. ಆಲಮಟ್ಟಿ ಜಲಾಶಯದಲ್ಲಿ 20 ಗ್ರಾಮಗಳು ಏನೂ ಆಗಿಲ್ಲವೆಂದು ಹೇಳಿದರು. ಮುಳುಗಡೆ ಆಗಿರುವ 20 ಗ್ರಾಮಗಳ ಪುನರ್ವಸತಿಗಾಗಿ ಈಗಾಗಲೇ 13 ಗ್ರಾಮಗಳಲ್ಲಿ ಪುನರ್ವಸತಿ ಕಲ್ಪಿಸುವ ಸಲುವಾಗಿ 2232 ಎಕರೆ ಪ್ರದೇಶಕ್ಕೆ ಹೊಸ ಭೂ ಕಾಯಿದೆಯನ್ವಯ 11(1) ಅಧಿಸೂಚನೆ ಹೊರಡಿಸಿದ್ದು ಇವತ್ತಿನ ದಿವಸ ಕೆಲಸ ಪ್ರಗತಿಯಲ್ಲಿದೆ. ಇನ್ನುಳಿದ ಏಳು ಗ್ರಾಮಗಳಾದ ಅಂಕಲಗಿ, ಗದ್ದಲಕೇರಿ, ಹಿರೇಪಡಸಲಗಿ, ಬಂಟನೂರು, ಚಿಕ್ಕೂರು, ವಂದಾಳ ಮತ್ತು ಚಿಕ್ಕಲಗಿ ಗ್ರಾಮದಲ್ಲಿ ಪುನರ್ವಸತಿ ಸಭೆ ಜರುಗಿಸಿ ಪುನರ್ವಸತಿ ಆಯ್ಕೆ ಕೆಲಸ ಪ್ರಗತಿಯಲ್ಲಿದೆ. ನಿಮ್ಮ ಸರ್ಕಾರ ಇದ್ದಾಗ ನಾವು ನೋಡಿದ್ದೇವೆ. ಒಬ್ಬ Land Acquisition Commission ಇರಲಿಲ್ಲ. Deputy Commissioner ಗಳೂ ಇರಲಿಲ್ಲ, ಸರ್ವೇಯರ್ಸ್ ಇರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ನೂತನವಾಗಿ ಶ್ರೀ ಕಳಸದವರನ್ನು ಕಮಿಷನರ್ ಆಗಿ ನಾವು ನೇಮಿಸಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಿಮ್ಮ ಸರ್ಕಾರ ಬಂದ ಮೇಲೆ ಬ್ರಿಜೇಶ್ ಕುಮಾರ್ ದು ಆಯೋಗದ ತೀರ್ಪು ಬಂದ ಮೇಲೆ ನೇಮಿಸಬೇಕಾಗಿದೆ, ನೇಮಿಸಿದ್ದೀರಿ. ಮೊದಲು ಅದರ ಅವಶ್ಯಕತೆ ಇರಲಿಲ್ಲ.

ನಮಗೆ ತೀರ್ಪೇ ಬಂದಿರಲಿಲ್ಲ. Inter-state water dispute ತೀರ್ಪು ಬಂದಿರಲಿಲ್ಲ. ಬಂದ ಮೇಲೆ ಇವೆಲ್ಲಾ ಪ್ರೋಸೀಜರ್ ಮಾಡಬೇಕು. ಮೊದಲು ಏನು ಮಾಡುತ್ತೀರಿ, ಮೊದಲು ಮಾಡಿ ಮುಗಿಸಿದ್ದೆವು.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, 521 ಮೀಟರ್‌ಗೆ RL ಗೆ ಮತ್ತು 523 RL ಗೆ ಬಾಗಲಕೋಟೆ ಪಟ್ಟಣದ ಬಾಧಿತ ಕುಟುಂಬಗಳಿವೆ ಅವುಗಳನ್ನು ನವ ನಗರ ಯೂನಿಟ್–2 ರಲ್ಲಿ ಸ್ಥಳಾಂತರಿಸಬೇಕಾಗಿದೆ. ಯೂನಿಟ್–2ರ ಅಭಿವೃದ್ಧಿಗಾಗಿ 1,333 ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಂಡು RL 521 ಮೀಟರ್‌ನಿಂದ 523 ಮೀಟರ್‌ವರೆಗೆ 3723 ಕಟ್ಟಡಗಳಿಗೆ ಭೂಸ್ವಾಧೀನಪಡಿಸಿಕೊಂಡು ಪರಿಹಾರ ಒದಗಿಸಲಾಗಿದೆ. ಪ್ರಸ್ತುತ 523 ಮೀಟರ್‌ನಿಂದ 525 ಮೀಟರ್‌ವರೆಗೆ ಬಾಗಲಕೋಟೆ ಪಟ್ಟಣದಿಂದ ಸಂತ್ರಸ್ತರನ್ನು ಸ್ಥಳಾಂತರಿಸುವ ನವನಗರ ಯೂನಿಟ್–3ಕ್ಕೆ ಅವಶ್ಯಕತೆಯಿರುವಂತಹ ಸುಮಾರು 2043 ಎಕರೆ 36 ಗುಂಟೆ ಪ್ರದೇಶಕ್ಕೆ ಈಗಾಗಲೇ 4(1) ಅಧಿಸೂಚನೆಯನ್ನು ಹೊರಡಿಸಲಾಗಿದೆ. ಬಾಗಕೋಟೆ ಪಟ್ಟಣದ ನವನಗರ ಯೂನಿಟ್–2ರಲ್ಲಿ ಅಭಿವೃದ್ಧಿಪಡಿಸಬೇಕಾಗಿದೆ. ಮೂಲಭೂತ ಸೌಕರ್ಯಗಳ ಕಾಮಗಾರಿಗಳಾದ ಒಳಚರಂಡಿ, ರಸ್ತೆ, ಮಳೆ ನೀರು ಚರಂಡಿ, ಹಾಗೂ ವಿದ್ಯುತ್ತೀಕರಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಇದು ನಾವು ಬಂದ ನಂತರ ಟೆಂಡರ್ ಮಾಡಿದೆವು. ನೀವು ಬರೀ ಅನೌನ್ಸ್‌ಮೆಂಟ್ ಮಾಡಿದಿರಿ. ಬಾಗಲಕೋಟೆ ನವನಗರ ಪಟ್ಟಣಕ್ಕೆ ಖಾಯಂ ನೀರು ಸರಬರಾಜು ಕಾಮಗಾರಿ ಇವತ್ತಿನ ದಿವಸ ಪ್ರಗತಿಯಲ್ಲಿದೆ. 2014–15ರಲ್ಲಿ ಕೈಗೊಳ್ಳಲಾದ ಕಾಮಗಾರಿಗಳು: ಒಂದು–ಭೂಸ್ವಾಧೀನ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕೃಷ್ಣ ಮೇಲ್ದಂಡೆ ಯೋಜನೆ ಹಂತ ಒಂದು, ಎರಡು ಮತ್ತು ಮೂರರಡಿ ಯೋಜನಾ ಕಾಮಗಾರಿಗಳಾದ ಕಾಲುವೆ ನಿರ್ಮಾಣ, ಮುಳುಗಡೆ ಹೊಂದುವ ಜಮೀನುಗಳ ಭೂಸ್ವಾಧೀನತೆ, ಹೊಸ ಭೂಸ್ವಾಧೀನ ಕಾಯಿದೆಯನ್ವಯ ಸುಮಾರು 15,000 ಎಕರೆ ಕ್ಷೇತ್ರ ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮುಳುಗಡೆ ಹೊಂದುವ 20 ಗ್ರಾಮಗಳಲ್ಲಿ ಸುಮಾರು 2900 ಕಟ್ಟಡಗಳ ಸ್ವಾಧೀನತೆಗೆ

ಕ್ರಮವನ್ನು ತೆಗದುಕೊಳ್ಳುತ್ತಿದ್ದೇವೆ. ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆ ಹೊಂದುವ ಎಲ್ಲಾ 20 ಗ್ರಾಮಗಳ ಪುನರ್ವಸತಿ ಕೇಂದ್ರಗಳಿಗಾಗಿ ಭೂಸ್ವಾಧೀನಗೊಳಿಸಲು ಕ್ರಮ ಮತ್ತು ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಅಂದಾಜು ಪತ್ರಿಕೆಗಳ ತಯಾರಿಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಬಾಗಲಕೋಟೆ ಪಟ್ಟಣ ಪ್ರಾಧಿಕಾರ ನವನಗರ ಯೂನೀಟ್–2ರ ಅಡಿ 47 ಕೋಟಿ ರೂ. ಮೊತ್ತದ ನೀರು ಸರಬರಾಜು ಕಾಮಗಾರಿ ತೆಗೆದುಕೊಂಡಿದ್ದೇವೆ. ಯೂನಿಟ್–2ರ ಅಡಿ ಕೈಗೊಂಡಿರುವ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿಗಳ ಸಮರ್ಪಕ ಹಾಗೂ ಗುಣಮಟ್ಟತೆ ನಿರ್ವಹಣೆಗಾಗಿ ಯೋಜನಾ ನಿರ್ವಾಹಣಾ ಸಮಾಲೋಚಕರ ನೇಮಕಾತಿಯನ್ನು ಮಾಡಿದ್ದೇವೆ. ನವನಗರ ಯೂನಿಟ್–3 RL 523 ನಿಂದ 525 ಮೀಟರ್‌ವರೆಗೆ ಮೂಲಭೂತ ಸೌಕರ್ಯಗಳ ಕಾಮರಿಗಳ ಅಂದಾಜು ಪಟ್ಟಿ ತಯಾರಿಕೆಗೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಆರ್ಥಿಕ ವೆಚ್ಚದ ವಿವರಗಳನ್ನು ನಾನು ನಿಮಗೆ ನೀಡುತ್ತೇನೆ. ಕೃಷ್ಣ ಮೇಲ್ದಂಡೆ ಹಂತ–3ರಡಿ ಪುನರ್ವಸತಿ ಮತ್ತು ಭೂಸ್ವಾಧೀನ ಹಾಗೂ BTDA ಕಾಮಗಾರಿಗಳಿಗೆ ಜೂನ್ 2014ರವರೆಗೆ ಒಟ್ಟಾರೆ 324.17ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. 2014–15 ನೇ ಸಾಲಿನಲ್ಲಿ 400 ಕೋಟಿ ರೂ. ಅನುದಾನ ಕಲ್ಪಿಸಲಾಗಿದ್ದು ಭೂಸ್ವಾಧೀನ ಮತ್ತು ಪುನರ್ವಸತಿಗೆ ಹೆಚ್ಚುವರಿಯಾಗಿದೆ. ಇನ್ನು ಮುಂದೆ ಇದು ಸಾಲುವುದಿಲ್ಲ. ಏಕೆಂದರೆ Land Acquisition Actಗೆ rules frame ಆಗಿದೆ. ಅದು ಫೈನಲ್ ಆದ ಮೇಲೆ ನಮಗೆ ಹೆಚ್ಚಿನ ಹಣ ಬೇಕಾಗುತ್ತದೆ. ಅದಕ್ಕೆ ಸುಮಾರು 1150 ಕೋಟಿ ರೂ. ಹೆಚ್ಚುವರಿ ಅನುದಾನ ಬೇಕಾಗುತ್ತದೆ ಎಂದು ರಿವ್ಯೂ ಮೀಟಿಂಗ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಕೊಟ್ಟು ಅವರಿಗೆ ಮನದಟ್ಟು ಮಾಡಿಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಭರವಸೆ ಕೊಟ್ಟು ಹೆಚ್ಚಿನ ಹಣ ನೀಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಾರಾಯಣಪುರ ಎಡದಂಡೆ ಕಾಲುವೆ ಆಧುನೀಕರಣ ನಾರಾಯಣಪುರ ಮೇಲ್ದಂಡೆ ಕಾಲುವೆಯ ಮುಖ್ಯ ಹಾಗೂ ಶಾಖಾ ಕಾಲುವೆಗಳ 1773 ಕೋಟಿ ಮೊತ್ತದ ಎಂಟು ಪ್ಯಾಕೇಜ್ ಅಡಿ

ಕಾಮಗಾರಿಗಳನ್ನು ಪ್ರಸ್ತುತ 2014–15ನೇ ಸಾಲಿನ closer ಅವಧಿಗೆ ಕೈಗೆತ್ತಿಕೊಂಡು ಇದುವರೆಗೆ 1012ಕೋಟಿ ರೂ. ವೆಚ್ಚ ಮಾಡಲಾಗಿದ್ದು ಎರಡು ಪ್ಯಾಕೇಜ್ ಹೊರತುಪಡಿಸಿ ಕೆಲಸಗಳು ಪೂರ್ಣಗೊಂಡಿವೆ.

ಅನುಷ್ಠಾನಗೊಳಿಸುತ್ತಿರುವ ಆಧುನಿಕ ಕಾಮಗಾರಿಗಳನ್ನು ಗುಣಮಟ್ಟವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಲುವಾಗಿ Third Party Quality Control Consultants ಅವರನ್ನು ಕೂಡ ಗುಣ ನಿಯಂತ್ರಣಕ್ಕೆ ಒತ್ತು ನೀಡಲಾಗಿದೆ. ಮುಂದುವರೆದು, ನುರಿತ ತಾಂತ್ರಿಕ ತಜ್ಞರು, ನಿಗಮದ ಅಂದಾಜು ಪರಿಶೀಲನಾ ಸಮಿತಿಯಡಿ ತಾಂತ್ರಿಕ ಸದಸ್ಯರನ್ನೊಳಗೊಂಡಂತೆ ಸಮಿತಿಯು ಇದುವರೆಗೆ ಒಟ್ಟು 8 ಬಾರಿ ಸಭೆಗಳನ್ನು ನಡೆಸಿದೆ. ನಮ್ಮ ಗುರುಪಾಟೀಲರು ಕೇಳುತ್ತಿದ್ದರು. ಕಾಮಗಾರಿ ಸ್ಥಳ ಪರೀಕ್ಷೆ ಕೈಗೊಂಡು ಕಾಲ ಕಾಲಕ್ಕೆ ಸೂಕ್ತ ಸಲಹೆ ಹಾಗೂ ಸೂಚನೆಗಳನ್ನು ನೀಡಿರುತ್ತಾರೆ. ಆಧುನಿಕ ತಂತ್ರಜ್ಞಾನ ಅಳವಡಿಕೆ. ಸಮರ್ಪಕ ನೀರು ನಿರ್ವಹಣೆಗಾಗಿ 139 ಕೋ.ರೂ. ಮೊತ್ತದ SKADA based automation including GIS and RDBMS, NLBC and HLBC ಕಾಮಗಾರಿಗಳನ್ನು ತೆಗೆದುಕೊಂಡು ಪ್ರಗತಿಯಲ್ಲಿ, ಅಂದರೆ ಎಷ್ಟು ಮಟ್ಟವನ್ನು ನೀರು ಬಿಡಬೇಕು, ಎಷ್ಟು quantity ನೀರನ್ನು ನಾವು ಬಿಡಬೇಕೆನ್ನುವುದನ್ನು ಇವತ್ತಿನ ದಿವಸ ಮಾಡುತ್ತಿದ್ದೇವೆ. ನಮ್ಮ ವಜ್ಜಲ್‌ರವರು ಕೇಳುತ್ತಿದ್ದರು. ಹೊಸ ಯೋಜನೆಗಳ ಅನುಷ್ಠಾನ. ನಂದವಾಡಗಿ ಏತ ನೀರಾವರಿ ಯೋಜನೆ. ಎ.ಎಸ್. ಪಾಟೀಲ್(ನಡಹಳ್ಳಿಯ)ಯವರು, ಬಹುಶಃ ನಮ್ಮದು miss ಆಗಿದೆ ಎಂದು ಕೇಳಿದರು. ಬೂದಿಹಾಳ, ಪೀರಾಪೂರ್ ಏತ ನೀರಾವರಿ ಯೋಜನೆ. ಇಂಡಿ ತಾಲ್ಲೂಕಿನಡಿ 12 ಕೆರೆ ತುಂಬುವಂಥ ಯೋಜನೆಗಳನ್ನು ಸಂಕ ಮತ್ತು ಬುಯ್ಯಾರ್ lift ಯೋಜನೆಯನ್ನು ಮತ್ತು ಬಿಜಾಪುರ ಜಿಲ್ಲೆಯ ಅಮ್ಮಾಪುರ್ ಸಾರವಾಡ ಬಬಲೇಶ್ವರ್–ಬೇಗಂ ತಲಾಬ್, ಕಾಗಿನ ನದಿಗೆ ಅಡ್ಡಲಾಗಿ ಇವತ್ತಿನ ದಿವಸ ಜಟ್ಟೂರು bridge cum barrage ನಿರ್ಮಾಣ. ಮಲಪ್ರಭಾ ನದಿಗೆ ಅಡ್ಡಲಾಗಿ ಕೂಡಲಸಂಗಮ, ಕಾಶಪ್ಪನವರದ್ದು, ಅಡವಿಹಾಳ್ bridge ನಿರ್ಮಾಣ. ಆಲಮಟ್ಟಿ ಬಲದಂಡೆ ಕಾಲುವೆ ಜಾಲದಡಿ, ಕೊಪ್ಪಳ ಏತ ನೀರಾವರಿ ಯೋಜನೆಗೆ. . . .

ಶ್ರೀ ಭರಮಗೌಡ ಅ.ಕಾಗೆ.:– ಬಸವೇಶ್ವರ ಏತ ನೀರಾವರಿಯನ್ನು ಸ್ವಲ್ಪ ತೆಗೆದುಕೊಳ್ಳಿ. ಈಗಾಗಲೇ ಘೋಷಣೆ ಮಾಡಿದ್ದೀರಿ.

ಶ್ರೀ ಎಂ.ಬಿ. ಪಾಟೀಲ್:– ಮುಂದೆ ಬರುತ್ತದೆ, ಹೇಳುತ್ತೇನೆ. ಆಲಮಟ್ಟಿ ಬಲದಂಡೆ ಕಾಲುವೆ ಜಾಲದಡಿ ಕೊಪ್ಪಳ ಏತ ನೀರಾವರಿ ಯೋಜನೆಯಡಿ ಸೋಲಾರ್ ವಿದ್ಯುತ್ ಅಳವಡಿಕೆಗೆ ಯೋಜನಾ ಕಾಮಗಾರಿಗಳ ಅನುಷ್ಠಾನ. ಎತ್ತಿನಹೊಳೆಯ ಸಮಗ್ರ ಕುಡಿಯು ನೀರಿನ ಯೋಜನೆ. ಬಹಳಷ್ಟು ಚರ್ಚೆ ಇವತ್ತಿನ ದಿವಸ ಈ ವಿಷಯದಲ್ಲಿ ಆಗಿದೆ. ನಾನು ಈಗಾಗಲೇ ಹೇಳಿದ್ದೇನೆ. ತಮಗೂ ಕೂಡ ಇದು ಗಮನಕ್ಕಿದೆ. ಈಗೇನು lift component ಇದೆ, ಆ lift component ನ ಎತ್ತಿನಹೊಳೆಯ ಸಮಗ್ರ ಕುಡಿಯುವ ನೀರಿನ ಯೋಜನೆಗೆ ವಿವರವಾದ ಪರಿಷ್ಕೃತ ವಿಸ್ತೃತವಾದ ಯೋಜನಾ ವರದಿಗೆ ಒಟ್ಟಾರೆ 12,912 ಕೋ.ರೂ.ಗಳಿಗೆ ನಾವು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಈ ಯೋಜನೆ ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವಂಥ ಎತ್ತಿನಹೊಳೆ....

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮುಂದುವರಿಸಬಹುದೆ? ಈ ಯೋಜನೆಯಲ್ಲಿ ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವಂಥ ಎತ್ತಿನಹೊಳೆ, ಕಾಡು ಮನೆ ಹೊಳೆ, ಕೆರೆ ಹೊಳೆ ಮತ್ತು ಹೊಂಗದಾಳಗಳಲ್ಲಿ ಹರಿಯುವ ಪ್ರವಾಹದ ನೀರನ್ನು ಕೆಳ ಭಾಗದ ಬೇಡಿಕೆಗೆ ಯಾವುದೇ ತೊಂದರೆಯಾಗದಂತೆ ಕೇವಲ ಮುಂಗಾರು ಮಳೆಯ ಅವಧಿಯಲ್ಲಿ ಅಂದರೆ ಜೂನ್‌ನಿಂದ ನವೆಂಬರ್‌ವರೆಗೆ ಮಾತ್ರ ನೀರನ್ನು ಎತ್ತಿ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ, ತುಮಕೂರು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಅಂದರೆ ಆಯ್ದ ತಾಲ್ಲೂಕುಗಳಲ್ಲಿ ಕುಡಿಯುವ ನೀರನ್ನು ಪೂರೈಸಲು ಉದ್ದೇಶಿಸಲಾಗಿದೆ. Lift component ಕಾಮಗಾರಿಗಳನ್ನು 5 package ನಲ್ಲಿ ವಿಗಂಡಿಸಿ. . .

ಶ್ರೀ ಎಂ.ಟಿ. ಕೃಷ್ಣಪ್ಪ:– ಮಾನ್ಯ ಸಚಿವರೆ, ಸುರಂಗ ಮಾರ್ಗದ ಕಾಮಗಾರಿ . . ..

ಶ್ರೀ ಎಂ.ಬಿ. ಪಾಟೀಲ್:- ನಾನು ಹೇಳುತ್ತೇನೆ. ಆಮೇಲೆ, Specific ಆಗಿ ಎಲ್ಲರದೂ ಕೂಡ ಇಲ್ಲಿ ನಾನು ಉತ್ತರ ಕೊಡುವಾಗ ಹೇಳುತ್ತೇನೆ.

ಅಧ್ಯಕ್ಷರು:- ಆಮೇಲೆ ಕೇಳಿ.

ಶ್ರೀ ಎಸ್. ಭೀಮಾನಾಯಕ್:- ಸಚಿವರೆ, ಮಾಲ್ವಿ ಜಲಾಶಯದ್ದು DPR ಬಗ್ಗೆ . .

ಶ್ರೀ ಎಂ.ಬಿ. ಪಾಟೀಲ್:- ಹೇಳುತ್ತೇನೆ.

ಅಧ್ಯಕ್ಷರು:- ಈಗ ಬರುತ್ತಾರೆ.

ಶ್ರೀ ಎಂ.ಬಿ. ಪಾಟೀಲ್:- ಇಲಾಖೆಯ ಸಂಪೂರ್ಣ ಮಾಹಿತಿ ಕೊಡುತ್ತೇನೆ. Individual ಆಗಿ ನಾನು ಹೇಳುತ್ತೇನೆ.

ಅಧ್ಯಕ್ಷರು:- OK.

ಶ್ರೀ ಎಂ.ಬಿ. ಪಾಟೀಲ್:- 5 package tender ಕಾಮಗಾರಿಗೆ ಅನುಮೋದನೆ ನೀಡಿದ್ದು, ಟೆಂಡರ್ ಕರಾರು ನಿಯಮದಂತೆ ಗುತ್ತಿಗೆದಾರರ, ಸರ್ವೆಯನ್ನು ಕೈಗೊಂಡಿದ್ದು, ವಿನ್ಯಾಸಗಳನ್ನು ತಯಾರಿಸಿ, ವಿವರವಾದ ಯೋಜನಾ ವರದಿ ತಯಾರಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗವುದು. ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ . . .

ಶ್ರೀ ಎಸ್.ಎಂ. ನಾರಾಯಣಸ್ವಾಮಿ:- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ಆಮೇಲೆ ಕೇಳಿ.

ಶ್ರೀ ಎಸ್.ಎಂ. ನಾರಾಯಣಸ್ವಾಮಿ:- ಎತ್ತಿನ ಹೊಳೆ ಬಗ್ಗೆ ಕೇಳುತ್ತಿದ್ದೇನೆ. ಕೇವಲ ಎಲ್ಲಾ ಮಾತನಾಡುತ್ತಾರೆ. ಕೋಲಾರ ಜಿಲ್ಲೆಯ ಎಲ್ಲ ಪಾಪ ಎಂದು ತೋರಿಸುತ್ತೀರಿ. ಆದರೆ, ಕೋಲಾರ ಜಿಲ್ಲೆಯ ಬಗ್ಗೆ ಮಾತ್ರ ಯಾರೂ ಮಾತನಾಡುವುದಿಲ್ಲ.

ಅಧ್ಯಕ್ಷರು:- ಆಯಿತು, ನೋಡೋಣ, ಮಾಡುತ್ತಾರೆ, ತೆಗೆದುಕೊಳ್ಳಿ.

ಶ್ರೀ ಎಸ್.ಎಂ. ನಾರಾಯಣಸ್ವಾಮಿ:– ಒಂದು ವರ್ಷದ ಹಿಂದೆ ಮಾನ್ಯ ಮುಖ್ಯಮಂತ್ರಿಯವರು ಈ ಯೋಜನೆಗೆ ಚಾಲನೆ ಕೊಟ್ಟರು. ಆದರೆ, ಇವತ್ತಿಗೂ, ಟೆಂಡರ್ ಕರೆದಿದ್ದೇವೆ, ಪ್ರಾರಂಭ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ.

ಅಧ್ಯಕ್ಷರು:– ಆಯಿತು, ನೋಡಿಕೊಂಡು ಬರೋಣ. ಒಂದು ಕೆಲಸ ಮಾಡಿ. ಕೋಲಾರ ಜಿಲ್ಲೆಯ MLA ಗಳನ್ನು ಒಂದು ದಿವಸ ಕರೆದುಕೊಂಡು ಹೋಗಿ ತೋರಿಸಿ.

(ಗೊಂದಲ)

ಅಧ್ಯಕ್ಷರು:– ಮಾಡೋಣ. ತೊಂದರೆ ಇದೆ, ಅಷ್ಟು ಸುಲಭವಿಲ್ಲ.

(ಗೊಂದಲ)

ಅಧ್ಯಕ್ಷರು:– ಕೋಲಾರ ಜಿಲ್ಲೆಯಲ್ಲಿ ಎಂಥೆಂಥವರೆಲ್ಲ ಮಂತ್ರಿಗಳಾಗಿದ್ದರು.

ಶ್ರೀ ಎಸ್.ಎಂ. ನಾರಾಯಣಸ್ವಾಮಿ:– ಇಲ್ಲ ಮಾನ್ಯ ಅಧ್ಯಕ್ಷರೆ. ಮಂತ್ರಿಗಳಾಗಿದ್ದರು. ಆದರೂ ಕೂಡ. . . .

ಅಧ್ಯಕ್ಷರು:– ಕಷ್ಟವಿದೆ. ಅಷ್ಟು ಸುಲಭದ್ದಲ್ಲ. ಆಯಿತು. ತಿಳಿದುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಪ್ರಯತ್ನ ಮಾಡಿದ್ದಾರೆ.

(ಗೊಂದಲ)

ಶ್ರೀ ಪಿ.ಆರ್. ಸುಧಾಕರ್‌ಲಾಲ್:– ಜನರು ಸರ್ಕಾರ ಯಾವಾಗ ನೀರು ಕೊಡುತ್ತದೆಂದು ಕಾಯುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಆರ್. ಸುಧಾಕರ್‌ಲಾಲ್:– ಇವತ್ತು ಕುಡಿಯುವುದಕ್ಕೆ ನೀರಿಲ್ಲ. ಸಾವಿರ ಅಡಿವರೆಗೆ ಕೊರೆದರೂ ನೀರು ಸಿಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ಈಗ ಆಗುವುದಿಲ್ಲ. ಅವರು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಎಂ. ನಾರಾಯಣಸ್ವಾಮಿ:– ಎರಡೇ ನಿಮಿಷ.

(ಗೊಂದಲ)

ಅಧ್ಯಕ್ಷರು:– ನೀವು ಆಮೇಲೆ ಕೇಳಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಟೆಂಡರ್ ಪ್ರಕ್ರಿಯೆ ಮುಗಿದು work award ಆಗಿ ಅವರು ಸರ್ವೆ ಕೆಲಸಗಳನ್ನು complete ಮಾಡಿ ಇಬ್ಬರು contractor mobilization ಕೂಡ ಮಾಡಿಕೊಂಡಿದ್ದಾರೆ. ಬಹುಶಃ ತಾವು ಹೇಳಿದ suggestion ಇತ್ತು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ಎಲ್ಲಾ ಶಾಸಕರನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ, ನೇತೃತ್ವದಲ್ಲಿ ಸಭೆ ಮಾಡಿ, ಈಗ ಮಳೆಗಾಲದ ಸಮಯವಿದೆ. ಈಗ ಅಲ್ಲಿ ಕೆಲಸ ಮಾಡಲಿಕ್ಕಾಗುವುದಿಲ್ಲ. ಅದನ್ನು ಮುಗಿಸಿ, ನಾವು permission ಕೊಟ್ಟು, ಅವರೇನು turn key ಆಧಾರದ ಮೇಲೆ ಕೆಲಸ ಮಾಡಿದ್ದರು, ಅದನ್ನು ಮಾಡಿಕೊಂಡು ಇವತ್ತಿನ ದಿವಸ ಕೆಲಸ ಪ್ರಾರಂಭ ಮಾಡುತ್ತೇವೆ. ಭದ್ರಾ ಮೇಲ್ದಂಡೆ ಯೋಜನೆಯ ಸ್ವರೂಪವನ್ನು ವಿಸ್ತರಿಸಿ ಸುಮಾರು 29.90 TMC ನೀರಿನ ಬಳಕೆ ಮಾಡಿಕೊಂಡು 2 ಲಕ್ಷದ 25 ಸಾವಿರ 500 ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು ನೀರಾವರಿ ಸೌಲಭ್ಯ ಕಲ್ಪಿಸುವ 12,340 ಕೋ.ರೂ. ಪರಿಷ್ಕೃತ ಇದೆ, ಅದನ್ನು Cabinet ಮುಂದೆ administrative approval ಗೆ ತರುತ್ತೇವೆ. ಆಡಳಿತಾತ್ಮಕ ಅನುಮೋದನೆಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಅದನ್ನು Cabinet ಮುಂದೆ ತಂದು ಇದಕ್ಕೆ ಅನುಮೋದನೆ ಕೊಡುತ್ತೇವೆ. ಸದರಿ ಪರಿಷ್ಕೃತ ಯೋಜನೆಯಡಿಯಲ್ಲಿ ತಿಪ್ಪೇಸ್ವಾಮಿಯವರೆ, ವರದಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ಹಾಗೂ ತರೀಕೆರೆ ತಾಲ್ಲೂಕುಗಳಿಗೆ,

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಿಗೆ, ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿಗೆ ಮತ್ತು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಸಿರಾ ಮತ್ತು ಪಾವಗಡ ತಾಲ್ಲೂಕುಗಳಿಗೆ ನೀರು ಪೂರೈಸಲು ಪ್ರಸ್ತಾಪಿಸಲಾಗಿದೆ. ಸದರಿ ಯೋಜನೆಯು ರಾಷ್ಟ್ರೀಯ ಯೋಜನೆಯಾಗಿದ್ದು. . . .

ಶ್ರೀ ಪಿ.ಆರ್. ಸುಧಾಕರ್‌ಲಾಲ್:- ಮಾನ್ಯ ಸಚಿವರೆ, ಕೊರಟಗೆರೆಗೆ ಸಂಬಂಧಪಟ್ಟಂತೆ, ಭದ್ರಾದಲ್ಲಿ ಸೇರಿದೆ ಎಂದು ಇಷ್ಟು ವರ್ಷ ಹೇಳುತ್ತಿದ್ದರು. ಇವತ್ತು ನೀವು ಕೊರಟಗೆರೆ ಬಿಟ್ಟು ಬೇರೆ ಜಿಲ್ಲೆಗಳನ್ನು ಹೇಳುತ್ತಿದ್ದೀರಿ. ಬೇರೆ ತಾಲ್ಲೂಕುಗಳನ್ನು ಹೇಳುತ್ತಿದ್ದೀರಿ.

ಶ್ರೀ ಎಂ.ಬಿ. ಪಾಟೀಲ್:- ನಾನು ಅದನ್ನು ಪರಿಶೀಲನೆಯನ್ನು ಮಾಡಿಸುತ್ತೇನೆ. ಕೊರಟಗೆರೆಗೂ ಕೂಡ ಅದು . . .

ಅಧ್ಯಕ್ಷರು:- ಮುಂಚೆ ಏನು ಸೇರಿದೆ ಅದನ್ನು ಸೇರಿಸಿಕೊಳ್ಳಿ.

ಶ್ರೀ ಎಂ.ಬಿ. ಪಾಟೀಲ್:- ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ:- ಭದ್ರಾ ಬಗ್ಗೆ ಹೇಳಬೇಕಾದರೆ ಸಾಸಿವೆ ಹಳ್ಳಿ Project ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವಾಗಿತ್ತು. 500 ಕೋ.ರೂ. ಎಂದು ಆಗಿತ್ತು. ಅದರ ಮಧ್ಯೆ ಕ್ಷೇತ್ರದ ಮೇಲೆ ಬರತಕ್ಕಂಥದ್ದು. 18 ಹಳ್ಳಿಗಳು ಬಿಟ್ಟುಹೋಗಿದೆ. ಅದನ್ನು consider ಮಾಡಿ.

ಅಧ್ಯಕ್ಷರು:- ಆಮೇಲೆ ಕೇಳಿ.

ಶ್ರೀ ಕೆ. ಶಿವಮೂರ್ತಿ:- ಸಾಸಿವೆ ಹಳ್ಳಿ Project, ಭೀಮ ಸಮುದ್ರಕ್ಕೆ ಬರುವುದು.

ಅಧ್ಯಕ್ಷರು:- ಮಾತನಾಡಿ. ಅವರ reply ಒಂದು ಸಾರಿ ಆದಮೇಲೆ ಏನಾದರೂ ಇದ್ದರೆ ಆಮೇಲೆ ಕೇಳಿ.

ಶ್ರೀ ಕೆ. ಶಿವಮೂರ್ತಿ:- ನಮ್ಮ ಕೆರೆಯಿಂದ ನೀರು ಮುಂದೆ ಹೋಗುವುದು.

ಅಧ್ಯಕ್ಷರು:- ನೀವು ಅವರು ಕುಳಿತುಕೊಂಡು ಮಾಡಿ.

ಶ್ರೀ ಕೆ. ಶಿವಮೂರ್ತಿ:- ದಯವಿಟ್ಟು, ಸಾಸಿವೆಹಳ್ಳಿ ಬಗ್ಗೆ ಪ್ರಸ್ತಾಪ ಮಾಡಬೇಕು.

ಶ್ರೀ ಎಂ.ಬಿ. ಪಾಟೀಲ್:- ನಾನೀಗ ಭದ್ರಾ ಮೇಲ್ದಂಡೆ ಬಗ್ಗೆ ಮಾತನಾಡುತ್ತಿದ್ದೆ. ಈ ಯೋಜನೆಯನ್ನು ನಾವು ರಾಷ್ಟ್ರೀಯ ಯೋಜನೆಯಾಗಿ ಏಕೆಂದರೆ 2 ಲಕ್ಷ ಹೆಕ್ಟೇರ್‌ಗಿಂತ ಜಾಸ್ತಿ ಇರುತ್ತದೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಅದು ರಾಷ್ಟ್ರೀಯ ಯೋಜನೆಯಾಗಿರುತ್ತದೆ. National Project ಆದರೆ ಅದಕ್ಕೆ 90% central assistance ಬರುತ್ತದೆ. ರಾಜ್ಯದ 10% assistance ಇರುತ್ತದೆ. ಅದಕ್ಕೆ ನಾವು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕಾವೇರಿ ಕೊಳ್ಳದ ಕಾಮಗಾರಿಗಳು. ಇನ್ನು, ಸಿಂಗಟಾಲೂರು ಇದೆ, Upper Tunga ಇದೆ. ಅದರ detail ಆಗಿ ಹೇಳುತ್ತಾ ಹೋದರೆ ಉತ್ತರ ಕೊಡುವುದು ಬಹಳಷ್ಟಿದೆ. Specific ಆಗಿ answer ಕೊಡುವುದಕ್ಕಿಂತ ಮುಂಚಿತವಾಗಿ ಕೆಲವೊಂದು ವಿಚಾರಗಳನ್ನು, ಯಾರೂ ತಪ್ಪು ಭಾವಿಸಬಾರದು. ಕೆಲವೊಂದು ಪ್ರಸ್ತಾಪ ಮಾಡಿ, ಬಿಟ್ಟು ಹೋಗಿದೆ ಎಂದು ಅರ್ಥವಾಗಲಾರದು.

ಶ್ರೀ ಮನೋಹರ್ ಹೆಚ್. ತಹಶೀಲ್ದಾರ್:- Upper Tunga ಬಗ್ಗೆ ಹೇಳಬೇಕು.

ಶ್ರೀ ಎಂ.ಬಿ. ಪಾಟೀಲ್:- ನಿಮ್ಮ questions ನಲ್ಲಿ ಬಂದಾಗ ಹೇಳುತ್ತೇನೆ. ಕಾವೇರಿ ಕೊಳ್ಳದ ಕಾಮಗಾರಿಗಳು. ರಾಜಾ ಪರಮೇಶ್ವರಿ ಹಾಗೂ ಬಿಜೈ ಅಣೆಕಟ್ಟುಗಳ ನಾಲೆಗಳ ಆಧುನೀಕರಣ ಪ್ರಗತಿ. ಹಲಸೂರು, ರಾಮಸ್ವಾಮಿ ಅಣೆಕಟ್ಟುಗಳ, ನಾಲೆಗಳ ಟೆಂಡರ್ ಪ್ರಕ್ರಿಯೆ ಇದೆ. ಶ್ರೀರಾಮದೇವರು ಅಣೆಕಟ್ಟು ಆಧುನೀಕರಣ, ಚಿಕ್ಕನಂದಿ ಏತ ನೀರಾವರಿ ಯೋಜನೆ, ಶ್ರೀರಂಗ ಕುಡಿಯುವ ನೀರಿನ ಯೋಜನೆ ಟೆಂಡರ್ ಪ್ರಕ್ರಿಯೆಯಲ್ಲಿದೆ. ಅರ್ಕಾವತಿ ನದಿಯ ಪುನಶ್ಚೇತನ ಕಾಮಗಾರಿಗಳ ಬಗ್ಗೆ

ಜನರು ಬಹಳಷ್ಟು ನನಗೆ ಕೇಳುತ್ತಿದ್ದರು. ಮಾಧ್ಯಮದವರೂ ಕೇಳುತ್ತಿದ್ದರು. ಅರ್ಕಾವತಿಯನ್ನು ನಾವು modernization ಮಾಡುವುದಕ್ಕೆ ಬಂದಿದ್ದೇವೆ. ಏಕೆಂದರೆ, ಹಿಂದೆ ADB ಯವರು ಇನ್ನಿತರ ವಿದೇಶಿ agency ಗಳು ಕೂಡ ಬಂದಿದ್ದವು. ಅದನ್ನು ಅಭಿವೃದ್ಧಿಪಡಿಸಬೇಕೆಂದು ಇತ್ತು. ನಾವು ಈಗಾಗಲೇ RFP ಅನ್ನು ಇವತ್ತಿನ ದಿವಸ ಕರೆದಿದ್ದೇವೆ. DPR propose ಮಾಡಿಕೊಂಡು, DPR ready ಆದಮೇಲೆ agency ಗಳಿಗೆ, ಏಕೆಂದರೆ, ಎಲ್ಲೆಲ್ಲಿ ಏನೇನಿದೆ ಎನ್ನುವ ಮಾಹಿತಿಯಾದರೂ ನಿಮಗೆ ಸಿಗುತ್ತದೆ. ಅದನ್ನು ತಿಳಿದುಕೊಂಡ ಮೇಲೆ ಆ ಕೆಲಸ ಮುಂದುವರಿಸಿಕೊಂಡು ಹೋಗುತ್ತೇವೆ. ಚೇಳೂರು ಕೋಡಿಯಾಳ, ಹಾಗಲವಾಡಿ, ಅಳಲಘಟ್ಟ, ಮತ್ತಿಕೆರೆ, ಚಿಕ್ಕೇಗುಡ್ಡ, ಶಿವಸಂದ್ರ, ಗುಂಡ್ಲುಪೇಟೆ, ಗಾಂಧಿಗ್ರಾಮ, ಅರಕಲುಗೂಡು ಕೆರೆ ತುಂಬಿಸುವ ಯೋಜನೆಗಳು ಇವತ್ತಿನ ಟೆಂಡರ್ ಪ್ರಕ್ರಿಯೆಯಲ್ಲಿವೆ. ವಿಶ್ವೇಶ್ವರ ನಾಲಾ ಜಾಲದ ಎರಡನೇ ಹಂತದ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಕಬಿನಿ ಬಲದಂಡೆ ವಿತರಣಾ ನಾಲಾ 42 ರ ಸಂತೇಮಾನಹಳ್ಳಿ ಹಾಗೂ ಹನ್ನೂರು ವಿತರಣಾ ನಾಲೆಗಳ 11 ಕೋಟಿ 10 ಲಕ್ಷದ tender ಇಂದು ಪ್ರಕ್ರಿಯೆಯಲ್ಲಿದೆ. ತಾವು ಹೇಳಿದ್ದನ್ನು ಗಮನಕ್ಕೆ ತಂದಿದ್ದೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಮಾನ್ಯ ಸಚಿವರೆ,

ಅಧ್ಯಕ್ಷರು:- ಆಮೇಲೆ ಹೇಳುತ್ತಾರೆ ಬಿಡಿ. ಅವರು ಉತ್ತರ ಹೇಳಲಿ ಬಿಡಿ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ನಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ, clarification ಕೇಳುತ್ತೇವೆ.

ಅಧ್ಯಕ್ಷರು:- ನಿಮಗೆ clarification ನಲ್ಲಿ ಕೊಡಿಸುತ್ತೇನೆ ಸುಮ್ಮನಿರಿ.

ಶ್ರೀ ಎಂ.ಬಿ. ಪಾಟೀಲ್:- ತಾರಕ ಎಡದಂಡೆ ನಾಲೆಯ ಸುಮಾರು 13 ಕೋಟಿ 25 ಲಕ್ಷಕ್ಕೆ ಕಾಮಗಾರಿ ಪ್ರಕ್ರಿಯೆಯಲ್ಲಿವೆ. ಅಲಂಬೂರು ಗ್ರಾಮದ ಬಳಿ ಕಬಿನಿ ನದಿಯಿಂದ ನೀರನ್ನು ಎತ್ತಿ ಚಾಮರಾಜನಗರ, ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ 20 ಕೆರೆಗಳನ್ನು ತುಂಬಿಸುವ ಮೂಲಕ

52 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ ಪ್ರಗತಿಯಲ್ಲಿದೆ. ದೋಣಿ ನದಿ ಮತ್ತು ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿ, ಮಾನ್ಯ ಜಗದೀಶ್ ಶೆಟ್ಟರವರು ಇಲ್ಲ.

ಶ್ರೀ ಸಿ.ಎನ್. ಬಾಲಕೃಷ್ಣ:- ನಮ್ಮದೊಂದು ಚನ್ನರಾಯಪಟ್ಟಣ ತಾಲ್ಲೂಕಿನದ್ದು..

ಶ್ರೀ ಎಂ.ಬಿ. ಪಾಟೀಲ್:- ನಿಮ್ಮದು ಎಲ್ಲಾ ವೈಯುಕ್ತಿಕ request ಇಲ್ಲಿ ಇವೆ, ನಂತರ ಅದಕ್ಕೆ ಬರುತ್ತೇನೆ. ಕೆಲವೊಂದು highlights ಹೇಳುತ್ತಿದ್ದೇನೆ. ದೋಣಿ ನದಿ ಪ್ರವಾಹದಿಂದ ಉಂಟಾಗಿರುವ ಹಾನಿಯನ್ನು ನಿಯಂತ್ರಿಸುವುದಕ್ಕೆ ಕೇಂದ್ರ ಸರ್ಕಾರದ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆ ಯೋಜನೆಯಡಿ ವಿವರವಾದ ಯೋಜನಾ ವರದಿ ತಯಾರಿಸಲಿಕ್ಕೆ Central Government ನ WAPCOS ಸಂಸ್ಥೆಗೆ ನೀಡಲಾಗಿದೆ. ಇಲ್ಲಿಯವರೆಗೆ ಏನಾಗಿದೆ ಎಂದರೆ, ಬಹಳ ಸಲ ನಾವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತಿದ್ದೆವು. ಅರ್ಜಿ ಮೂಲಕ ಪ್ರಸ್ತಾವನೆ ಹೋದಾಗ ಅವರು consider ಮಾಡುತ್ತಿರಲಿಲ್ಲ. ಅದಕ್ಕೆ specific ಆಗಿ ನಾವು DPR ready ಮಾಡಬೇಕು. ಅದನ್ನು flood protection norms ಪ್ರಕಾರ ಮಾಡಿದಾಗ ಅದು ನಮಗೆ 90% grant flood control ನಲ್ಲಿ ಬರುತ್ತದೆ. ಇದನ್ನು WAPCOS ಎಂಬ ಸಂಸ್ಥೆಗೆ ಕೊಟ್ಟಿದ್ದೇವೆ. ದೋಣಿ ನದಿ ಪಾತ್ರದಲ್ಲಿ DPR ಮಾಡುವುದಕ್ಕೆ ಆ ಸಂಸ್ಥೆಯವರು ಪ್ರಾರಂಭಿಸಿದ್ದಾರೆ. ಅದೇ ರೀತಿ ಬೆಣ್ಣೆಹಳ್ಳ, ಧಾರವಾಡ ಮತ್ತು ಈ ಭಾಗದಲ್ಲಿ ನಮ್ಮ ದೋಣಿ ನದಿಯ ರೀತಿಯಲ್ಲಿ ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಯೋಜನೆಯನ್ನು CWC norms ಪ್ರಕಾರ WAPCOS ಸಂಸ್ಥೆಗೆ ವಹಿಸಿದ್ದೇವೆ.

ಶ್ರೀ ಎಸ್.ಹೆಚ್. ಕೋನಾರೆಡ್ಡಿ:- ಅದು ಏನು ಮಾಡುತ್ತಿಲ್ಲ ಸಾರ್. ಬೆಣ್ಣೆಹಳ್ಳ ಯೋಜನೆಗೆ 36 ಕೋಟಿ ಕೊಟ್ಟಿದ್ದರೂ ಏನೂ ಮಾಡಲಿಲ್ಲ.

ಶ್ರೀ ಎಂ.ಬಿ. ಪಾಟೀಲ್:- ಬೆಣ್ಣೆಹಳ್ಳದ್ದು ಕೂಡ ಅವರು start ಮಾಡುತ್ತಾರೆ. ಬಹಳ ಜನ ಸದಸ್ಯರು ನೀರಾವರಿ ಜಲಾಶಯಗಳ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ dams ನಲ್ಲಿ ಆಗಬೇಕೆಂದು ಹೇಳಿದ್ದಾರೆ. ನಾವು

ಇಲ್ಲಿಯವರೆಗೆ ಬರೀ garden ಮಾತ್ರ ಮಾಡುತ್ತಿದ್ದೆವು. ಆಲಮಟ್ಟಿ ಮತ್ತೊಂದು ಕಡೆ garden ಮಾಡಿದ್ದೇವೆ. Maintenance ಕೂಡ ಸಮಸ್ಯೆಗಳಾಗಿವೆ. ಬಹಳ ಚೆನ್ನಾಗಿ ಮಾಡಿದ್ದರೂ ಸಾಕಷ್ಟು ಸಮಸ್ಯೆಗಳಾಗಿವೆ. ಇದು ಒಂದು ಸಮಗ್ರ ಅಭಿವೃದ್ಧಿಯಾಗಬೇಕು. ನಾವು ಮತ್ತು Tourism Department ನವರು ಸೇರಿಕೊಂಡು ಮಾಡಬೇಕಾಗಿದೆ. Forest Department ನಲ್ಲಿ ECO Tourism Board ಎಂದು ಇದೆ. ಇಲ್ಲಿ ಎಲ್ಲರೂ ಕೂಡಿ ಈ ಉದ್ಯಾನಗಳ ಅಭಿವೃದ್ಧಿಯ ಜೊತೆಗೆ ಅಲ್ಲಿ ಪರಿಸರ ಸ್ನೇಹಿ, eco friendly cottages, tree houses, log huts, tents, ಅಂದರೆ ಮಧ್ಯಮ ವರ್ಗ ಮತ್ತು ಕೇಳವರ್ಗದ ಸಾಮಾನ್ಯ ಜನರಿಗೂ ಕೂಡ affordable cost ನಲ್ಲಿ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ boating ವ್ಯವಸ್ಥೆ recreation facilities ಏನಿವೆ, ಮಕ್ಕಳಿಗೆ ಆಟ ಆಡಲಿಕ್ಕೆ, ಇನ್ನಿತರ swimming pool ಇವೆಲ್ಲವುಗಳನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಮುಖ್ಯವಾಗಿ ಆಲಮಟ್ಟಿ to ಕೂಡಲ ಸಂಗಮದಲ್ಲಿ ಒಂದು boating ವ್ಯವಸ್ಥೆಯನ್ನು ಸಾಮಾನ್ಯ ಜನರಿಗೆ ಮಾಡಬೇಕೆಂದು ಬಹಳ ಬೇಡಿಕೆ ಇದೆ. ಬೋಟಿಂಗ್ ಎಂದರೇನು high-tech boating ವ್ಯವಸ್ಥೆಯಲ್ಲ. ಗೋವಾಕ್ಕೆ ಹೋದಾಗ passengers ಅನ್ನು ferry ಮಾಡುತ್ತಾರೆ. ಆ ರೀತಿಯಾಗಿ ಆಲಮಟ್ಟಿಯಿಂದ ಕೂಡಲ ಸಂಗಮದವರೆಗೆ boat ಮಾದರಿಯಲ್ಲಿ ನಾವೊಂದು boating ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಆಲಮಟ್ಟಿ, ನಾರಾಯಣಪುರ, ಹಿಡಕಲ್, ಮಲಪ್ರಭ ಅಂದರೆ ಸವದತ್ತಿ, ಹಾರಂಗಿ, ಕಬಿನಿ. ಹೇಮಾವತಿ ಜಲಾಶಯಗಳ ಅಭಿವೃದ್ಧಿಯನ್ನು category-1 ನಲ್ಲಿ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದ್ದೇವೆ. Category-1 ಎಂದರೆ ಯಾವುದು demand ಜಾಸ್ತಿ ಇರುತ್ತದೆ. ಎರಡು ತರಹ category ಯಲ್ಲಿ development ಮಾಡುತ್ತೇವೆ. Category-1 ಎಂದರೆ Stage-1, Stage-2 ಅಲ್ಲ. ಹೆಚ್ಚಿಗೆ demands ಬರುವುದನ್ನು category-1 ಎಂದು ಮಾಡಿದ್ದೇವೆ. ಇದನ್ನು ಇನ್ನೂ review ಮಾಡುವಂಥ process ಇದೆ. category-2 ನಲ್ಲಿ ನಮ್ಮ ಸಂದೇಶ ನಾಗರಾಜ್‌ರವರು ವಿಧಾನ ಪರಿಷತ್ತಿನಲ್ಲಿ ಗುಂಡಿಹಾಳ, ನುಗು, ಮಾರ್ಕೋನಹಳ್ಳಿ ಇನ್ನಿತರ ಬಗ್ಗೆ ಕೇಳಿದರು. ಇದರರ್ಥ

2–3–4 sights ನಮಗೆ ಎಲ್ಲೆಲ್ಲಿ ಸಿಗುತ್ತದೆ ಅವುಗಳನ್ನು eco-friendly private partner-ship, ಪರಿಸರ ಸ್ನೇಹಿಯಿಂದ ನಾವು ಅದನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಅಲ್ಲಿ ಎಲ್ಲಾ natural materials use ಮಾಡುತ್ತೇವೆ. ಅದಕ್ಕೊಂದು Committee ಮಾಡಿ ಎಲ್ಲರನ್ನೂ involve ಮಾಡಿಕೊಂಡು, plastic ಇರಬಹುದು, chemical soaps ಇರಬಹುದು ಇವನ್ನೆಲ್ಲಾ avoid ಮಾಡಿ local materials ತೆಗೆದುಕೊಂಡು ಕಟ್ಟುವಂಥ ಕೆಲಸ ಆಗುತ್ತದೆ.

ಶ್ರೀ ಎನ್.ಹೆಚ್. ಕೋನಾರೆಡ್ಡಿ:– ಮಲಪ್ರಭದ್ದು ನೀವು category-1 ಎಂದು ತಾವು ಹೇಳಿದಿರಲ್ಲ category-1 ನಲ್ಲಿ ದುಡ್ಡು ತೆಗೆದುಕೊಂಡು ಯಾವ ಕೆಲಸ ಮಾಡಬಾರದೆ? ಅಲ್ಲಿ ಏನೂ ಕೆಲಸವಾಗುತ್ತಿಲ್ಲ. ಅಲ್ಲಿ ಹೊಸ work ಕರೆದರು.. ದಯವಿಟ್ಟು ಸಾರ್ ನಮ್ಮ ಭಾಗದ ಯೋಜನೆ. 58 ಸಾವಿರ ಹೆಕ್ಟೇರ್ ನಮ್ಮ ಕ್ಷೇತ್ರಕ್ಕೆ ಬರುತ್ತದೆ, 3 Division ಮತ್ತು 12 Sub Divisions ಬರುತ್ತವೆ. ಎಲ್ಲಾ ಖಾಲಿ ಕುಳಿತವರೆ ಅವರಿಗೆ ಸ್ವಲ್ಪ ಕೆಲಸ ಕೊಡಿ.

ಶ್ರೀ ಎಂ.ಬಿ. ಪಾಟೀಲ್:– ಆಲಮಟ್ಟಿ, ಕಬಿನಿ, ಇವುಗಳಿಗೆ ನಾವು private partnership ನಲ್ಲಿ ಕರೆದಾಗ ಬಹಳಷ್ಟು ಮಂದಿ ಮುಂದೆ ಬರುತ್ತಾರೆ. ಕೆಲವು ಜನ ಕೆಲವೊಂದು ಸಣ್ಣ ಸಣ್ಣ sight ಗೆ ಕೆಲವು ಜನ category–1 ಗೆ ಹಾಕಿದರೆ ಬರುವುದಿಲ್ಲ. ಅದಕ್ಕೊಂದು model ಬೇರೆ ಇರುತ್ತದೆ. ಇದರರ್ಥ ನಾವು ಅದನ್ನು ಬಹಳ ಚೆನ್ನಾಗಿ ನೀಟಾಗಿ ಸಮಗ್ರ ಅಭಿವೃದ್ಧಿ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೆ, ತಾವು ಬೆಳಗ್ಗೆ ಈ ದಿವಸ ಬಹಳ ಮುಖ್ಯವಾದ suggestion ಕೊಟ್ಟಿದ್ದಿರಿ, ನಾನು ಅದರ ಬಗ್ಗೆ ಬಹಳ ದಿವಸಗಳಿಂದ ವಿಚಾರ ಮಾಡುತ್ತಿದ್ದೇವು. ಎಂದಾದರೊಂದು ಸಲ ನಾವು ಕಠಿಣವಾದ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಜಲಾಶಯಗಳೇನಿವೆ, ಡ್ಯಾಂ ಗಳಿವೆ, ಮಾನ್ಯ ಕಾರಜೋಳ್‌ರವರೆ ಇದು ಬಹಳ ಮಹತ್ವದ ವಿಚಾರ. ಈ ಡ್ಯಾಮ್ಸ್‌ನಿಂದ ಏನಾಗುತ್ತದೆ ಎಂದರೆ, ಇನ್ನೊಂದು ಹತ್ತಿಪ್ಪತ್ತು ವರ್ಷ ಬಿಟ್ಟರೆ, ಈಗಾಗಲೇ ಕೆಲವು ಆಗಿವೆ. ಇವೆಲ್ಲವೂ ಕೂಡ drinking water schemes ಎಂದಾಗುತ್ತದೆ. ಏಕೆಂದರೆ drinking water ಗೆ top priority. First priority goes to drinking water. Irrigation becomes secondary. ನೀರಾವರಿಗೆ ಎರಡನೇ ಪ್ರಾಶಸ್ತ್ಯ

ಬರುತ್ತದೆ. ಅದಕ್ಕೆ ನಾವು ವಿಚಾರ ಮಾಡಿ, ನಮ್ಮ command area ದಲ್ಲಿ ಕಬ್ಬು ಹಾಗೂ ಇನ್ನಿತರ ಬೆಳೆಗಳನ್ನು ಬೆಳೆಯುತ್ತೇವೆ, ಇದೆಲ್ಲದಕ್ಕೂ ಕೂಡ ನಾವು micro irrigation ಗೆ convert ಮಾಡಲಿಕ್ಕೆ, ಅದಕ್ಕೊಂದು ನಾವು Modality support system ಅನ್ನು work ಮಾಡುತ್ತಿದ್ದೇವೆ. ಮಾನ್ಯ ಉಮೇಶ್ ಕತ್ತಿಯವರು ಕೂಡ ಸಲಹೆ ಕೊಟ್ಟಿದ್ದರು. ಎಂ.ಬಿ. ಪಾಟೀಲ್‌ರೆ, ಇವತ್ತಿನ ದಿವಸ 1 ಲಕ್ಷ ಹೆಕ್ಟೇರ್ 2 ಲಕ್ಷ ಹೆಕ್ಟೇರ್ 3 ಲಕ್ಷ ಹೆಕ್ಟೇರ್‌ನ್ನು conversion ಮಾಡುವಾಗ ಕಬ್ಬಿಗೆ ಬಹಳ ಒಳ್ಳೆಯ ರೀತಿಯ micro irrigation ಬರುತ್ತದೆ. Drip irrigation ಮಾಡುವ ಮೂಲಕ ನಾವು ಇದನ್ನೆಲ್ಲವೂ ಕೂಡ ನಮ್ಮ command area ದಲ್ಲಿ ಬರುವುದನ್ನೆಲ್ಲವೂ ಕೂಡ drip ಗೆ convert ಮಾಡಲಿಕ್ಕೆ ಮಹತ್ವಾಕಾಂಕ್ಷಿ ಯೋಜನೆಯನ್ನು ಇಟ್ಟುಕೊಂಡು ನಾವು ಈಗ modalities work ಮಾಡುತ್ತಿದ್ದೇವೆ. ಅದರಲ್ಲಿ loan component ಎಷ್ಟು? Subsidy component ಎಷ್ಟು? Farmer contribution ಎಷ್ಟು? Sugar factory component ಎಷ್ಟು? ಇದನ್ನು ಒಂದು understanding ಮಾಡಿಕೊಳ್ಳುತ್ತಿದ್ದೇವೆ. ದೊಡ್ಡ ಕಂಪನಿಗಳು, service providers ಏನಿದ್ದಾರೆ, micro irrigation ನಲ್ಲಿ ಜಗತ್ತಿನಲ್ಲಿ ಎರಡು ದೊಡ್ಡ ಕಂಪನಿಗಳು ಇವೆ. (1) Israel ನಲ್ಲಿ NETAFIM (2) ನಮ್ಮ ದೇಶದ JAIN Irrigation ಇವೆರಡು ಕೂಡ World No.1 & No.2 ಅವರನ್ನು ಮತ್ತು sugar factories, ಸರ್ಕಾರ, Agriculture Department, ನಾವೆಲ್ಲರೂ ಕೂಡಿಕೊಂಡು ಒಂದು ಯೋಜನೆಯನ್ನು ರೂಪಿಸಿ ಎಲ್ಲರನ್ನೂ ಕೂಡ convert ಮಾಡಿ ರೈತರಿಗೆ ಎರಡು ವರ್ಷ gestation period ಕೊಡುತ್ತೇವೆ. ಅವರು ಅದನ್ನು ನೋಡಿ ನಿಜವಾಗಿಯೂ ಅನುಭವಿಸಲಿ. ನಾವು drip ಅಳವಡಿಸಿಕೊಂಡರೆ ನಮಗೆ ಇಷ್ಟು benefit ಆಗಿದೆ. ನಮಗೆ ಇಳುವರಿ ಹೆಚ್ಚಿಗೆ ಬಂದಿದೆ. ಅವರು ಕೂಡ convince ಆಗುವಂಥದ್ದು. ಒಟ್ಟಾರೆ 5 ವರ್ಷಗಳಲ್ಲಿ ಹಂತ ಹಂತವಾಗಿ ಅಂದರೆ, ಪ್ರಥಮವಾಗಿ ಮೊದಲ ಎರಡು ವರ್ಷದಲ್ಲಿ 10% 3rd yearಗೆ 25%, 5th year ಗೆ 5% conversion ಮಾಡಿಕೊಳ್ಳಬೇಕು. ಏಕೆಂದರೆ, ನಾವು 100% ಗೆ ಟಾರ್ಗೆಟ್ ಮಾಡಿ ಕೊನೇ ಪಕ್ಷ 50% ಆದರೂ conversion

ಆಗಬೇಕಾಗುತ್ತದೆ. ಮತ್ತೆ ಇದರ ಮೇಲೆ regulation ಮಾಡುವುದಕ್ಕೆ ಸಾಧ್ಯವಿದೆ. ಇದರ ರಿಕವರಿಯನ್ನು ಹೇಗೆ ಮಾಡುತ್ತಾರೆಂಬ ವಿಚಾರ ಬಹಳಷ್ಟು ಕಡೆಯಿಂದ ಬರುತ್ತಿದೆ. ಶುಗರ್ ಫ್ಯಾಕ್ಟರಿಗೆ ಸರ್ಕಾರ ಗ್ಯಾರಂಟಿಯಾಗಿ ಆ ಒಂದು ಸ್ಕೀಂ ಅನ್ನು devise ಮಾಡುತ್ತಿದೆ.

ಶ್ರೀ ಉಮೇಶ್ ವಿ. ಕತ್ತಿ:– ಇದನ್ನು ಮಾಡಿದರೆ 15 ಸಾವಿರ ಎಕರೆ ನೀರಾವರಿ ಪ್ರದೇಶಕ್ಕೆ ಬಳಸುವಂಥ ನೀರಿನಿಂದ ಸುಮಾರು 30 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವಿದೆ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಉಮೇಶ್ ಕತ್ತಿಯವರು ಹೇಳಿದ ಹಾಗೆ ನಾವು ಸ್ವಲ್ಪ ಬಲವಾದ ಇಚ್ಛಾಶಕ್ತಿಯನ್ನು ಮಾಡಿದರೆ 100% ಎಲ್ಲಾ ಕಮಾಂಡ್ ಏರಿಯಾದಲ್ಲಿ ಕಬ್ಬು ಮತ್ತು ಇನ್ನಿತರ ಬೆಳೆಗಳಾದ ಭತ್ತ, ಆದರೆ, ಭತ್ತಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಆದರೆ, ವಿಶೇಷವಾಗಿ ಕಬ್ಬು ಬೆಳೆಯತಕ್ಕಂಥದ್ದಕ್ಕೆ ಇದನ್ನು ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ, ಎಲ್ಲಾ ಮಾನ್ಯ ಸದಸ್ಯರ ಸಹಕಾರ ನಮಗೆ ಬೇಕಾಗುತ್ತದೆ. ಈ ಕೆಲಸವನ್ನು ನಾವು ಬಹಳ ದೃಢವಾಗಿ ಮಾಡುತ್ತೇವೆ. ಮುಖ್ಯವಾಗಿ ಇದರಿಂದ ಸಾಕಷ್ಟು ಟಿ.ಎಂ.ಸಿ. ನೀರು ಉಳಿತಾಯ ಆಗುತ್ತದೆ ಹಾಗೆಯೇ ನೀರಾವರಿ ಕ್ಷೇತ್ರವನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:– ಮಾನ್ಯ ಸಚಿವರೇ, ಒಂದು ನಿಮಿಷ ಯೀಲ್ಡ್ ಆಗಿ. ಕಬ್ಬು ಬೆಳೆಯುವ ಪ್ರದೇಶದಲ್ಲಿ Micro Irrigation system ಅಳವಡಿಸಿಕೊಂಡು ಮಾಡಿದರೆ 2–3 ಪಟ್ಟು ಆಗುತ್ತದೆ ಎಂಬ ಬಗ್ಗೆ ಬಹಳ ಹಿಂದಿನಿಂದ ಮಾತನಾಡಿಕೊಂಡು ಬಂದಿದ್ದೇವೆ. ಆದರೆ, ಡ್ಯಾಂ ಕೆಳಗಡೆ ಬರತಕ್ಕಂಥ ಕಮಾಂಡ್ ಏರಿಯಾದಲ್ಲಿ ಯಾವ್ಯಾವ ಕ್ರಾಪ್ಸ್‌ಗೆ ನೀರನ್ನು ಕೊಡಬೇಕೆಂದು ನೋಟಿಫೈ ಮಾಡಿದ್ದೀರಿ. ಆದರೆ, ಈಗ ಏನು discipline ಇದೆ ಎಂಬುದು ಗೊತ್ತಿದೆ. ಆದ್ದರಿಂದ, ಇದನ್ನು ಮೊದಲು ನಿಯಂತ್ರಣ ಮಾಡತಕ್ಕಂಥ ಕೆಲಸ ಮಾಡಿ. ಆನಂತರ ಈ ಬಗ್ಗೆ ಎಲ್ಲಾ ಮಾತನಾಡಿ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ನಾಡಗೌಡರೇ, ಜೇನು ಗೂಡಿಗೆ ಕೈ ಹಾಕುವುದು ಬೇಡ. ಅದು ಇಲ್ಲಿ ಮಾತನಾಡುವಂಥ ವಿಷಯವಲ್ಲ. ಇವತ್ತಿನದಿವಸ ಕ್ರಾಪ್ violation ಕೂಡ ಇರುತ್ತವೆ. ಈ ಬಗ್ಗೆ ನಾವೆಲ್ಲರೂ ಕೂಡಿಕೊಂಡು ಅಗ್ರಿಮೆಂಟ್ ಮಾಡಿದರೆ ಒಳ್ಳೆಯದು. ಸವಳು-ಜವಳು ಬಗ್ಗೆ ಬೆಳಿಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅಂದರೆ, ಸಿಕ್ಕಾಪಟ್ಟೆ ನೀರು ಬಿಡುವುದರಿಂದ ಭೂಮಿ ಹಾಳಾಗಿ ಹೋಗುತ್ತದೆಂದು ಹೇಳಿದ್ದೀರಿ. ಇದಕ್ಕೆ ಏನು ಮಾಡುತ್ತೀರೆಂದು ಕೇಳಿದ್ದಾರೆ. ಅಲ್ಲಿ conversion ಮಾಡಿದರೆ ಸವಳು-ಜವಳು ಆಗತಕ್ಕಂಥದ್ದು ತಪ್ಪುತ್ತದೆ. ಇದೇ ನೀರನ್ನು ಇನ್ನೂ ಹೆಚ್ಚಿನ ಕ್ಷೇತ್ರಕ್ಕೆ ಕೊಡುವುದಕ್ಕೆ ಸಾಧ್ಯವಿದೆ. ಮುಖ್ಯವಾಗಿ ಶುಗರ್ ಫ್ಯಾಕ್ಟರಿಗಳಿಗೂ ಕೂಡ ಅನುಕೂಲವಾಗುತ್ತದೆ. ಇದಕ್ಕೆ ರೈತ ಸಂಘಗಳನ್ನು ಸೇರಿಸಿಕೊಳ್ಳುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರೇ ಇದಕ್ಕೆ ನಿಮ್ಮನ್ನು ಸಹ involve ಮಾಡಿಕೊಳ್ಳುತ್ತೇವೆ. ಇದರಿಂದ ಶುಗರ್ ಫ್ಯಾಕ್ಟರಿಗೆ ಒಳ್ಳೆಯ qualityಯ sugarcane ಸಿಗುತ್ತದೆ. ಅಂದರೆ, ಒಳ್ಳೆಯ yield ಇರತಕ್ಕಂತ mature cane ಸಿಗುತ್ತದೆ. ಎರಡನೆಯದಾಗಿ ರಿಕವರಿ ಕೂಡ ಚೆನ್ನಾಗಿರುತ್ತದೆ. ಇದರಿಂದ ರೈತರಿಗೆ ಮತ್ತು ಶುಗರ್ ಫ್ಯಾಕ್ಟರಿಗೂ ಸಹ ಒಳ್ಳೆಯದು. ಹಾಗೆಯೇ ಇವತ್ತಿನದಿವಸ ಕಬ್ಬು ಕಟ್ಟಿಂಗ್ ಅನ್ನು manual ಆಗಿ ಮಾಡುತ್ತೇವೆ. ಇದು ಬಹಳ ಕಷ್ಟವಾಗುತ್ತದೆ. Mechanized cuttingಗೆ ಹೋಗಬೇಕಾದರೆ ನಾವು ಇವತ್ತಿನದಿವಸ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆಗ ಈ ಒಂದು ಕೆಲಸ ಬಹಳ effective ಆಗಿ ಆಗುತ್ತದೆ. ಮೂರನೆಯದಾಗಿ ಟ್ರಾನ್ಸ್‌ಪೋರ್ಟ್ ವೆಚ್ಚ ಕೂಡ ಕಡಿಮೆ ಆಗುತ್ತದೆ. ಏಕೆಂದರೆ, ನಿಮ್ಮ ಏರಿಯಾ compact ಆಗುತ್ತದೆ. ನಾಲ್ಕನೆಯದಾಗಿ ಇವತ್ತು ನಿಮ್ಮ ಕೆಪಾಸಿಟಿಯನ್ನು improve ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ರೈತರಿಗೆ ಮತ್ತು ಶುಗರ್ ಕಾರ್ಖಾನೆಗಳಿಗೆ ಹಾಗೂ ಮುಖ್ಯವಾಗಿ ನೀರಾವರಿ ಇಲಾಖೆಗೆ ಒಳ್ಳೆಯದಾಗುತ್ತದೆ. ಏಕೆಂದರೆ, ನೀರು ಎಲ್ಲಾ ಕಡೆ ಬಹಳಷ್ಟು ಕಡಿಮೆ ಇದೆ ಹಾಗೆಯೇ ಪವರ್ ಕೂಡ ಸೇವ್ ಆಗುತ್ತದೆ. ಎಂ.ಬಿ. ಪಾಟೀಲ್‌ರವರು ಮಾತನಾಡುವುದು ಬಹಳ ಸರಳವಾಗಿದೆ. ಆದರೆ, ಅದನ್ನು ಇಂಪ್ಲಿಮೆಂಟ್

ಮಾಡುವುದು ಬಹಳ ಕಷ್ಟವಿದೆ ಎಂದು ಬಹಳ ಜನರು ಮಾತನಾಡುತ್ತಾರೆ. ಇಂಪ್ಲಿಮೆಂಟ್ ಮಾಡುವುದು ಬಹಳ ಕಷ್ಟ ಇದೆ. ಈ ಎಲ್ಲಾ ಅರೇಂಜ್‌ಮೆಂಟ್ ಮಾಡಿದ ನಂತರ ರೈತರಿಗೆ ಈ ಒಂದು ವ್ಯವಸ್ಥೆಯನ್ನು ಕೊಟ್ಟ ಮೇಲೆ ಅವರಿಗೆ ನಾವು ತಕ್ಷಣ ಅದರ ದುಡ್ಡನ್ನು ಕೇಳುವುದಿಲ್ಲ. After two years gestation period ಆದಮೇಲೆ ಅವರು ಅದರ ಫಲವನ್ನು ಅನುಭವಿಸಿದ ಮೇಲೆ ಅವರ contribution ಅನ್ನು deduct ಮಾಡಬೇಕಾದರೆ sugar factory bills ನಲ್ಲಿ ಇವತ್ತಿನದಿವಸ ನಾವು deduct ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮುಖ್ಯವಾಗಿ ನಾವು ಸ್ವಲ್ಪ regulation ಅನ್ನು ಸಹ ಮಾಡಬೇಕಾಗುತ್ತದೆ. ಆಗ ನೀರಾವರಿ ಇಲಾಖೆ ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರ ಇಂಧನ ಇಲಾಖೆ ಕೂಡ ಸೇರಿಕೊಂಡು ಇವತ್ತಿನದಿವಸ ಅವರಿಗೆ ಒತ್ತಾಯ ಮಾಡಬೇಕಾಗುತ್ತದೆ. ಮೊದಲು ನಾವು awareness create ಮಾಡಿಕೊಳ್ಳಬೇಕು. ಎರಡನೆಯದಾಗಿ convert ಆಗಿ ಎಂದು ಇವತ್ತು ನಾವು ಸ್ವಲ್ಪ enforce ಕೂಡ ಮಾಡಬೇಕು. ಇವತ್ತಿನದಿವಸ ಯಾರ್‍ಯಾರು ನದಿ ಮೂಲದಿಂದ ಪಂಪ್‌ಸೆಟ್ ಹಾಕಿಕೊಂಡಿದ್ದಾರೆಯೋ ಅವರಿಗೆಲ್ಲ ಮೊದಲು ಡ್ರಿಪ್ ಪದ್ಧತಿಗೆ convert ಮಾಡಿ. ಇಲ್ಲದಿದ್ದರೆ ನಿಮ್ಮ ಪರವಾನಿಗೆಯನ್ನು ರೆಗ್ಯುಲರೈಸ್ ಮಾಡುವುದಿಲ್ಲವೆಂದು ಹೇಳಿ ಎಂದು ಮಾನ್ಯ ನ್ಯಾಮಗೌಡರು ಈ ಬಗ್ಗೆ ಸಲಹೆಯನ್ನು ಕೊಟ್ಟಿದ್ದಾರೆ. ಇದೆಲ್ಲವನ್ನು ಮಾಡಿದರೆ ಇದನ್ನು ಖಂಡಿತವಾಗಿ achieve ಮಾಡುವುದಕ್ಕೆ ಸಾಧ್ಯವಿದೆ. ಇದೇನು ಅಸಾಧ್ಯವೇನು ಅಲ್ಲ. ಇದನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ, ಸದನದ ಎಲ್ಲಾ ಸದಸ್ಯರ ಸಹಕಾರವನ್ನು ನಾನು ಕೋರುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಸಚಿವರೇ, ಮೊದಲು ಕಪ್ಪು ಮಣ್ಣಿಗೆ ಇದನ್ನು ಕಡ್ಡಾಯ ಮಾಡಬೇಕು. ಇವತ್ತಿನದಿವಸ ಕಪ್ಪು ಮಣ್ಣನ್ನು ಏನಾದರೂ ಉಳಿಸಿಕೊಳ್ಳದಿದ್ದರೆ 100% saline ಆಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿನ ಮುಖ್ಯ ಸಮಸ್ಯೆ ಏನೆಂದರೆ, ಕಪ್ಪು ಮಣ್ಣಿನ ಸಮಗ್ರ ರಕ್ಷಣೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ನೀರಾವರಿ ಇಲಾಖೆ ಮಾಡಬೇಕು.

ಶ್ರೀ ಬಿ.ಆರ್. ಯಾವಗಲ್:- ಅದು ಕೆಡುವುದು ಅಷ್ಟೆ ಅಲ್ಲ. ಅದು ಶಾಶ್ವತವಾಗಿ ಕೈ ತಪ್ಪಿ ಹೋಗುತ್ತದೆ.

ಶ್ರೀ ಎಂ.ಬಿ. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ನಾವು Micro Irrigation, Drip Irrigationಗೆ ನಾವೇನಾದರು convert ಆಗದೆ ಇದ್ದರೆ ಮುಂದಿನ ಪೀಳಿಗೆಗೆ ಅಂದರೆ, 20 ವರ್ಷಗಳ ನಂತರ ಇರಿಗೇಷನ್ ಅನ್ನುವುದು ಕೇವಲ ನೆನಪು ಮಾತ್ರ ಆಗಬೇಕಾಗುತ್ತದೆ. ಏಕೆಂದರೆ, ಎಲ್ಲಾ ಡ್ಯಾಂಗಳು drinking water schemes ಆಗಿಬಿಡುತ್ತವೆ. First priority is drinking water. ಆದ್ದರಿಂದ, ನಾವು ಅವರಿಗೆ convince ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿಗೆ ಎಷ್ಟು ನೀರು ಬೇಕಾಗುತ್ತದೆಂದು ಹೇಳಬೇಕು.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಪುಟ್ಟಣ್ಣಯ್ಯನವರೇ, ನಿಮ್ಮ ಜೊತೆ ಇಲ್ಲಿ ಖಾಸಗಿಯಾಗಿ ಮಾತನಾಡುವುದಕ್ಕೆ ಆಗುವುದಿಲ್ಲ. ಇವತ್ತಿನದಿವಸ ಕಾವೇರಿ ಬೆಲ್ಟ್‌ನಲ್ಲಿ ವಿಶೇಷವಾಗಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ತಾವು ಅದನ್ನು ಅರ್ಥ ಮಾಡಿಕೊಂಡು ನನಗೆ ಸಪೋರ್ಟ್ ಮಾಡುತ್ತೀರೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಸಚಿವರೇ, ಇದನ್ನು ಹೇಳುವುದರ ಬದಲಾಗಿ ಅದನ್ನು ಈ ವರ್ಷದಿಂದ ಜಾರಿಗೆ ತೆಗೆದುಕೊಂಡು ಬನ್ನಿ.

ಶ್ರೀ ಎಂ.ಬಿ. ಪಾಟೀಲ್:- ಜಾರಿಗೆ ತರುತ್ತಿದ್ದೇವೆ. Modalities have been worked out. ಅದರ ಬಗ್ಗೆ ಮಾನ್ಯ ಕೃಷಿ ಇಲಾಖೆ ಸಚಿವರಾಗಿರುವ ಶ್ರೀ ಕೃಷ್ಣಬೈರೇಗೌಡರ ಜೊತೆ ಚರ್ಚೆ ಮಾಡಿದ್ದೇವೆ. ಅವರು ಕೂಡ ಈ ಬಗ್ಗೆ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ಒಂದು ಟೆಕ್ನಿಕಲ್ ಸಮಸ್ಯೆಯನ್ನು ಹೇಳಿದ್ದಾರೆ. ಅದನ್ನು ನಾವು ಬಗೆಹರಿಸಿಕೊಳ್ಳಬೇಕೆಂಬುದರ ಬಗ್ಗೆ ಒಂದು working arrangement ಅನ್ನು ಮಾಡಿಕೊಳ್ಳಬೇಕಾಗಿದೆ. ಇದನ್ನು ನಾವು

ಇಂಪ್ಲಿಮೆಂಟ್ ಮಾಡೇ ಮಾಡುತ್ತೇವೆ. ಇದಕ್ಕೆ ನಾವು ಬದ್ಧರಾಗಿದ್ದೇವೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಹ ಅದಕ್ಕೆ ಬಹಳ ಸಪೋರ್ಟ್ ಮಾಡಿದ್ದಾರೆ. National Water Policy ಪ್ರಕಾರ ಇವತ್ತು water user efficiency ಅನ್ನು 20% ನಷ್ಟು improve ಮಾಡಬೇಕೆಂದು ಕಡ್ಡಾಯ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ, ಮತ್ತು ಇಡೀ ವಿಶ್ವದಲ್ಲಿ ಇವತ್ತಿನದಿವಸ ನೀರಿನ per capita ಕಡಿಮೆ ಆಗುತ್ತಿದೆ. ಆದ್ದರಿಂದ, ನಾವು water user efficiency ಅನ್ನು 20% ನಷ್ಟು improve ಮಾಡಬೇಕು. ಹೊಸದಾದ ಎಲ್ಲಾ ಯೋಜನೆಗಳಿಗೆ ಇವತ್ತು ಮುಳುವಾಡು, ಚಿಮ್ಮಲಗಿ, ಗುತ್ತಿಬಸವಣ್ಣ, ಭದ್ರ ಇರಬಹುದು, ಅವರು ಇವತ್ತಿನದಿವಸ ಎಲ್ಲಾ ಕಡೆ 10% mandatory ಮಾಡಿದ್ದಾರೆ. ಎಲ್ಲಾ ಯೋಜನೆಗಳಲ್ಲಿ 10%ನಷ್ಟು ಕಡ್ಡಾಯವಾಗಿ Micro Irrigation ಒಳಪಡಿಸಬೇಕೆಂದು CWC (Central Water Commission) ಕೂಡ ಇವತ್ತಿನದಿವಸ mandatory ಮಾಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನಾವು ಇವತ್ತಿನದಿವಸ SCP / TSPಯಲ್ಲಿ ಕವರ್ ಮಾಡಿಕೊಂಡು ಬರುತ್ತೇವೆ. ಒಂದು, ಎರಡು, ಹತ್ತು ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಿದ್ದರೆ ನಾವು ಇದರಲ್ಲಿ ಅವರನ್ನು ಕವರ್ ಮಾಡಿಕೊಳ್ಳುತ್ತೇವೆ. ಮುಂದೆ ಇದನ್ನು ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಕಾಫಿ ಬೆಳೆಗೆ ಅಂದರೆ, ಎಲ್ಲೆಲ್ಲಿ possibility ಆಗುತ್ತದೆಯೇ ಅಲ್ಲೆಲ್ಲ ತೋಟಗಾರಿಕೆ ಬೆಳೆಯನ್ನು ವಿಸ್ತರಣೆ ಮಾಡುತ್ತೇವೆ. ಒಟ್ಟಿನಲ್ಲಿ ನೀರಿನ ಉಳಿತಾಯ ಆಗಬೇಕಷ್ಟೆ. ನಮ್ಮ ರಾಜ್ಯದಲ್ಲಿ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟನ್ನು Micro irrigation ಗೆ convert ಮಾಡಬೇಕು. ಮತ್ತೊಂದು ಮುಖ್ಯವಾದ ವಿಚಾರ ಏನೆಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಸೂಕ್ಷ್ಮ ನೀರಾವರಿ ಪದ್ದತಿ ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವೆ. ಹಿಂದೆ ಮಾನ್ಯ ಬೊಮ್ಮಾಯಿರವರು ಇದ್ದಾಗ ರಾಮತಾಳ-1 ಆಗಿತ್ತು. ನಾವು ಈಗ ರಾಮತಾಳ-2, ಶಿಗ್ಗಾಂವ್, ಕೊಪ್ಪಳ ಏತ ನೀರಾವರಿ 1 and 2 ಮತ್ತು ತುಬಚಿ, ಬಬಲೇಶ್ವರ, ಅಪ್ಪರ್ ಭದ್ರಾ ಮತ್ತು ಸಿಂಗಟಾಲೂರು ಇಲ್ಲೆಲ್ಲ micro irrigation project ಅನ್ನು ತೆಗೆದುಕೊಂಡಿದ್ದೇವೆ. Micro Irrigation projectಗೆ ಇವತ್ತಿನದಿವಸ ಕಾಸ್ಟ್

double ಆಗುತ್ತದೆ. ಅದೇ ರೀತಿಯಾಗಿ ನಮ್ಮ ನೀರಾವರಿ ಕ್ಷೇತ್ರ ಕೂಡ ಜಾಸ್ತಿ ಆಗುತ್ತದೆ. ಆದ್ದರಿಂದ, agro process industries ಗೆ ವಿಶೇಷವಾಗಿ ರಾಜ್ಯದಲ್ಲಿ ಈ ಯೋಜನೆಗಳು ಎಲ್ಲೆಲ್ಲಿ ಬರುತ್ತವೆಯೋ ಅಂದರೆ, ಶಿಗ್ಗಾಂವ್, ಕೊಪ್ಪಳ, ತುಬಚಿ, ಬಬಲೇಶ್ವರ, ಸಿಂಗಟಾಲೂರು, ರಾಮತಾಳ ಈ ಎಲ್ಲಾ ಯೋಜನೆಗಳು ಏನು ಬರುತ್ತವೆಯೋ ಅಲ್ಲಿ industries department ಜೊತೆ ಸೇರಿಕೊಂಡು ಒಂದು Agro processingನ ಒಂದು ಕಾರಿಡಾರ್ ಅನ್ನು declare ಮಾಡುತ್ತೇವೆ. ಏಕೆಂದರೆ, ಈ ಯೋಜನೆಗಳೆಲ್ಲವನ್ನು ನಾವು ಈಗ ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. ನಾವು ground ಮಾಡಿರುವ ಕೆಲಸದ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಇಲ್ಲಿ ನಾವು ಒಂದು Agro processing zone ಮಾಡುತ್ತಿದ್ದೇವೆ. ಹಾವೇರಿ, ಗದಗ್, ಕೊಪ್ಪಳ, ರಾಯಚೂರು, ಬಿಜಾಪುರ, ಬಾಗಲಕೋಟೆ ಮತ್ತು ನಂದವಾಡಿ, ಸವಣೂರು ಏತ ನೀರಾವರಿ ಯೋಜನೆಗಳು ಬರುವುದರಿಂದ ಸುಮಾರು 4.28 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ನಾವು ಅಳವಡಿಸಿಕೊಳ್ಳುತ್ತಿದ್ದೇವೆ. ನಾವು Industries Department, Horticulture Department ಕೂಡಿ ಅದಕ್ಕೆ ಒಂದು separate Global Investors Meet [GIM] ಮಾಡುವ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದೇವೆ. ಮಧ್ಯ ಕರ್ನಾಟಕ, ದಕ್ಷಿಣ ಕರ್ನಾಟಕದ ಭದ್ರಾ ಮೇಲ್ದಂಡೆಯೋಜನೆ, ಕಬಿನಿ, ಹೇಮಾವತಿ ಹಾಗೂ ಪೂರಿಗಾಲಿ ಯೋಜನೆಗಳಲ್ಲಿ 2,45,000 ಹೆಕ್ಟೇರ್ ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಪದ್ದತಿಯನ್ನು ಅಳವಡಿಸಿಕೊಳ್ಳುವುದಕ್ಕೆ ಯೋಜಿಸಲಾಗಿದೆ. ಬಹಳಷ್ಟು ಸದಸ್ಯರು ಮತ್ತು ನಮ್ಮ ಇಲಾಖೆಯಲ್ಲಿ ನಾನು ಸಚಿವನಾದ ಮೇಲೆ ಅಲ್ಲಿ maintenance ಮಾಡುವುದು ಬಹಳ ಕಷ್ಟವಾಗುತ್ತಿದೆ. ನಾವು expensive ಆಗಿ, ಬಹಳ ದುಡ್ಡು ಖರ್ಚು ಮಾಡಿ Micro Irrigation Project ಅನ್ನು ಮಾಡುತ್ತಿದ್ದೇವೆ. ಇದಕ್ಕಾಗಿ ಬಹಳ ವೆಚ್ಚವು ತಗಲುತ್ತದೆ. ಅದೇ ರೀತಿಯಾಗಿ ERM works ಮಾಡುತ್ತಿದ್ದೇವೆ. Modernization works ಇದಕ್ಕೂ ಸಹ ಬಹಳ ದುಡ್ಡು ಖರ್ಚಾಗುತ್ತಿದೆ. NLBC ಆಯಿತು, ತುಂಗಭದ್ರಾ ಆಯಿತು, ಕಾವೇರಿಯದ್ದು ಆಯಿತು, ಇದಕ್ಕಾಗಿ ಬಹಳಷ್ಟು ದುಡ್ಡು ಖರ್ಚಾಗುತ್ತಿದೆ. ಅಲ್ಲಿ ಸ್ವಲ್ಪ ಹಣವು

ರಿಕವರಿಯಾಗಬೇಕಾಗಿದೆ. ಇದಕ್ಕಾಗಿ ಸ್ವಲ್ಪ differential tariff ಮಾಡಿ ಅಲ್ಲಿ ಸ್ವಲ್ಪ benefit ಸಿಗುತ್ತದೆ. ಅಲ್ಲಿ ವಸೂಲಿ ಮಾಡಿ ರೈತರಿಂದ tax collect ಮಾಡಿ ಈ ಯೋಜನೆಗಳನ್ನು self sustainable ಮಾಡಬೇಕು. ಈ ಬಗ್ಗೆ maintenance ಕೂಡ ಆಗಬೇಕಾಗಿದೆ. ಅದಕ್ಕಾಗಿ ನಾವು ಈ ದಿಸೆಯಲ್ಲಿ ಚಿಂತನೆಯನ್ನು ಮಾಡುತ್ತಿದ್ದೇವೆ.

ಶ್ರೀ ಗುರು ಪಾಟೀಲ್ ಶಿರವಾಳ್:- ಅಲ್ಲಿ ಸರಿಯಾಗಿ ನೀರು ಕೊಟ್ಟರೆ ರೈತರು ರೆಡಿ ಇದ್ದಾರೆ ಸಾರ್.

ಶ್ರೀ ಎಂ.ಬಿ. ಪಾಟಿಲ್:- ನಾವು ಇದಕ್ಕಾಗಿ ಪ್ರಥಮ ಹಂತದಲ್ಲಿ ಎಲ್ಲೆಲ್ಲಿ Drip Irrigation ಮಾಡುತ್ತಿದ್ದೇವೆ, ಎಲ್ಲೆಲ್ಲಿ ERM works ಮಾಡುತ್ತಿದ್ದೇವೆ. Lift Irrigation scheme ಮಾಡುತ್ತಿದ್ದೇವೆ. ನಾವು ಅವರಿಗೆ ಒಳ್ಳೆಯ ಗುಣಮಟ್ಟದ ನೀರನ್ನು ಕೊಟ್ಟರೆ ಮಾತ್ರ ಅವರಿಂದ ದುಡ್ಡನ್ನು ವಸೂಲಿ ಮಾಡುವುದಕ್ಕೆ ಸಾಧ್ಯ.

ಇನ್ನು ಸುಧಾರಣೆ ವಿಷಯದ ಬಗ್ಗೆ ಹೇಳುವುದಾದರೆ, ಎಲ್ಲಾ ನಿಗಮದಲ್ಲಿ ಏಕ ರೂಪ ಆಡಳಿತ ವ್ಯವಸ್ಥೆಗಾಗಿ ಯೋಜನೆಗಳನ್ನು ಕಾರ್ಯನಿರ್ವಹಿಸುವುದಕ್ಕೆ ಅನುವು ಆಗುವಂತೆ ನಾವು ಅಂದಾಜು ಪರಿಶೀಲನಾ ಸಮಿತಿ ಮತ್ತು ಟೆಂಡರ್ ಪರಿಶೀಲನಾ ಸಮಿತಿಯನ್ನು ಮಾಡಿದ್ದೇವೆ. ಮಾನ್ಯ ಕುಮಾರಸ್ವಾಮಿಯವರೆ ಕೇಳಿ, ಎಲ್ಲಾ ನಿಗಮದಲ್ಲಿ ಏಕರೂಪದ ವ್ಯವಸ್ಥೆಯನ್ನು ತರುವುದಕ್ಕೆ ನಾವು ERC, Estimate Review Committee, Tender Scrutiny Committee, ಮಾಡಿದ್ದೇವೆ. ನಾವು ಇನ್ನು TSC ಅನ್ನು cancel ಮಾಡಿಲ್ಲ. ನಾವು ಈಗ ಏನು ಮಾಡುತ್ತಿದ್ದೇವೆನ್ನುವ ಬಗ್ಗೆ ಹೇಳುವುದಕ್ಕೆ ಈಗ ಬರುತ್ತೇನೆ. ಈ ಬಗ್ಗೆ ನಾವು details ಕೊಡುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಪಾಟೀಲ್‌ರವರೆ ನೀವು ನನ್ನನ್ನು ಕೆದಕಿದ್ದೀರಿ, ಇದನ್ನು ಏತಕ್ಕಾಗಿ ಮಾಡಿದ್ದೀರಿ?

ಶ್ರೀ ಎಂ.ಬಿ. ಪಾಟೀಲ್:- ಆ ಬಗ್ಗೆ ನಾನು ಮುಂದೆ ಹೇಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಲ್ಲಿ ನಾನು ಎಲ್ಲಾ ಮಾಹಿತಿಗಳನ್ನು ಇಟ್ಟುಕೊಂಡಿದ್ದೇನೆ. ನಾನು ಏನು ಕೇಳುತ್ತೇನೆ ಅದಕ್ಕೆ ತಾವು ಮುಂದೆ ಉತ್ತರವನ್ನು ಕೊಡಿ.

ಶ್ರೀ ಎಂ.ಬಿ. ಪಾಟೀಲ್:- ಈಗ ಇದನ್ನು ಬಹಳಷ್ಟು ತ್ವರಿತಗೊಳಿಸುವುದಕ್ಕೆ ಸಾಧ್ಯವಾಗಿದೆ. ಈ ಬಗ್ಗೆ ಬಹಳಷ್ಟು ಜನರಿಗೆ ಗೊತ್ತಿದೆ. ನಮ್ಮ TSCಯಲ್ಲಿ ಬಹಳಷ್ಟು delay ಕೂಡ ಆಗುತ್ತಿತ್ತು. ಉದಾಹರಣೆಗೆ ಹೇಳುವುದಾದರೆ ನನ್ನದೇ ಒಂದು canal ಇಂಡಿಯಲ್ಲಿ ಇಲ್ಲಿ ಯಶವಂತಗೌಡರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಸುಮಾರು 5-6 ವರ್ಷಗಳಿಂದ ಅಲ್ಲಿ burden ಆಗಿತ್ತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ತಾವು ಒಂದು ಕೆಲಸವನ್ನು ಮಾಡಿ. ಇವರು TSC ಇಂದ ಕೆಲಸಕ್ಕೆ ತೊಂದರೆ ಆಗಿ delay ಆಗುವುದಾಗಿದ್ದರೆ ಆ Committee ಯನ್ನು cancel ಮಾಡಬೇಕು. ನೀವು ಇದಕ್ಕೆ ಒಂದು clarification ಕೊಡಿ. ಕೊಪ್ಪಳ ಏತನೀರಾವರಿ ಬಗ್ಗೆ ನೀವು clarification ಕೊಡಿ ಅದಕ್ಕಾಗಿ ನಾನು ಹೇಳಿಬಿಡುತ್ತೇನೆ. TSCಯಲ್ಲಿ ಕೆಲವು objectionಗಳನ್ನು raise ಮಾಡಿದರಲ್ಲಾ ಅವರು reportಕೊಡುತ್ತಾರೆ. ಅದಕ್ಕೆ ತಾವು ನನಗೆ clarification ಕೊಡಿ. ಮಾನ್ಯ ಅಧ್ಯಕ್ಷರೆ, ಏತಕ್ಕಾಗಿ ನಾನು ಹೇಳುತ್ತೇನೆಂದರೆ ಆ TSC ಕಥೆಯಲ್ಲಿ ಕೊಪ್ಪಳ ಏತನೀರಾವರಿಗೆ ಸಂಬಂಧಿಸಿರುವುದು ಏನಾಗಿದೆ ಎಂದು ನಾನು ಬೆಳಿಗ್ಗೆಯೇ ಮಾನ್ಯ ಸಚಿವರಿಗೆ ನೀವು ದಾರಿ ತಪ್ಪಿ ಹೋಗುತ್ತಿದ್ದೀರೆಂದು ಹೇಳಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ನಾನೇನು ದಾರಿ ತಪ್ಪುತ್ತಿಲ್ಲ,

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವು ಇಲ್ಲಿ ತಪ್ಪಿದ್ದೀರಿ.

ಶ್ರೀ ಎಂ.ಬಿ. ಪಾಟೀಲ್:- ನಾವು ಸರಿಯಾದ ದಾರಿಯಲ್ಲಿ ಹೋಗುತ್ತಿದ್ದೇವೆ. ನೀವು ಮುಂಜಾನೆಯ ಈ ಬಗ್ಗೆ ಹೇಳಿದ್ದೀರಿ. ಈ ಬಗ್ಗೆ ನನ್ನ ಹತ್ತಿರವು ಸಹ ಮಾಹಿತಿ ಇದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– TSCಯವರು ಏನು report ಕೊಟ್ಟರು ಅದನ್ನು overlook ಮಾಡಿ ನೀವು ಏನು ಮಾಡಿಕೊಂಡಿದ್ದೀರಿ. ನೀವು ಏತಕ್ಕಾಗಿ ಆ ಅಧ್ಯಕ್ಷರನ್ನು ಮನೆಗೆ ಕಳುಹಿಸಿದಿರಿ.

ಶ್ರೀ ಎಂ.ಬಿ. ಪಾಟೀಲ್:– ನಾನು ಹೇಳುವ ಮಾತನ್ನು ಕೇಳುವುದಕ್ಕೆ ತಮಗೆ patience ಇದೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಬಹಳ patience ಇದೆ. ನಾನು ನೀವು ಹೇಳುವುದನ್ನು ಕೇಳುತ್ತಿದ್ದೇನೆ ಆದರೆ ನೀವು ನಾನು ಹೇಳುವುದನ್ನು ಕೇಳುವುದಕ್ಕೆ ತಯಾರಿಲ್ಲ. ಸುಮ್ಮನೆ ನೀವು vague ಆಗಿ ಹೇಳುವುದು ಬೇಡ. ಇಲ್ಲಿ ಸಂತೆಯ ಭಾಷಣ ಮಾಡುವುದು ಬೇಡ. ನಾನು ದಾಖಲಾತಿ ಇಲ್ಲದೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಬಿ. ಪಾಟೀಲ್:– ನಾನು ಕೂಡ ಸಂಪೂರ್ಣ ಮಾಹಿತಿಯನ್ನು ಇಟ್ಟುಕೊಂಡಿದ್ದೇನೆ. ನೀವು ಬೇಕಾದರೆ ಜಂಟಿ ಸದನ ಸಮಿತಿ ಮಾಡಿ ಎಂದು ಹೇಳುವುದಕ್ಕೆ ತಯಾರಿದ್ದೀರಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ದಯವಿಟ್ಟು ಅದನ್ನು ಮಾಡಬೇಕು. ಹಾಗಾದರೆ ಈ ಬಗ್ಗೆ ತಾವು ಘೋಷಣೆಯನ್ನು ಮಾಡಬೇಕು. ಜಂಟಿ ಸದನ ಸಮಿತಿ ಮಾಡಿದರೆ ನಾನು ಅಲ್ಲಿ ಈ ಬಗ್ಗೆ prove ಮಾಡುತ್ತೇನೆ. I will prove it.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಕುಮಾರಸ್ವಾಮಿಯವರೆ,......

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಜಂಟಿ ಸದನ ಸಮಿತಿ ರಚಿಸುವ ಬಗ್ಗೆ ತಾವು ಘೋಷಣೆಯನ್ನು ಮಾಡಿ.

ಶ್ರೀ ಎಂ.ಬಿ. ಪಾಟೀಲ್:– ನಾನು ಹೇಳುವ information ಅನ್ನು ತಾವು ಕೇಳಿ. TSC ಅವರು they are all high reputation people. ಇವತ್ತು ಶ್ರೀ ಡಿ.ಎನ್. ದೇಸಾಯಿಯವರು ಇರಬಹುದು, ನಮ್ಮ ಕೆ.ಸಿ. ರೆಡ್ಡಿಯವರು ಎಲ್ಲಾ ಕಮಿಟಿ ಇರಬಹುದು. TSCಯವರ ಜವಾಬ್ದಾರಿ ಏನಾಗಿತ್ತು?

ಮೊದಲು ಒಂದು ಕಾಲದಲ್ಲಿ ಎಲ್ಲಾ ಕಡೆಯಲ್ಲಿ Engineering Division ಇತ್ತು. ಅಲ್ಲಿ Design Group ಇತ್ತು. ಈಗ Estimate Review Committee ಮಾಡಿದ್ದೇವೆ. ಇದು ನಿಗಮದಲ್ಲಿ ಅಷ್ಟೇ ಅಲ್ಲಾ, ಇದನ್ನು ನಾವು C.E. Levelನಲ್ಲಿಯೂ ಕೂಡ ಮಾಡುತ್ತಿದ್ದೇವೆ. Upto ₹ 5 crores ಅನ್ನು Estimate Review Committee ಮಾಡಿ ಅಲ್ಲಿ Tender Scrutiny Committee, Executive Engineer ಇದ್ದಾರೆ. ನಾವು ನಮ್ಮ ಇಂಜಿನಿಯರ್‌ಗಳ ಮೇಲೆ confidence repose ಮಾಡುತ್ತಿದ್ದೇವೆ. ಅವರಿಗೆ ಒಂದು ಜವಾಬ್ದಾರಿಯನ್ನು ಕೊಡುತ್ತಿದ್ದೇವೆ. ಎಲ್ಲಾ ನಿಗಮದಲ್ಲಿ ಏಕರೂಪ......

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಸಚಿವರು vague ಆಗಿ ಉತ್ತರವನ್ನು ಸದನಕ್ಕೆ ಕೊಡುತ್ತಿದ್ದಾರೆ. ಇವರು ಯಾವ ರೀತಿಯಾಗಿ ಅಲಾಟ್ ಮಾಡಿದ್ದಾರೆ

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರೆ, ನಿಮ್ಮದು ಏನು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅವರಿಗೆ TSC ಮೇಲೆ ನಂಬಿಕೆ ಇಲ್ಲ.

ಶ್ರೀ ಎಂ.ಬಿ. ಪಾಟೀಲ್:- ನನಗೆ ನಂಬಿಕೆ ಇಲ್ಲವೆಂದು ನಾನು ಹೇಳಿಲ್ಲ. ನಾವು ಏನು reforms ಮಾಡುತ್ತಿದ್ದೇವೆ, it is administrative matter. It is administrative reforms.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅದು Administration matter ಇರಬಹುದು.

ಶ್ರೀ ಎಂ.ಬಿ ಪಾಟೀಲ್:- ತಾವು ಕೂಡ ಮುಖ್ಯಮಂತ್ರಿಗಳಾಗಿದ್ದವರು. Administrative reforms ಮಾಡುವುದು departmentನ internal ವಿಚಾರ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಆದರೆ ಅದರಲ್ಲಿ ಇರತಕ್ಕಂತಹ ನೀವು ಇಲ್ಲಿ ತೆಗೆದುಕೊಳ್ಳತಕ್ಕಂತಹ ನಿರ್ಧಾರ ಏನಿದೆ, TSC ಅನ್ನು ಮಾಡುವುದಕ್ಕೆ ಕಾರಣ 1995ನೇ ಇಸವಿಯಲ್ಲಿ ಯಾವ ಒಂದು workಗಳು ನೆನೆಗುದಿಗೆ

ಬಿದ್ದಿದ್ದವು, ಅದಕ್ಕೆ ವೇಗ ಕೊಡಬೇಕೆಂದು ಹೇಳಿ ಆ TSCಅನ್ನು ಮಾಡಿರುವುದು. ಕೆಲಸವನ್ನು slow ಮಾಡಿ ಎಂದು ಮಾಡಿರುವುದಲ್ಲ.

ಅಧ್ಯಕ್ಷರು:– ಅದನ್ನು ಮಾಡಿ ಅದರ work, power and functions ಏನೆಂದು ಮಾಡಿಲ್ಲವೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅಲ್ಲಿ ಪಾರದರ್ಶಕತೆ ಇರಬೇಕೆಂದು ಮಾಡಿರುವುದು.

ಶ್ರೀ ಎಂ.ಬಿ. ಪಾಟೀಲ್:– ಇಂಜಿನಿಯರ್ಸ್ ಇದ್ದಾಗ ಪಾರದರ್ಶಕತೆ ಇರಲಿಲ್ಲವೇ?

(ಗೊಂದಲ)

ಶ್ರೀ ಹೆಚ್.ಡಿ. ಕುಮರಸ್ವಾಮಿ:– ನೀವು ಸದನ ಸಮಿತಿ ಮಾಡುತ್ತೀರಾ? ನೀವು ಸದನ ಸಮಿತಿ ಮಾಡಲಿ.

(ಗೊಂದಲ)

ಶ್ರೀ ಎಂ.ಬಿ ಪಾಟೀಲ್:– ಮಾನ್ಯ ಅಧ್ಯಕ್ಷರೆ ನಾನು ಮಾತನಾಡುವುದಕ್ಕೆ permit ಮಾಡಿ.

ಅಧ್ಯಕ್ಷರು:– ಆಯಿತು. complete ಮಾಡಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, Let me complete. ನಮಗೆ TSC ಮೇಲೆ ಎಲ್ಲಾ ಸದಸ್ಯರುಗಳ ಮೇಲೆ highest regards ಇದೆ. ಮೊದಲು TSCಗೆ ಇಬ್ಬರು ಛೇರ್ಮನ್‌ಗಳು ಇದ್ದರು. ಆಗ ನಾನೇ ban ಮಾಡಿದ್ದೇನೆ. ಅದಕ್ಕಾಗಿ ನಾನು ಬೇರೆ ಬೇರೆ ಮಾಡಿದ್ದೇನೆ. ಈ TSCಯಲ್ಲಿ ಏಕರೂಪ ವ್ಯವಸ್ಥೆಯನ್ನು ತರುವುದಕ್ಕೆ ...

ಅಧ್ಯಕ್ಷರು:– TSCಯ functions ಏನು?

ಶ್ರೀ ಎಂ.ಬಿ. ಪಾಟೀಲ್:– Technical advice Committeeಯವರು ನಮಗೆ advise ಮಾಡಬೇಕು. ಆದರೆ ದುರ್ದೈವ್‌ವಶಾತ್ ಅವರಿಗೆ tender

scrutiny ಮಾಡುವಂತಹ ಕೆಲಸವನ್ನು ಹೆಚ್ಚಿದ್ದೇವೆ. ಅವರು Estimate Review ಮಾಡುವುದು Tender scrutiny ಮಾಡುವುದು ಈ ಕೆಲಸ ಇಂಜಿನಿಯರ್‌ಗಳು ಮಾಡಬೇಕಾಗಿತ್ತು.

ಅಧ್ಯಕ್ಷರು:– ಮಾನ್ಯ ಕುಮಾರಸ್ವಾಮಿಯವರೆ, Technical scrutiny ಎಂದರೆ ಏನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನನ್ನ ಒಂದು clarification ಇದೆ.

ಶ್ರೀ ಎಂ.ಬಿ. ಪಾಟೀಲ್:– Working Chief Engineers ಅನ್ನು trust ಮಾಡುವ ಹಾಗಿಲ್ಲ. Retired Chief Engineers ಅನ್ನು trust ಮಾಡುತ್ತೇವೆಂದಾಯಿತಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹಳಬರಿಗೆ ಅನುಭವ ಇದೆ. ಈಗ ಇರುವಂತಹ ಇಂಜಿನಿಯರ್‌ಗಳ ಕ್ವಾಲಿಟಿಯು ಸಹ ಗೊತ್ತಿದೆ.

ಅಧ್ಯಕ್ಷರು:– ಈಗ ಇದ್ದವರು, ಹಿಂದಿದ್ದವರು ಎಲ್ಲರೂ ಬೃಹಸ್ಪತಿಗಳೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಸಚಿವರು ಲಕ್ಷ್ಮೇಶ್ವರ ರಸ್ತೆಯ ಬಗ್ಗೆ ಹೇಳಿದರು. ಇವರು ಕಿ.ಮಿ.ಗೆ 8.5 ಕೋಟಿಗೆ ಕೊಟ್ಟಿದ್ದಾರೆ. ಇದಕ್ಕೆಲ್ಲಾ ಇಂಜಿನಿಯರ್‌ಗಳು ಕೊಟ್ಟಿರುವಂತಹ recommendation ಆಗಿದೆ. ಒಂದು ಕಿ.ಮೀ. ರಸ್ತೆ ಮಾಡುವುದಕ್ಕೆ 8.5 ಕೋಟಿ ರೂಪಾಯಿಗಳು.

ಅಧ್ಯಕ್ಷರು:– ಹಾಗೆ ಹೇಗೆ ಹೇಳುವುದಕ್ಕಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇವರಿಗೆ ಹಣ ಉಳಿಸಿ ಕೆಲಸ ಮಾಡುವವರು ಬೇಕಾಗಿಲ್ಲ.

ಶ್ರೀ ಎಂ.ಬಿ. ಪಾಟೀಲ್:- ಇವತ್ತು ನಾವು ಏನು ಮಾಡಿದ್ದೇವೆ this is purely administrative decision.

ಅಧ್ಯಕ್ಷರು:- Chief Engineer levelನಲ್ಲಿ ಎಲ್ಲರೂ ಇರುತ್ತಾರೆ. ಅವರೆಲ್ಲರನ್ನು ಬಿಟ್ಟು ನೀವು ಏತಕ್ಕಾಗಿ committeeಯನ್ನು ಮಾಡಿದ್ದೀರಿ?

ಶ್ರೀ ಎಂ.ಬಿ. ಪಾಟೀಲ್:- ಇದು Routine work, tender Scrutiny, this is the responsibility of the Chief Engineer and mainly Executive Engineer. Technical Sub-Committee, TSCಯಲ್ಲಿ ಅವರು Technical advise ಮಾಡಬೇಕು. ಉಳಿದಂತಹ ಡಿಸಿಷನ್‌ಗಳನ್ನು ತೆಗೆದುಕೊಳ್ಳಬೇಕು ಎನ್ನುವಂತಹ ದೃಷ್ಟಿಯಿಂದ ಮಾಡಿದ್ದೇವೆ. ಅದನ್ನು more effective ಮಾಡಲು ನಾವು Single TSC ಮಾಡಬೇಕೆಂಬ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಮೂರು ನಿಗಮಗಳಿಗೆ ಅನ್ವಯವಾಗುವಂತೆ ಒಂದೇ ತಾಂತ್ರಿಕ ಸಲಹಾ ಸಮಿತಿ(TAC) ಮಾಡುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಪಾಟೀಲ್‌ರವರೆ ಒಂದು ನಿಮಿಷ, ಹೊಸದಾಗಿ ಒಂದೇ ಕಮಿಟಿ ಮಾಡುತ್ತಿದ್ದೀರಲ್ಲಾ ಅವರಿಗೆ ಕೊಡುವಂತಹ powers ಏನು ಎನ್ನುವುದನ್ನು ಹೇಳಿ.

ಶ್ರೀ ಎಂ.ಬಿ. ಪಾಟೀಲ್:- ಅವರು technical experts ಆಗಿರುತ್ತಾರೆ. ಅದನ್ನೂ ಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಅವರ powers and functions ಏನು ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಹೊಸದಾಗಿ ಅವರಿಗೆ ಏನು ಕೆಲಸ ಕೊಡುತ್ತಿದ್ದೀರಿ. ಏನು modification ಮಾಡಿಕೊಂಡಿದ್ದೀರಲ್ಲಾ, ಸರ್ಕಾರದಿಂದ

ನಡವಳಿಯನ್ನು ಮಾಡಿಕೊಂಡಿದ್ದೀರಲ್ಲಾ ಅವರಿಗೆ ಏನು ಕೆಲಸ ಕೋಡುತ್ತೀರಿ ಎನ್ನುವುದನ್ನೂ ಹೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಅದನ್ನೂ ಹೇಳುತ್ತೇನೆ. TAC ಇರುವುದು technical ಬಗ್ಗೆ advice ಮಾಡುವಂಥದ್ದು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಒಂದು ನಿಮಿಷ ಮಾನ್ಯ ಅಧ್ಯಕ್ಷರೆ, ಈಗ ಇವರು ಹೊಸ ಕಮಿಟಿಗೆ ಕೊಡುತ್ತಾರೆ. ಏನು ಕೆಲಸ allot ಮಾಡಿರುತ್ತಾರೋ, ಆನಂತರ contractor ರವರು ಹೆಚ್ಚಿನ amount ಅನ್ನು claim ಮಾಡುತ್ತಾರಲ್ಲಾ ಅದನ್ನು ಅವರಿಗೆ ಕೊಡುತ್ತಾರೆ. ಹೊಸದಾಗಿ ಆರು guidelines ಇಟ್ಟುಕೊಂಡಿದ್ದೀರಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಸ್ವಲ್ಪ mislead ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇಲ್ಲ. ನಾನು mislead ಮಾಡುವುದೇ ಇಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಕುಮಾರಸ್ವಾಮಿಯವರೆ ತಮ್ಮ contention, ಈ Technical Advisory Committee necessity ಇಲ್ಲವೆಂದು ಹೇಳುತ್ತಿದ್ದೀರಾ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅದು ಅವರಿಗೆ ಈಗ ಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು:- ನಿಮ್ಮದು ಏನು ಸಲಹೆ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸಾರ್ ಇದ್ದರೆ ಪಾರದರ್ಶಕತೆಯನ್ನು ಕಾಪಾಡಬಹುದು.

ಅಧ್ಯಕ್ಷರು:- ಅದನ್ನು ಎಲ್ಲಿ ಹುಡುಕುವುದು? ಇಲ್ಲಿ ಒಳಗೆ ಹುಡುಕಬೇಕಲ್ಲ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಹಾಗಾದರೆ technical bid ಅನ್ನು ಏಕೆ ಇಟ್ಟುಕೊಂಡಿದ್ದೀರಿ? Technical bid ಏಕೆ ಬೇಕು? Financial Bid ಅನ್ನು ಏಕೆ ಇಟ್ಟುಕೊಂಡಿದ್ದೀರಿ? ಕೆಲವು guidelines ಅನ್ನು ಇಟ್ಟುಕೊಂಡಿದ್ದೀರಿ ಅಲ್ಲವೇ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೂ ಅವರು permission ಕೊಡುತ್ತಿಲ್ಲ. ಅವರು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಅವರು ಮಾತನಾಡಿದ್ದಕ್ಕೆ ಉತ್ತರ ಕೊಡುತ್ತಿದ್ದೇನೆ. ಅದನ್ನು ಕೇಳಲು ತಯಾರಿಲ್ಲವೆಂದರೆ ನಾವು ಏನು ಮಾಡಬೇಕು?

(ಗೊಂದಲ)

ಅಧ್ಯಕ್ಷರು:- ಮಾನ್ಯ ಪಾಟೀಲ್‌ರೆ, ನಾನೇನೂ technical ಅಲ್ಲ. ನಾನು ಏಕೆ ಹೇಳುತ್ತೇನೆ ಎಂದರೆ, Technical Department ನಲ್ಲಿ Chief Engineer is the highest. ಹೌದಲ್ಲವೇ? ನೀವು ಅವರನ್ನು ಇಟ್ಟುಕೊಂಡು ಅವರ ಮುಖಾಂತರವೇ administrative sanction, ವಗೈರೆ, ವಗೈರೆ

ನಡೆಯುತ್ತವೆ. ಇವೆಲ್ಲಾ ಆದ ಮೇಲೆ ನೀವು ಮತ್ತೆ technical committee ಎಂದು ಮಾಡಿದರೆ Chief Engineer ನವರು ಏಕೆ ಇರಬೇಕು?

ಶ್ರೀ ಎಂ.ಬಿ ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಮತ್ತೆ repeat ಮಾಡುತ್ತಿದ್ದೇನೆ. ಇದು administrative ಆಗಿ ಮೊದಲೇ ಆಗಬೇಕಾಗಿತ್ತು. ಉದಾಹರಣೆಗೆ PWD ಯಲ್ಲಿ ನನಗೆ ಅನಿಸಿದ ಮಟ್ಟಿಗೆ ARC, TAC ಎಂದು ಇರುತ್ತದೆ. ಇಲ್ಲಿ TAC ದೂರ ದೂರ ಇರುತ್ತದೆ. ಇದು routine job. ಏಕೆಂದರೆ ನಾವು ನಮ್ಮ Chief Engineers ಅನ್ನು trust ಮಾಡುತ್ತಿಲ್ಲ. ಮಾನ್ಯ ಕಾರಜೋಳರವರೆ, ನಿಮಗೂ ಗೊತ್ತಿದೆ. ನಿಮ್ಮಲ್ಲಿ minor irrigation ನಲ್ಲಿಯೂ ಇದೇ ರೀತಿ system ಇತ್ತಲ್ಲ. Estimate Review committee ಎಂದು ನಿಮ್ಮ department ನಲ್ಲಿ ಇತ್ತಲ್ಲ. ಇಲ್ಲಿ ನಮ್ಮ seniors ಇದ್ದಾರೆ, ಅವರು ನಮಗೆ advice ಮಾಡಬೇಕು. ನೀವು ಎರಡು ವಿಷಯಗಳನ್ನು ಮಾತ್ರ ಓದಿದಿರಿ. ನಮ್ಮ ರಾಜ್ಯದ ಪಾಲಿಸಿ ಏನು ಇರಬೇಕು, technically ಏನು ಮಾಡಬೇಕೆಂದು TAC ಯವರು advice ಮಾಡಬೇಕು. ಯಾರ್ಯಾರ ಅವಧಿಯಲ್ಲಿ ಏನೇನಾಗಿದೆ ಎಂದು ತೆಗೆದು ನೋಡಿದರೆ ಜನರಿಗೆ ಗೊತ್ತಾಗುತ್ತದೆ. ಆಡಳಿತಾತ್ಮಕ ಹಿತದೃಷ್ಟಿಯಿಂದ ನಮ್ಮ ನಿಗಮೇತರ ವಲಯಗಳು ನಮ್ಮಲ್ಲಿ ಏನಾಗಿತ್ತು ಎಂದರೆ ಕೆಲವೊಂದು works ಎಲ್ಲಾ departmental works ಆಗಿತ್ತು. ಉದಾಹರಣೆಗೆ ಮಾನ್ಯ ಖಂಡ್ರೆಯವರದ್ದು ಕಾರಂಜಾ, ವರಾಹಿ ಬಹಳಷ್ಟು ಯೋಜನೆಗಳು ಇವ್ಯಾವುದು ನಿಗಮದಲ್ಲಿ ಇರಲಿಲ್ಲ.

ಅಧ್ಯಕ್ಷರು:– ಕಾರಂಜಾ ಪಕ್ಕದಲ್ಲಿ ಇನ್ನೊಂದು ಇದೆಯಲ್ಲಾ ಹಳೆಯದು ಅದು ಯಾವುದು?

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಅಲ್ಲಿ ಮೂರು ಯೋಜನೆಗಳು ಇವೆ ನಾನು ಹೇಳುತ್ತೇನೆ ಕೇಳಿ. ಕಾರಂಜಾ, ನಾರಂಜಾ, ಮುಲ್ಲಾಮಾರಿ, ಅಮರ್ಜಾ.

ಅಧ್ಯಕ್ಷರು:– ಅದಲ್ಲ ಮುಂಚೆ ಇತ್ತಲ್ಲಾ, ಬೆಣ್ಣೆತೊರಾ..

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:– ಮಾನ್ಯ ಅಧ್ಯಕ್ಷರೆ, ಬೆಣ್ಣೆತೊರಾ ಮುಗಿಯಿತು.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇವೆಲ್ಲಾ ನಿಗಮೇತರ ಯೋಜನೆಗಳು.

(ಗೊಂದಲ)

ಶ್ರೀ ಬಾಬುರಾವ್ ಚಿಂಚನಸೂರ:– ಬೆಣ್ಣೆತೊರಾ ಯೋಜನೆ ಎಂದರೆ ನಾನು ಮಾತನಾಡಬೇಕಾಗುತ್ತದೆ. ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ ವೀರಪ್ಪಮೊಯಿಲಿಯವರು grant ಅನ್ನು ಬೆಣ್ಣೆತೋರಾ ಯೋಜನೆಗೆ ತೆಗೆದುಕೊಂಡಿದ್ದರು. ಬೆಣ್ಣೆತೊರಾ ನನ್ನ ಕೈಯ ಮೇಲೆ ಆಗಿದ್ದು.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:– ಅದರ ಕೆಲಸ ಎಲ್ಲಾ ಮುಗಿಯಿತಲ್ಲವೇ?

ಶ್ರೀ ಬಾಬುರಾವ್ ಚಿಂಚನಸೂರ:– ನಾನೂ ಐದೈದು ಬಾರಿ ಗೆದ್ದವರಿದ್ದೇವೆ. ನಾವೂ ಕೆಲಸ ಮಾಡಿದವರು ಇದ್ದೇವೆ. ಆ ರೀತಿ ಮಾತನಾಡುವುದಲ್ಲ. ನಾವೂ ಕೆಲಸ ಮಾಡಿ ತೋರಿಸಿದ್ದೇವೆ. ಕೆಲಸ ಮಾಡದೇ ಇವತ್ತು 5–6 ಸಲ ಗೆದ್ದಿದ್ದೇವಾ?

ಅಧ್ಯಕ್ಷರು:– ಆಯಿತು ಮಾನ್ಯ ಪಾಟೀಲ್‌ರವರೆ ಮುಂದುವರೆಸಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ ಇವೆಲ್ಲಾ non-nigam works. ನಿಗಮೇತರ work ಇರುವುದರಿಂದ ಅನೇಕ projects suffer ಆಗುತ್ತಿತ್ತು. ನಮ್ಮ ಸರ್ಕಾರ ಬಂದ ಮೇಲೆ ಇವು suffer ಆಗಬಾರದು ಎಂದು 17 worksನ್ನೆಲ್ಲಾ KNNL ನಿಗಮಕ್ಕೆ transfer ಮಾಡುವಂತಹ ನಿರ್ಧಾರ ತೆಗೆದುಕೊಂಡಿದ್ದೇವೆ. ವಾಲ್ಮೀ ಮತ್ತು ಕೆ.ಇ.ಆರ್.ಎಸ್. ಬಹಳ deteriorate ಆಗಿವೆ. ಕೆ.ಇ.ಆರ್.ಎಸ್. ನ ನಾವು review ಮಾಡುತ್ತಿರುವಾಗ, KERS setup

ಮಾಡಿದಾಗ ಉದ್ದೇಶ ಬೇರೆ ಇತ್ತು. ಇವತ್ತು ಹತ್ತು ವರ್ಷದಿಂದ ಏನೂ activity ಆಗಿಲ್ಲ. There is no activity in last ten years. ಆ KERS ಅನ್ನು ನಾವು re-structure ಮಾಡಬೇಕು. ವಾಲ್ಮೀ ಬಹಳ ಮುಖ್ಯವಾದಂತಹ ಸಂಸ್ಥೆ. ಅದನ್ನೂ ಕೂಡ ನಾವು re-structure ಮಾಡಬೇಕು. ಅದರ ಜೊತೆಗೆ ಮುಖ್ಯವಾಗಿ ನಮ್ಮ ಕಾಡಾ ವ್ಯವಸ್ಥೆ ಬಹುಶಃ ಎಲ್ಲಾ ಸದಸ್ಯರಿಗೂ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಯವರೂ ಮೊನ್ನೆ review meeting ನಲ್ಲಿಯೂ ಹೇಳಿದರು. ಈ ಕಾಡಾ ವ್ಯವಸ್ಥೆ ಮತ್ತು Water Users Society ಬಹಳ ಹದಗೆಟ್ಟಿವೆ. ನಾವು ಅದಕ್ಕೆ ಕಾಡಾ ಅಧ್ಯಕ್ಷತೆಯಲ್ಲಿ ಎರಡು special team ಮಾಡಿದ್ದೇವೆ. ಮಾನ್ಯ ಉಮೇಶ್ ಕತ್ತಿಯವರೆ ತಮಗೆ ಗೊತ್ತಿದೆ. ಆ team ಐದು irrigation states ಏನಿವೆ ಮಹಾರಾಷ್ಟ್ರ, ಆಂಧ್ರಪ್ರದೇಶ, ರಾಜಸ್ಥಾನ, ಗುಜರಾತ್‌ಗೆ ಪಂಜಾಬ್‌ಗಳಿಗೆ visit ಮಾಡಲಾಗಿದೆ. ಪಂಜಾಬಿನಲ್ಲಿ excess water ಇರುವುದರಿಂದ ಅಲ್ಲಿ ಜಾಸ್ತಿ ಮಾಡುವಂತಹ ಸಮಸ್ಯೆ ಬರುವುದಿಲ್ಲ. ನಾಲ್ಕು ರಾಜ್ಯಗಳಿಗೆ ವಿಶೇಷವಾಗಿ ಎರಡು ಟೀಮ್ ಹೋಗಿ study ಮಾಡಿ ರಿಪೋರ್ಟ್ ಕೊಟ್ಟು ಕಾಡಾ ಮತ್ತು Water Users Society ಅನ್ನು re-structure ಮಾಡುವಂತಹ ಕೆಲಸಕ್ಕೆ ಕೈ ಹಾಕಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು review meeting ನಲ್ಲಿ ಇದನ್ನು strengthen ಮಾಡಬೇಕೆಂದು ಇಚ್ಛಾಶಕ್ತಿಯನ್ನು ಹೊಂದಿದ್ದಾರೆ. ಆ ದೃಷ್ಟಿಯಲ್ಲಿ ನಾವು ಎಲ್ಲಾ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- Water Users Society ಬಗ್ಗೆ ನಾನು ಹಿಂದೆ ಒಂದು ಬಾರಿ comment ಮಾಡಿದ್ದೆ. ಅವುಗಳನ್ನು close ಮಾಡಲಿ. ಆ society Chairman ಗಳು contractorಗಳಾಗಿದ್ದಾರೆ. ಏನು ಗ್ರಾಂಟ್ ಬರುತ್ತದೆ ಅದನ್ನು ನುಂಗಿ canal ಗಳು stop ಆಗಿವೆ. Field channel ಸರಿಯಾಗಿ maintenance ಇಲ್ಲ. ಒಂದೂ gate outlet ಅನ್ನು repair ಮಾಡಿಲ್ಲ. ಬಹಳ ಕೆಟ್ಟ ಪರಿಸ್ಥಿತಿ ಇದೆ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಕಾರಜೋಳರವರು ಹೇಳುವಂತೆ, ಇವತ್ತಿನ ದಿವಸ ಬಹುಶಃ ಎಲ್ಲಾ ಕಡೆ ಬಹಳಷ್ಟು deteriorate ಆಗಿದೆ. ನಾನು

ಎಲ್ಲರೂ ಕೆಟ್ಟವರು ಇದ್ದಾರೆ ಎಂದು ಹೇಳುವುದಿಲ್ಲ. 80%, 90% ಕಾಡಾ, Water Users Society defunct ಆಗಿದೆ. ಅದನ್ನು re-structure ಮಾಡಬೇಕೆಂದು ಇದ್ದೇವೆ. Report ಬಂದಮೇಲೆ ಯಾವರೀತಿ re-structure ಮಾಡಬೇಕು ಎನ್ನುವ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ನೀರಿನ distribution ಬಹಳ ತೊಂದರೆಯಾಗುತ್ತಿದೆ. ಅದರ ಬಗ್ಗೆ ಒಂದು ತೀರ್ಮಾನ ಮಾಡಿ. ನೀರನ್ನು ಬಿಡುವುದರಿಂದ ತೊಂದರೆಯಾಗುತ್ತಿರುವುದರಿಂದ ನಾವು ಸದನದಲ್ಲಿ ಬಂದಾಗಲೆಲ್ಲಾ ಹೇಳುತ್ತೇವೆ. ಅದರ ಬಗ್ಗೆ ಯಾವುದೇ ಕ್ರಮ ಆಗುತ್ತಿಲ್ಲ. Society ಯಿಂದ ಏನೂ ಕ್ರಮ ಆಗುತ್ತಿಲ್ಲ. ಅವರಿಗೆ .. . .

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಒಂದು ತಿಂಗಳಿನಲ್ಲಿ ಇದಕ್ಕೆ alternative plan, ಒಂದು full proof plan ಹಾಕಿ ಕಾಡಾ ವ್ಯವಸ್ಥೆ ಮತ್ತು Water Users Society ಅನ್ನು strengthen ಮಾಡುತ್ತೇವೆ. Weaken ಮಾಡುವುದಿಲ್ಲ. Strengthen ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಮ್ಮದು ಬಹಳಷ್ಟು ಯೋಜನೆಗಳು ಇವೆ. ತಾವು ವಿಚಾರ ಮಾಡಿ ತಾವೂ ಸಲಹೆಗಳನ್ನು ಕೊಡುತ್ತಿದ್ದೀರಿ. ನಾನು ಬೆಳಗ್ಗೆ ಬಂದಾಗ ನಮ್ಮ ಇಲಾಖೆಯಲ್ಲಿ white paper publish ಮಾಡಬೇಕೆನ್ನುವ ವಿಚಾರ ಮಾಡಿದ್ದೆ. ನಾನು ಹಿಂದೆ parliament ನಲ್ಲಿದ್ದಾಗ ಮಾನ್ಯ ನಿತೀಶ್‌ಕುಮಾರ್‌ರವರು ರೈಲ್ವೆ ಮೇಲೆ ಒಂದು white paper publish ಮಾಡಿದ್ದರು. ಯಾವ್ಯಾವ ರೈಲ್ವೇ ಯೋಜನೆಗಳು ಹೇಗೆ ವಿಳಂಬ ಆಗುತ್ತವೆ, cost escalation ಎಷ್ಟು ಆಗುತ್ತವೆ, ಹಣಕಾಸಿಗೆ ಸಂಬಂಧಿಸಿದಂತೆ ಎಲ್ಲಾ ಮಾಡಿದ್ದರು. ನಾನೂ ಆ ರೀತಿ ವಿಚಾರ ಮಾಡಿದೆ. ಆದರೆ ಇಲ್ಲಿ ಬಹಳ sensitive ವಿಚಾರಗಳು ಅನೇಕ ಇರುತ್ತವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– White paper ಅನ್ನು 1962 ರಿಂದ ತಂದರೆ ಬಹಳ ಒಳ್ಳೆಯದು.

ಶ್ರೀ ಎಂ.ಬಿ. ಪಾಟೀಲ್:- ಆದರೆ ಬಹಳಷ್ಟು ವಿಚಾರಗಳು ಬಹಳ sensitive ಆಗಿವೆ ಅನೇಕ ವಿಚಾರಗಳನ್ನು ಇವತ್ತು ಮಾಡುವುದಕ್ಕೆ ಬರುವುದಿಲ್ಲ. Tribunals ಇರುತ್ತವೆ, ಮತ್ತೊಂದು ಇರುತ್ತದೆ So many things are there ಮಾನ್ಯ ಕುಮಾರಸ್ವಾಮಿಯವರೆ ನಾವು ಅದನ್ನು ಬಹಿರಂಗವಾಗಿ ದಾಖಲಾತಿ ಮಾಡುವುದಕ್ಕೆ ಆಗುವುದಿಲ್ಲ. ಮೊನ್ನೆ ವಿಧಾನ ಪರಿಷತ್ತಿನಲ್ಲಿಮಾನ್ಯ ಎಂ.ಸಿ. ನಾಣಯ್ಯರವರಿಗೆ ತಾವು task ವಹಿಸಿಕೊಳ್ಳಬೇಕೆಂದು professional agency, ಒಂದು ಟೀಮ್ ಅವರಿಗೆ ಕೊಡಬೇಕೆಂದು request ಮಾಡಿಕೊಂಡಿದ್ದೇನೆ. ಅಂದರೆ ಯೋಜನೆ ಯಾವಾಗ ಪ್ರಾರಂಭ ಆಯಿತು? ಆಗ ಎಷ್ಟು ದುಡ್ಡು ಇತ್ತು? ವಿಳಂಬ ಏಕೆ ಆಯಿತು? Forest ಕಾರಣಕ್ಕೆ ಆಯಿತೇ, land acquisition ಕಾರಣಕ್ಕೆ ಆಯಿತೋ ಅಥವಾ ನಮ್ಮ engineers ರವರಿಂದ ಹಿನ್ನಡೆಯಾಯಿತೋ? ಏಕೆ ಆಯಿತು ಅಥವಾ ಅಚ್ಚುಕಟ್ಟು ಕ್ಷೇತ್ರ ಜಾಸ್ತಿ ಆಯಿತಾ? ಏನೇನು ಆ ಇಲಾಖೆಯಲ್ಲಿ ಏನೇನು modify ಆಯಿತು ಎಂದು ತಿಳಿದುಕೊಳ್ಳುವುದಕ್ಕೆ ಒಂದು internal excise ಮಾಡಿ ಅದನ್ನು ತಿಳಿದುಕೊಂಡು ಮುಂದೆ ಆ ರೀತಿ ಆಗಬಾರದು ಎಂದು ಮಾಡುತ್ತಿದ್ದೇವೆ. ಅದಕ್ಕಾಗಿ ನಾನು ಈಗಾಗಲೇ ನಮಗೆ ತಿಳಿದಿರುವುದನ್ನು ನಮ್ಮ ಒಂದು ವರ್ಷದ ಅನುಭವದಲ್ಲಿ ಮುಖ್ಯವಾಗಿ ನಾವು forest clearanceಗೆ ಹೋಗುತ್ತೇವೆ. ಬಹಳಷ್ಟು ದಿವಸ ಹಾಗೆ ಉಳಿಯುತ್ತದೆ ಎಷ್ಟೋ ಸಲ forest clearance ಸಿಗುವುದಿಲ್ಲ. ಅದಕ್ಕಾಗಿ ನಾವು ಒಂದು proposal ಮಾಡಿದ್ದೇವೆ, ಬಹುಶಃ ಇದು ನಮ್ಮ ಮುಂದಿನ cabinet ಗೆ ಬರುತ್ತದೆ. ನಾವು ಇಲಾಖೆಯ ಮಟ್ಟದಲ್ಲಿ ಮೂರು post create ಮಾಡುತ್ತಿದ್ದೇವೆ. ಒಂದು Chief Conservator of Forests, ನಮ್ಮ irrigation related forest works, clearances ಇವೆ ಅದೆಲ್ಲವನ್ನು ಕೂಡ forest department ಮತ್ತು ಉಳಿದ ಕಡೆ co-ordinate ಮಾಡಬೇಕು. ಎರಡನೆಯದಾಗಿ land acquisitionನಲ್ಲಿ delay ಆಗುತ್ತದೆ. Land acquisition ಎಲ್ಲವನ್ನು ಕೂಡ ಮಾಡುವುದು Revenue Department. ಅನೇಕ ಕಡೆ 4(1) notification ಆಗುವುದಿಲ್ಲ. ಅಥವಾ ಅನೇಕ ಸಲ ನಮ್ಮ ಮುಂದೆ not fit for appeal ಎಂದು ಬರುತ್ತದೆ.

Delay appeal ಆಗುತ್ತದೆ. ಅದಕ್ಕಾಗಿ ಒಬ್ಬ Special D.C (land acquisition) ಆ ಒಂದು post create ಮಾಡುತ್ತಿದ್ದೇವೆ. ಆಮೇಲೆ ಮೂರನೆಯದಾಗಿ ಒಬ್ಬ Special Officerಅನ್ನು ನಮ್ಮ ಸಿ.ಎಸ್. ನಾಡಗೌಡರವರ underನಲ್ಲಿ ಒಬ್ಬ retired CWC officerಅನ್ನು KPCಯಲ್ಲಿ ಮಾಡಿದ್ದಾರೆ, Liaison Officer ಎಂದು ಹೇಳುತ್ತಾರೆ ನಾವು Special Officer ಎಂದು ಹೇಳುತ್ತೇವೆ. ಅದು ತಮಗೆ ಗೊತ್ತಿರಬಹುದು. ನಮ್ಮ AIBP proposals ಇರಬಹುದು, Central Water Commission clearances ಇರಬಹುದು, ಇದೆಲ್ಲವನ್ನು ನೋಡಿಕೊಳ್ಳುವುದಕ್ಕೆ Special Officer postಅನ್ನು create ಮಾಡುತ್ತಿದ್ದೇವೆ. ಇದರಿಂದ forest clearances ಆಗಲಿ, land acquisition ಆಗಲಿ, ನಮ್ಮ centralನಲ್ಲಿರುವಂಥ proposal ಆಗಲಿ ಇವುಗಳನ್ನು speed up ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವುದಕ್ಕೋಸ್ಕರ ನಾವು ಈ ಮೂರು post ಗಳನ್ನು ನಾವು create ಮಾಡುತ್ತಿದ್ದೇವೆ. SCP/TSP ಯೋಜನೆಯ ನೀರಾವರಿ ಕಾಮಗಾರಿಗಳಿಗೆ ನಾವು ಆಧ್ಯತೆಯನ್ನು ಕೊಡುತ್ತಿದ್ದೇವೆ. SCP/TSP ಏನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ನೇರ ಫಲಾನುಭವಿಗಳು ಆಗುವಂಥ ಪ್ರದೇಶಗಳಲ್ಲಿ ಮುಖ್ಯವಾಗಿ ಏನಾಗಿದೆ ಎಂದರೆ, ಕಾಂಕ್ರೀಟ್ ರಸ್ತೆ, ಅಂಬೇಡ್ಕರ್ ಭವನ ಮಾಡುತ್ತಿದ್ದೇವೆ. ಆದರೆ ಮುಖ್ಯವಾಗಿ water related activities ಕಡಿಮೆ ಆಗುತ್ತಿವೆ. ಮೊದಲು ಒಂದು ಕಾಲ ಇತ್ತು, Water related activities ಹೆಚ್ಚಿಗೆ preference ಕೊಡಬೇಕಾಗಿತ್ತು. ಅದಕ್ಕೆ ನಾವು ಸಾಮುಹಿಕ ನೀರಾವರಿ ಯೋಜನೆಗಳಾದ, ನದಿ ಮೂಲದಿಂದ ಬೋರ್‌ವೆಲ್‌ದಿಂದಾಗಲಿ ಅಥವಾ open well ಯೋಜನೆಗಳಿಗೆ ನಾವು ಹೆಚ್ಚು ಪ್ರಶಸ್ತ್ಯವನ್ನು ಕೊಡಬೇಕು. ಎರಡನೆಯದಾಗಿ individual borewellಗಳನ್ನು ಏಕೆಂದರೆ ಆ SC/ST ಕುಟುಂಬಗಳು ಇವತ್ತಿನ ದಿವಸ uplift ಮಾಡಿ ಮಾಡಬೇಕಾಗಿದೆ. ನಾವು ಬೋರ್‌ವೆಲ್ ಹೊಡೆಯುವುದರ ಮುಖಾಂತರ ತಮಗೆ ಗೊತ್ತಿರುವ ಹಾಗೆ ಅವರಿಗೆ ಒಂದು ಸೋಲಾರ್ ಪಂಪಸೆಟ್ಟು ಕೊಡಬೇಕು. ಅವರಿಗೆ individual ನೀರಾವರಿ ಆಗಬೇಕು. ಕಮಾಂಡ್ ಏರಿಯಾದಲ್ಲಿ ಬರುವಂಥ SC/ST ಜನಾಂಗದವರಿಗೆ ಡ್ರಿಪ್ ಮಾಡಿ ಕೊಡುವುದಾಗಲಿ ಅವರು development

ಆಗುವುದಕ್ಕಾಗಲಿ ಸೂಕ್ತ ಕ್ರಮ ನಾವು ಕೈಗೊಳ್ಳುತ್ತೇವೆ. ನಾವು ಬಹಳಷ್ಟು ವಿಚಾರ ಮಾಡಿ SC/ST ಅವರಿಗೆ ಜಲಕುಟೀರ ಮನೆಗಳನ್ನು ಕೊಡಬೇಕು. 50% ನಾವು ಏನು ಗ್ರ್ಯಾಂಟ್ ಕಟ್ಟುತ್ತೇವೆ ಅದರಲ್ಲಿ water related activities ಗೆ ಕೊಡಬೇಕು. ನಾವು ಸ್ವಲ್ಪ reversal process start ಮಾಡಿದ್ದೇವೆ. ಬರೀ ಕಾಂಕ್ರೀಟ್ ರಸ್ತೆಗಳು, ಭವನಗಳು ಆಗುತ್ತಿದ್ದವು. 50% ಆದರೂ ನಾವು change ಮಾಡೋಣವೆಂದು ಹೇಳಿ ಇನ್ನುಳಿದ 50% ನಲ್ಲಿ ಮನೆಗಳು, ಕಾಂಕ್ರೀಟ್ ರಸ್ತೆಗಳು, ಭವನಗಳು, ವೈಯಕ್ತಿಕ ಶೌಚಾಲಯಗಳನ್ನು SC/ST ಯವರಿಗೆ ಕೊಡುವುದು ಬಹಳ ಸೂಕ್ತವಾಗಿದೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಆ ವಿಚಾರದಲ್ಲಿ ನನ್ನದೊಂದು ಸಲಹೆ. ನೀವು ಮಾಡುವುದಾದರೆ ಭೂಒಡೆತನ ಯೋಜನೆಯಲ್ಲಿ ನಿಮ್ಮ irrigated area ದಲ್ಲಿ ಭೂಮಿಯನ್ನು ಖರೀದಿ ಮಾಡಿ ನಿಮ್ಮ ನಿಗಮದಿಂದ ಕೊಡಿಸುವಂಥ ಕೆಲಸವನ್ನು ಮಾಡಿ. ಫಲಾನುಭವಿಗಳನ್ನು ನೀವೇ ನಿಗಮದಿಂದ ಆಯ್ಕೆ ಮಾಡಿಸಿ. ಆ ಫಲಾನುಭವಿಗಳಿಗೆ ಜಮೀನು ಖರೀದಿ ಮಾಡಿಸಿ ಯಾರು ಮಾರಾಟಕ್ಕೆ ಸಿದ್ಧ ಇದ್ದಾರೆ ಅದನ್ನು ಕೊಡಿಸಿ. Economic activityಗೆ ಏನಾದರೂ ಕಾರ್ಯಕ್ರಮಗಳು. ಹೈನುಗಾರಿಕೆಯಲ್ಲಿ ಬರಬಹುದು ಅಥವಾ ವ್ಯಾಪಾರದಲ್ಲಿ ಬರಬಹುದು. ಮೋಟಾರ್‌ವಾಹನದ್ದು ಇರಬಹುದು. ಅವರಿಗೆ economic activityಗೆ ಅನುಕೂಲವಾಗುವ ರೀತಿಯಲ್ಲಿ expand ಮಾಡಿ. Don’t restrict it only to that.

ಶ್ರೀ ಎಂ.ಬಿ ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ಎಲ್ಲರ ಒಂದು ಸಲಹೆಯನ್ನು ತೆಗೆದುಕೊಳ್ಳುತ್ತೇನೆ. ಏನು modify ಮಾಡಬೇಕು ಇವತ್ತಿನ ದಿವಸ ಅದನ್ನು ಮಾಡುತ್ತೇವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಈಗ Social Welfare Department ನವರು ಅದನ್ನು ಮಾಡುತ್ತಿದ್ದಾರೆ. ಡಾ|| ಅಂಬೇಡ್ಕರ್ ಅಭಿವೃದ್ಧಿ ನಿಗಮದವರು, Minor Irrigation ದವರು ಮಾಡಿ ಸುಸ್ತಾಗಿ ಹೋದರು. ಈಗ

ನಮಗೆ ಸಾಕಾಗಿ ಹೋಯಿತು. Irrigation wells ಹೇಳುತ್ತಿದ್ದೀರಲ್ಲಾ ಇನ್ನು ನಾವು ಕರೆಂಟ್ ಕೊಡಲಾರದೆ ಹಾಗೆ ಇವೆ.

ಶ್ರೀ ಎಂ.ಬಿ. ಪಾಟೀಲ್:– ನಾನು ಹೇಳಿರುವುದನ್ನು ನೀವು ಕೇಳಿಸಿಕೊಳ್ಳಲಿಲ್ಲ. ನಾವು ಅವರಿಗೆ ಸೋಲಾರ್ ಪಂಪಸೆಟ್ಟು ಕೊಡುತ್ತಿದ್ದೇವೆ. ಒಬ್ಬರಿಗೆ ಕೊಡುತ್ತಿದ್ದೇವೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಹಾದು ಆ ಕೇರಿಗಳಿಗೆ ಸಮಸ್ಯೆ ಆಗುತ್ತದೆ ಎನ್ನುವುದಕ್ಕೋಸ್ಕರ ಆ ರಸ್ತೆಗಳನ್ನು ಮಾಡತಕ್ಕಂಥದು. ಅದು ಅವಶ್ಯ ಇದೆ ಅದನ್ನು ಮಾಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಅವರದ್ದು ಒಂದು ತರಹ ಇದೆ. ನೀವು ಒಂದು ಸಭೆ ಕರೆಯಿರಿ.

ಶ್ರೀ ಎಂ.ಬಿ. ಪಾಟೀಲ್:– ನಾವು ಅವರಿಗೆ ಸೋಲಾರ್ ಪಂಪಸೆಟ್ ಅನ್ನು ಕೊಡುತ್ತಿದ್ದೇವೆ. ನಾವು ಇವತ್ತು ಕೆ.ಇ.ಬಿ.ಯವರ ಮೇಲೆ depend ಆಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– Social Welfare Committee ಇದೆಯಲ್ಲಾ ಈ ಹಣವನ್ನು ಬಳಸಿಕೊಳ್ಳುವುದಕ್ಕೆ ಅಲ್ಲಿ ಇವುಗಳನ್ನು ಚರ್ಚೆ ಮಾಡಿ.

ಶ್ರೀ ಭೀಮಾ ನಾಯಕ್:– M.I. Department ನಲ್ಲಿ same scheme ಇದೆ. ಬೋರ್ ಹೊಡೆದು 6 ತಿಂಗಳಾಯಿತು ಸೋಲಾರ್ ಇಲ್ಲ, ಕರೆಂಟ್ ಇಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ:– Minor irrigationದಿಂದ ಆಗುತ್ತವೆ, major irrigation ದ್ದು ಏನು ಬೇಕಾಗಿಲ್ಲ.

ಶ್ರೀ ಭೀಮಾ ನಾಯಕ್:– ಬೋರ್ ಹೊಡೆಯುವುದಕ್ಕೆ ಹಣ ಬರುತ್ತದೆ, ಸೋಲಾರ್ ಹಾಕುವುದಕ್ಕೆ ಹಣ ಬಂದಿಲ್ಲವೆಂದರೆ, ಬೋರ್ ಏಕೆ

ಹಾಕಬೇಕು. M.I. Department ಬೋರ್ ಹಾಕಿದ್ದಾರೆ ಒಂದು ವರ್ಷವಾಯಿತು, ಸೋಲಾರ್ ಇಲ್ಲ, ಕರೆಂಟ್ ಇಲ್ಲ. ಇವು ಸ್ಕೀಂ ಗಳು ಅಷ್ಟೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇವರ ನೀರು ಹರಿದು ಹೋದಂತೆ ಇವರ ಮಾತು ಹರಿದು ಹೋಗುತ್ತಿದೆ.

ಶ್ರೀ ಎಂ.ಬಿ. ಪಾಟೀಲ್:– ನಿಮಗೆ ಬಹಳ expertise ಇದೆ. ಅದರಲ್ಲಿಯೂ ಬಿ.ಜೆ.ಪಿ.ಯಲ್ಲಿ ನಿಮಗೆ ಬಹಳಷ್ಟು qualification ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾವು ಒಂದೂವರೆ ವರ್ಷದಿಂದ ನೋಡುತ್ತಿದ್ದೇವೆ.

ಶ್ರೀ ಎಂ.ಬಿ. ಪಾಟೀಲ್:– ನಾವು ನಿಮ್ಮಷ್ಟು qualified ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನೀವು ನಮ್ಮನ್ನು ಮೀರಿಸಿ ಹೊರಟ್ಟಿದ್ದೀರಿ. ಬೋರ್‌ವೆಲ್ ಹೊಡೆಯುವುದು ಹೊಡೆಯುವುದು ಕೆಲಸ ಏನು ಇಲ್ಲ. ನಿಮ್ಮ ಮಾತು ಕೇಳಿದರೆ ನೀರು ಹರಿದು ಹರಿದು ಹೋಗುತ್ತಿದೆ.

ಶ್ರೀ ಎಂ.ಬಿ. ಪಾಟೀಲ್:– ನೀವು ಏನು ಮಾಡಿದ್ದೀರಿ ನನಗೆ ಗೊತ್ತಿದೆ.

ಶ್ರೀ ಹಂಪನಗೌಡ ಬಾದರ್ಲಿ:– ನೀರು ಹರಿಯುವುದಕ್ಕೆ ಕಾಲುವೆ ಇರುವುದು.

ಶ್ರೀ ಎಂ.ಬಿ. ಪಾಟೀಲ್:– ನೀರು ಹರಿಯಬೇಕು. ಅದು standstill ಆಗುವಂತಿಲ್ಲ. AIBP ಮಾರ್ಗಸೂಚಿಯಲ್ಲಿ ಹಿಂದೆ drought prone affected areas (DPA) ಏನಿವೆ, ಅಲ್ಲಿ ನಾವು 90% ಗ್ರಾಂಟ್ ಕೊಡುತ್ತಿದ್ದೇವೆ. ನಾವು NLBC ತೆಗೆದುಕೊಂಡಾಗ 90% ನಮಗೆ admissible ಇತ್ತು. ಈಗ ಅಲ್ಲಿ ಏನಾಗಿದೆ ಅದು 75:25 ಆಗಿದೆ. Recentಆಗಿ ನಮ್ಮ AIBP guidelines modify ಮಾಡಿದ್ದಾರೆ. ವಿಶೇಷವಾಗಿ ನಮ್ಮ NLBC ನಮ್ಮ TACನಲ್ಲಿ clear ಆದ ಮೇಲೆ ನಮ್ಮ AIBP guidelines change ಆಯಿತು. ಇವತ್ತು ನಾವು 75:25 ಮಾಡಬೇಕು. ಇನ್ನೊಂದು condition ಹಾಕಿದ್ದಾರೆ. ಅಲ್ಲಿ 50% physical or financial progress ಆಗಬೇಕೆಂದು. ಇವತ್ತು ನಮ್ಮ NLBCಗೆ

90% grant ಬರುತ್ತದೆ. NLBC modernization ತೆಗೆದುಕೊಳ್ಳುತ್ತೀರೆಂದು ಕೇಳುತ್ತಿದ್ದೀರಿ. ಇವತ್ತು NLBC ಯಲ್ಲಿ 11000 ಕ್ವೀಸೆಕ್ಸ್ ನೀರು ಹರಿಯಬೇಕಾಗಿತ್ತು, ಅಲ್ಲಿ 6000 ಕ್ವೀಸೆಕ್ಸ್ ನೀರು ಹರಿಯುತ್ತಿದೆ. ಇವತ್ತು ಇದು ನಾಲ್ಕು ಜಿಲ್ಲೆಗಳ ಒಂದು lifeline ಇದೆ. ಅಲ್ಲಿ ಸುಮಾರು 3 ಲಕ್ಷ ಹೆಕ್ಟೇರ್ ಪ್ರದೇಶ suffering ಅಚ್ಚುಕಟ್ಟು ಇದೆ. 90% ಗ್ರಾಂಟ್ ಅಲ್ಲಿ ನಮಗೆ ಸಿಗುತ್ತದೆ ಅಂದ ಮೇಲೆ ಇವತ್ತು ನಾವು permission ತೆಗೆದುಕೊಳ್ಳುವಾಗ ಹರೀಶ್ ರಾವತ್‌ರವರು ಅಂದು ಕೇಂದ್ರ ಜಲಸಂಪನ್ಮೂಲ ಸಚಿವರಾಗಿದ್ದರು. ನಾವು ಹೋಗಿ ಕ್ಲೀಯರ್ ಮಾಡಿಕೊಂಡು ಬಂದಿರುತ್ತೇವೆ. ಇವತ್ತಿನ ದಿವಸ guidelines change ಆಯಿತು. ನಾವು ಮಾನ್ಯ ಪ್ರಧಾನ ಮಂತ್ರಿಗಳಿಗೂ ಕೂಡ ಮನವಿಯನ್ನು ಕೊಟ್ಟಿದ್ದೇವೆ. ಕೇಂದ್ರ ಸಚಿವರು, Water Resource Minister ಗೆ ಕೊಟ್ಟು ಮತ್ತೆ guidelines restore ಮಾಡಿ ಈ conditions ತೆಗೆದುಹಾಕಿ ಎಂದು ಹೇಳಿದ್ದೇವೆ. ಮಹಾರಾಷ್ಟ್ರ ಮತ್ತು ನಮಗೆ drought prone areasದಲ್ಲಿ problem ಬರುತ್ತಿದೆ. ಮಾನ್ಯ ಬಿ.ಆರ್. ಪಾಟೀಲ್‌ರೆ ತಮಗೂ ಕೂಡ ಅದನ್ನು ಹೇಳಿದ್ದೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ನಮಗೆ AIBP clear ಆಗಲಿಲ್ಲ. ಅದು 25:75 ಎಂದು ಅನ್ನುತ್ತೀರಲ್ಲಾ ಆ 25% ಗೆ state fund ಇಲ್ಲವೆಂದು ಹೇಳಿ ನಾವು ಕಳುಹಿಸಿ ಕೊಟ್ಟರೆ ERM ಮಾಡಿಕೊಂಡು ಕುಳಿತರೆ ಯೋಜನೆಗಳು ಯಾವಾಗ ಪೂರ್ತಿ ಆಗುತ್ತಿವೆ. ತಮಗೆ ಫೋಟೋ ಕೊಟ್ಟಿದ್ದೇನೆ ನೋಡಿ ಸರ್, ಕಾಲುವೆಗಳು ಇಲ್ಲದೆ ನೀರು ಹೇಗೆ ಬರಬೇಕು.

ಶ್ರೀ ಎಂ.ಬಿ. ಪಾಟೀಲ್:- ಈಗ AIBP ಅಡಿಯಲ್ಲಿ ಇವತ್ತು ರಾಮೇಶ್ವರ ಏತ ನೀರಾವರಿ ಯೋಜನೆ ಮತ್ತು ತುಂಗಾ ಮೇಲ್ದಂಡೆ ಯೋಜನೆಗಳಿಗೆ ಹೊಸ ಮಾರ್ಗಸೂಚಿಗಳನ್ವಯ 2014-15ನೇ ಸಾಲಿಗೆ ಅನುದಾನ ಕೋರಿ ನಾವು ಕೇಂದ್ರ ಜಲ ಆಯೋಗಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ. ಮಹಾದಾಯಿ ನ್ಯಾಯಾಧೀಕರಣದ ಬಗ್ಗೆ ಮಾನ್ಯ ಯಾವಗಲ್‌ರವರು ಕೇಳುತ್ತಿದ್ದರು. ಮೊನ್ನೆ ನಾವು Floor Leaders' meeting ಮಾಡಿ ನಮ್ಮ ರಾಜ್ಯದವರು ನಾವು ಏನೇನು ಪಡೆದುಕೊಳ್ಳಬೇಕೆನ್ನುವ

ದಿಶೆಯಲ್ಲಿ 7.56 TMC ಇದಲ್ಲದೆ ಸುಮಾರು 8 TMC ಗೆ ಇವತ್ತಿನ ದಿವಸ work out ಮಾಡುತ್ತಿದ್ದಾರೆ. Irrigation ಗೆ ಕೂಡ ಕೊಡುವುದಕ್ಕಾಗಿ ನಿಮ್ಮ ಜೊತೆಗೂ ಸಹ ಚರ್ಚೆ ಮಾಡಿದ್ದಾರೆ. ನ್ಯಾಯಾಧಿಕರಣದ ವಿಷಯ ಇರುವುದರಿಂದ ಇಲ್ಲಿ ಅದರ ಚರ್ಚೆ ಬೇಡ. Cauvery Tribunal ವಿಷಯದಲ್ಲಿ ನಾನು ಮಾತನಾತನಾಡಲಿಕ್ಕೆ ಬಯಸುವುದಿಲ್ಲ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಮಂತ್ರಿಯವರೆ, ನಾನು ಕೇಳಿದ ಪ್ರಶ್ನೆಗೆ ಉತ್ತರ ಹೇಳಲ್ಲಿಲ್ಲ.

(ಗೊಂದಲ)

ಶ್ರೀ ಭೀಮಾ ನಾಯ್ಕ್:- ಕುಡಿಯುವ ನೀರಿನ ದೃಷ್ಟಿಯಿಂದ ಒಂದು TMC ನೀರು ಸಲುವಾಗಿ ಪ್ರಸ್ತಾವನೆ ಕೊಟ್ಟಿದ್ದೇವೆ. ಅದರ DPR ಆಗಿದೆಯೇ?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಮಂತ್ರಿಯವರೆ, ತಾವು ನ್ಯಾಯಾಧಿಕರಣದಲ್ಲಿರುವುದರಿಂದ ಚರ್ಚೆ ಮಾಡುವುದಿಲ್ಲವೆಂದು ಹೇಳುತ್ತೀರಿ. ನೀರು ಹೋಗುವುದನ್ನು ತಡೆಹಿಡಿಯಬೇಕೆಂದು ನಿಮಗೆ ಆದೇಶ ಬರುತ್ತದೆ. ಸಹಜವಾಗಿ ನಾನು ಕಾನೂನಿನ ಪ್ರಕಾರ ನಾವು ಅದನ್ನು appeal ಮಾಡಬೇಕಲ್ಲ.

ಶ್ರೀ ಎಂ.ಬಿ. ಪಾಟೀಲ್:- ನಾವು ಮೊನ್ನೆ Floor Leaders'meeting ಮಾಡಿ ನಾವು, ಜಗದೀಶ್ ಶೆಟ್ಟರ್ ಸಾಹೇಬರು ಎಲ್ಲರೂ ಇದ್ದೆವು. ಎಲ್ಲರೂ ಕೂಡಿ ಆವತ್ತಿನ ದಿವಸ ಏನು ಮಾಡಬೇಕೆಂಬುದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಒಂದು ಸಲ ನೀರು ಕೊಟ್ಟುಬಿಡಿ. ಏನು ಮಾಡುವುದಿದ್ದರೂ ಮಾಡಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಮುಖ್ಯಮಂತ್ರಿಯವರು ಏನು ಭರವಸೆ ಕೊಟ್ಟಿದ್ದರು, ಅದರ ಬಗ್ಗೆ ಸ್ಪಷ್ಟವಾಗಿ ಹೇಳಿ. BMR ನಿಂದ ಅಮರ್ಜಾಕ್ಕೆ ನೀರು ತರುವುದರ ಬಗ್ಗೆ.

ಶ್ರೀ ಬಿ.ಆರ್. ಯಾವಗಲ್:– ಮಾನ್ಯ ಅಧ್ಯಕ್ಷರೆ, Floor Leaders' meeting ಎಂದು ಮಾಡುತ್ತಾರೆ. ನನಗೆ ಬಿಡಿ ಹೋಗಲಿ, ಆ ಪ್ರದೇಶದ ಯಾವ ಶಾಸಕರನ್ನೂ ಕರೆದು suggestion ಕೇಳುವುದಿಲ್ಲ.

(ಗೊಂಲದ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಸಂಬಂಧಪಟ್ಟ ಪ್ರದೇಶದ ಶಾಸಕರು ನಾವು. ಒಂದು ದಿವಸ ಸಹ ಇವರು ಕರೆಯುವುದಿಲ್ಲ. ಏನೆಂದು ತಿಳಿದುಕೊಂಡಿದ್ದಾರೆ?

(ಗೊಂದಲ)

ಶ್ರೀ ಬಿ.ಆರ್. ಯಾವಗಲ್:– ಸಂಬಂಧ ಇಲ್ಲದವರು ಕೂಡಿ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತಾರಷ್ಟೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಅಲ್ಲಿ floor leaders meeting ಎಂದು ಮಾಡುತ್ತಾರೆ. ಆ ಪ್ರದೇಶದ ಮೂರು ಮಂದಿಗೆ ಅವಕಾಶ ಕೊಡಲಿ.

(ಗೊಂದಲ)

ಶ್ರೀ ಭೀಮಾ ನಾಯ್ಕ್:– ತುಂಗಭದ್ರಾ ನದಿಯಿಂದ ಎಲ್ಲಾ factory ಗಳಿಗೆ ನೀರು ಕೊಡುತ್ತಿದ್ದಾರೆ. ಆದರೆ, ನಮಗೆ ಕುಡಿಯುವ ನೀರು ಕೊಡುವುದಕ್ಕೆ ಇವರಿಂದ ಆಗುವುದಿಲ್ಲ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಬೆಂಗಳೂರಿನಲ್ಲಿ ಕುಳಿತು ಸಭೆ ಮಾಡಿದರೆ ಆ local ಸದಸ್ಯರನ್ನು ಕರೆಯುವುದೇ ಇಲ್ಲ. ದಯಮಾಡಿ ಅಂಥ major ಸಮಸ್ಯೆ ಇದ್ದಾಗ ಜನಪ್ರತಿನಿಧಿಗಳನ್ನು ಆ ಸಭೆಗೆ ಕರೆಯಲಿಕ್ಕೆ ಹೇಳಿ ಸರ್.

(ಗೊಂದಲ)

ಶ್ರೀ ಭೀಮಾ ನಾಯ್ಕ್:– ಸಾಸಿವೆಹಳ್ಳಿ ಏತನೀರಾವರಿ ಬಗ್ಗೆ ಮಾನ್ಯ ಸಚಿವರು ಪ್ರಸ್ತಾಪವೇ ಮಾಡಲಿಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– I come to individual.

ಶ್ರೀ ಭೀಮಾ ನಾಯ್ಕ್:– ಮಾನ್ಯ ಅಧ್ಯಕ್ಷರೆ, ಏನಾದರೂ dam ತೋರಿಸಬೇಕೆಂದರೆ ನಮ್ಮ ಬೊಮ್ಮನಹಳ್ಳಿ ಕ್ಷೇತ್ರಕ್ಕೆ ಕರೆದುಕೊಂಡು ಬರಬೇಕು. ತುಂಬಿರುವ ಡ್ಯಾಂ ಎಂದರೆ ನಮ್ಮ ತುಂಗಭದ್ರಾ ಡ್ಯಾಂ ಅನ್ನು ತೋರಿಸಬೇಕು.

ಶ್ರೀ ಎಂ.ಬಿ. ಪಾಟೀಲ್:– ಇವತ್ತು ಕೊಪ್ಪಳ ಇದರ ಬಗ್ಗೆ ಒಂದು ಪ್ರಸ್ತಾಪ ಬಂತು. ಕೊಪ್ಪಳದ tender ಬಗ್ಗೆ ಇಲ್ಲಿ ಪ್ರಶ್ನೆ ಬಂತು. ಕೊಪ್ಪಳದ ಟೆಂಡರ್ ಸಂಬಂಧಿಸಿದಂತೆ ದಿನಾಂಕ 22.12.2012ರಲ್ಲಿ tender call for ಮಾಡಿದೆ. After technical approaisal ಎಲ್ಲ ಮಾಡಿದ ಮೇಲೆ 3 bid ಅನ್ನು technically approve ಮಾಡಿದೆವು. March 8ಕ್ಕೆ bid open ಆಯಿತು. ಅದರಲ್ಲಿ 3 contractor. L1 ₹ 692 crores, L2- ₹ 945 crores, ಇನ್ನೊಬ್ಬರು L3 ಇದ್ದರು ಅವರು ₹ 981 crores ಅದು ಪ್ರಶ್ನೆ ಬರುವುದಿಲ್ಲ. L1-₹ 692 crores, L-2 ₹ 945 crores, L1 and L2 ಗೆ ₹ 280 crores difference ಇದೆ. ಇಲ್ಲಿ ಗಮನಿಸಿದಾಗ ಏನಾಗಿದೆ ಎಂದರೆ, similar tender on lift irrigation schemes of Muluwad, ಯಾರು disqualify ಆಗಿದ್ದಾರೆ, similar tender on Muluwad ಮತ್ತು ಮುಖ್ಯವಾಗಿ ಕೊಪ್ಪಳ stage ನ ಇನ್ನೊಂದು package ನಲ್ಲಿ ನಾವು qualify ಮಾಡುತ್ತೇವೆ. ಮುಳವಾಡ ಮತ್ತು ಕೊಪ್ಪಳ ಇದರೊಳಗೆ

ಇನ್ನೊಂದು package ನಲ್ಲಿ ನಾವು qualify ಮಾಡುತ್ತೇವೆ. ಮುಳವಾಡ ಮತ್ತು ಕೊಪ್ಪಳ ಇದರೊಳಗೆ ಇನ್ನೊಂದು package ನಲ್ಲೂ qualify ಮಾಡುತ್ತೇವೆ. ಇಲ್ಲಿ disquailify ಮಾಡುತ್ತೇವೆ. ಮತ್ತು difference ಎಷ್ಟಿದೆ ಎಂದರೆ L1 and L2ಗೆ 280 ಕೋಟಿ ರೂಪಾಯಿಗಳು. ಈಗ ಈ companies ಎಲ್ಲಾ ಕೂಡ qualify ಆಗಿ after opening of the Financial bid, ಆವಾಗ ಏನಾಯಿತು ಎಂದರೆ, the then TAC observations ಮಾಡಿದರು. Which were not found legally and technically tenable. ಅದಕ್ಕೋಸ್ಕರ ಇವತ್ತಿನ ದಿವಸ L1 ಯಾರಿದ್ದಾರೆ, ಆ L1 ಗೆ ಕೊಟ್ಟೆವು, 280 ಕೋಟಿ ರೂಪಾಯಿಗಳು ಇವತ್ತಿನ ದಿವಸ ನಮಗೆ ಉಳಿತಾಯವಾಗುತ್ತದೆ. ಇದು ಇದರ background. ಇನ್ನು ಮಾನ್ಯ ಜೆ.ಟಿ. ಪಾಟೀಲರು ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದರು. ಏಕೆಂದರೆ ಜೆ.ಟಿ. ಪಾಟೀಲರು ಹೇಳಿರುವುದರಲ್ಲಿ ಬಹಳ ಸಮಂಜಸವಿದೆ. UKP stage 3ರಲ್ಲಿ ಮುಖ್ಯವಾಗಿ ಹೋಗುವಂಥದ್ದು ಬೀಳಗಿ ಮತ್ತು ಜಮಖಂಡಿ. ಅಲ್ಲಿ ನಮ್ಮ ಭೂಮಿಗೆ ಒಳ್ಳೆಯ ಬೆಲೆ ಸಿಗಬೇಕು, ಒಳ್ಳೆಯ R&R facilities ಆಗಬೇಕೆಂದು ಕೇಳಿದ್ದಾರೆ. ಹೊಸ land acquisition ನಲ್ಲಿ ಬಹಳ ಬಿಗು ಇದೆ. Fair Compensation Act ನಲ್ಲಿ 4 time ನಷ್ಟು ಹಣ ಸಿಗುತ್ತದೆ. ಮತ್ತು R&R facilities, ನಾವು ನೀರು ನಿಲ್ಲಿಸಬೇಕಾದರೆ 6 ತಿಂಗಳ ಮುಂಚಿತವಾಗಿ ನಾವು R&R complete ಮಾಡಬೇಕಾಗುತ್ತದೆ. ಇದೆಲ್ಲವೂ ಕೂಡ ಇವತ್ತಿನ ದಿವಸ ಇದೆ. ಮಾನ್ಯ ಕಾರಜೋಳರವರು ಮಾತನಾಡುತ್ತಾ, 4 ಪಟ್ಟು ಮಾಡಿದರೂ ಕೂಡ ನಮ್ಮಲ್ಲಿ ಕೆಲವು ಕಡೆ sub registrar ಆ value ಕಡಿಮೆ ಇದೆ ಎಂದು ಹೇಳಿದರು. ನಿಮ್ಮ apprehension ನನಗೆ ಗೊತ್ತಿದೆ. ಅದಕ್ಕೂ ಕೂಡ ಈ rules frame ಆದಮೇಲೆ High Level Committee ಯಲ್ಲಿ ಚರ್ಚೆ ಮಾಡಿ ನನಗೆ ಕೆಲವೊಂದು suggestions ಕೂಡ ಕೊಟ್ಟಿದ್ದಾರೆ. ಯಾವ ರೀತಿ ಅದನ್ನು ಸರಿಪಡಿಸಿಕೊಳ್ಳಬಹುದೆಂದು suggestions ಕೊಟ್ಟಿದ್ದಾರೆ. ಆ ದಿಶೆಯಲ್ಲಿ ನಾವು ಸೂಕ್ತ ಕ್ರಮ ಕೈಗೊಂಡು, ಒಟ್ಟಾರೆ ಅಲ್ಲಿ ಭೂಮಿಗೆ ಏನು market price ಇದೆ ಯಾರಿಗೂ ಕೂಡ market price ಗಿಂತ ಕಡಿಮೆ ಕೊಡುವ ಕೆಲಸವನ್ನು ನಾವು ಇವತ್ತಿನ ದಿವಸ

ಮಾಡುವುದಿಲ್ಲ. ನ್ಯಾಯಯುತವಾಗಿ ಕೊಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ. ಈ ಹೊಸ ಭೂಕಾಯಿದೆಯ concept ಏನಿದೆ, ಯಾರು ನೀರಾವರಿಯಿಂದ ಇವತ್ತಿನ ದಿವಸ ಮುಂದುವರಿಯುತ್ತಾರೆ, ಅವರಿಗಿಂತ ಯಾರು ಭೂಮಿ ಕಳೆದುಕೊಂಡಿರುತ್ತಾರೆ, ಭೂಮಿ ಕಳೆದುಕೊಂಡು ಯಾರು ನಿರಾಶ್ರಿತರಾಗಿರುತ್ತಾರೆ ಅವನ ಜೀವನ ಮಟ್ಟ ನೀರಾವರಿಯವರಿಗಿಂತ ಉನ್ನತವಾಗಿರಬೇಕೆಂದು ಏನಿದೆ, ಆ philosophy ಯಲ್ಲಿ ನಾವು ನಂಬಿಕೆ ಇಟ್ಟಿರತಕ್ಕಂಥವರು. ಆ ಕೆಲಸವನ್ನು ನಾವು ಮಾಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆಯೇ ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಿ ಕೌಶಲ್ಯ ಕೇಂದ್ರ, ಇನ್ನಿತರ facilities ಇರಬೇಕು, R&R facilities ಇರಬೇಕೆಂದು ಹೇಳಿದ್ದಾರೆ. ಆ ದಿಶೆಯಲ್ಲಿ ಇವತ್ತಿನ ದಿವಸ ನಾವು ಕ್ರಮವನ್ನು ಕೈಗೊಳ್ಳುತ್ತೇವೆ. ಆಮೇಲೆ ಮೀಸಲಾತಿಗಳ ಬಗ್ಗೆಯೂ ಕೂಡ ಕೇಳಿದರು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– Market rate ಗಿಂತಲೂ ಕಡಿಮೆಗೆ ನಾವು ಯಾವುದನ್ನೂ ಮಾಡುವುದಿಲ್ಲವೆಂದು ಈಗ ನೀವು land acquisition ಬಗ್ಗೆ ಹೇಳಿದಿರಿ. ನಮ್ಮಲ್ಲಿ ಹಿಪ್ಪರಗಿ barrage ನಲ್ಲಿ 26 ಹಳ್ಳಿಗಳು ಪುನರ್‌ವಸತಿಗೆ ಹೋಗುತ್ತಿವೆ. ಕೆಲವೊಂದು ಕಡೆ Government land ಸಿಕ್ಕಿದೆ ಅಲ್ಲಿ ನಾವು development ಮಾಡುತ್ತಿದ್ದೇವೆ. ಕೆಲವೊಂದು ಕಡೆ private land ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. 4(1) ಆಗಿದೆ, 6(1) ಆಗಿದೆ, award pass ಆಗಿದೆ. But ಅವರು ಕಬ್ಜಾ ಕೊಡುತ್ತಿಲ್ಲ. ತಕರಾರು ಮಾಡುತ್ತಿದ್ದಾರೆ. ಅಲ್ಲಿ ನೀವು rate ಏನು fix ಮಾಡಿದ್ದೀರೆಂದರೆ, ₹ 1,90,000 ಹಿಂದೆ fix ಮಾಡಿರುವಂಥದ್ದು. ಅದನ್ನು enhance ಮಾಡುತ್ತೀರಾ ಹೇಗೆ?

ಶ್ರೀ ಎಂ.ಬಿ. ಪಾಟೀಲ್:– ಅದು ಹಳೆ Act ನಲ್ಲಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅದನ್ನು enhancement ಮಾಡುತ್ತೀರಾ ಹೇಗೆ?

ಶ್ರೀ ಎಂ.ಬಿ. ಪಾಟೀಲ್:– ಅದು ಹಳೆ Act. ಎಲ್ಲೆಲ್ಲಿ ನಮ್ಮದು award ಆಗಿಲ್ಲ, ..

ಅಧ್ಯಕ್ಷರು:– ಹಾಗಾದರೆ ಲಿಂಗನಮಕ್ಕಿ ಡ್ಯಾಂನಿಂದ ನಾವು ಬಹಳಷ್ಟು ಪ್ರದೇಶಗಳನ್ನು ಕಳೆದುಕೊಂಡೆವು. ಈಗ ಅವನ್ನೆಲ್ಲ reopen ಮಾಡಿ.

(ಸದನದಲ್ಲಿ ನಗುವಿನ ಅಲೆ)

ಅಧ್ಯಕ್ಷರು:– ರೀ, ಆಯಾಯ ಕಾಲದಲ್ಲಿ ಯಾವ provision ಇದೆ, applicable ಮಾಡಿಕೊಂಡು ಮಾಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ತಾವು ಲಿಂಗನಮಕ್ಕಿ, ನಾವು ಆಲಮಟ್ಟಿಯದ್ದು ಹೇಳುವುದು ಅಲ್ಲ ಸರ್. ಆ ಹಳ್ಳಿಗಳು ಇನ್ನೂ shift ಆಗಿಲ್ಲ. ಇನ್ನೂ ಅವರು award ತೆಗೆದುಕೊಂಡಿಲ್ಲ.

ಅಧ್ಯಕ್ಷರು:– ಆಯಿತು. ಅವೆಲ್ಲ human, ಅದಕ್ಕೋಸ್ಕರ ಬಿಟ್ಟುಬಿಟ್ಟರು.

ಶ್ರೀ ಎಂ.ಬಿ. ಪಾಟೀಲ್:– ಸವದಿಯವರೆ, ಎಲ್ಲೆಲ್ಲಿ award ತೆಗೆದುಕೊಂಡಿಲ್ಲ, ಎಲ್ಲೆಲ್ಲಿ award finalize ಆಗಿವೆ, ಅಲ್ಲೆಲ್ಲ new Act ಬರುತ್ತದೆ. ಅದಕ್ಕೆ ಏನೂ ಆತಂಕ ಪಡುವ ಅಗತ್ಯವಿಲ್ಲ. ಜೆ.ಟಿ. ಪಾಟೀಲರು ಅಲ್ಲಿ ಉದ್ಯೋಗವಕಾಶವನ್ನು ಕೊಡಬೇಕೆನ್ನುವಂಥದ್ದನ್ನು ಕೇಳಿದ್ದಾರೆ. ಅದು ನಿರ್ಣಯಗಳಾಗಿದ್ದರೂ high level committee ಮುಖಾಂತರ ನಿರ್ಧಾರವಾಗುತ್ತದೆ.

ಅಧ್ಯಕ್ಷರು:– ಈಗಾಗಲೇ 4% reservation ಇದೆ. ಜಾಸ್ತಿ ಬೇಕಾದರೆ ಮುಳುಗಡೆಯಾದವರಿಗೆ ಕೊಡಿ.

ಶ್ರೀ ಎಂ.ಬಿ. ಪಾಟೀಲ್:– ಅದು ಸರಿಯಾಗಿ implement ಆಗುತ್ತಿಲ್ಲವೆಂದು ಅವರು ಹೇಳಿದ್ದಾರೆ. ಅದಕ್ಕೆ high level committee ಏನಿದೆ ಅದನ್ನು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಿರ್ಧಾರವನ್ನು ಕೈಗೊಳ್ಳುತ್ತೇವೆ. ಇನ್ನು ಬಸವರಾಜ ರಾಯರೆಡ್ಡಿಯವರು ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದರು. ಅವರು ಕೆಲವು ಆತಂಕಗಳನ್ನು express ಮಾಡಿದರು. Andhra Reorganisation Act 2014, ಅದರ ಪರಿಣಾಮ ಏನಾಗುತ್ತದೆ ಎಂದು ಮೊನ್ನೆ ಅದನ್ನೂ ಕೂಡ Floor Leaders meeting ಮಾಡಿದೆವು.

ಅದಕ್ಕೆ legal team, technical team ನವರೆಲ್ಲಾ ಅದಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರವಾಗಿ ಇವತ್ತಿನ ದಿವಸ ನಾವು ಮಾಡುತ್ತಿದ್ದೇವೆ. ಅವರಿಗೆ ತುಂಗಭದ್ರ Implementation Board continue ಆಗಲಿ ಎಂದು ಹೇಳಿದ್ದಾರೆ ಎಂದು ಅವರಿಗೆ ಒಂದು ಇದು ಇತ್ತು. ಅದು ತುಂಗಭದ್ರ Implementation Board natural ಆಗಿ ಅದು continue ಆಗಬೇಕು. It cannot stop. ಏಕೆಂದರೆ, ಅದಕ್ಕೆ temporary arrangement ಇರುತ್ತದೆ.

ಅಧ್ಯಕ್ಷರು:– ಅದನ್ನು examine ಮಾಡಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾಡುತ್ತೇವೆ. ಮಾನ್ಯ ಕುಮಾರಸ್ವಾಮಿಯವರು ವಿಚಾರಗಳನ್ನು ಹೇಳಿದ್ದಾರೆ. ಇವತ್ತಿನ ದಿವಸ ಅಲ್ಲಿ ಕೆಲವೊಂದು ದೇವಸ್ಥಾನಗಳು ಶಿಥಿಲವಾಗಿವೆ ಎಂದು ಹೇಳಿದರು. ಅದರ ಬಗ್ಗೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ ಮತ್ತು ಈ ಶೀತ ಪೀಡಿತ ಏನಿದೆ, ವಿಶೇಷವಾಗಿ ಮುಖ್ಯವಾಗಿ ಬಹಳಷ್ಟು ಕಡೆಗಳಲ್ಲಿ ವೆಚ್ಚ ಮಾಡುತ್ತೇವೆ. ಈ ಶೀತ ಪೀಡಿತ ಗ್ರಾಮಗಳು ಏನು ಬರುತ್ತವೆ, ಏಕೆಂದರೆ ಬಹಳಷ್ಟು ಕಡೆಗಳಲ್ಲಿ R&R ನವರು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಇದನ್ನು ಮಾಡುತ್ತಾರೆ. ಇವತ್ತು ಅನೇಕ ಯೋಜನೆಗಳು ಮುಕ್ತಾಯಗೊಂಡು ಇವತ್ತಿನ ದಿವಸ ಆಗಿವೆ. ಆದರೂ ಕೂಡ ನಾವು ಎಲ್ಲೆಲ್ಲಿ ಶೀತ ಪೀಡಿತವಿದೆ ಎಂದು ಹೇಳುತ್ತೇವಲ್ಲಾ ಅಲ್ಲೆಲ್ಲಾ ನಾವು ಇವತ್ತಿನದಿವಸ remedial steps ತೆಗೆದುಕೊಳ್ಳಬೇಕು. ಅಲ್ಲಿ ಒಂದು reengineering ಮಾಡಿ ಅಲ್ಲಿ ಶೀತಪೀಡಿತವಾಗದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. Technical ಆಗಿ best standards ಆಗಿ ಏನೇನು national standards, international standards ಮಾಡಬೇಕು ಅದನ್ನು ಮಾಡಿ ಆ ಪ್ರಕಾರವಾಗಿ ಇದನ್ನು ತಪ್ಪಿಸಲಿಕ್ಕೆ ಸಾಧ್ಯತೆಯಿದೆಯೋ ಆ ಕ್ರಮವನ್ನು ನಾವು ಕೈಗೊಳ್ಳುತ್ತೇವೆ. ಆಮೇಲೆ ಇನ್ನು ಒಂದು ಅವರು ಪಾರ್ಕ್ ಬಗ್ಗೆ ಕೇಳಿದ್ದಾರೆ. ಆ ಬಗ್ಗೆ ನಾನು ಉತ್ತರವನ್ನೂ ಕೊಟ್ಟಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಗೊರೂರಿನದು ಹೇಮಾವತಿ ಜಲಾಶಯದ ಬಗ್ಗೆ ಕೇಳಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್:– ಮೊದಲೇ ಹೇಳಿದ್ದೇನಲ್ಲಾ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಹೇಳಿಲ್ಲ.

ಶ್ರೀ ಎಂ.ಬಿ. ಪಾಟೀಲ್:– ಎಲ್ಲರ ಜೊತೆಗೇ ಹೇಳಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಹೌದಾ? ಮಾಡಿಕೊಡುತ್ತೀರಲ್ಲವೇ? ನೀವು ಮಾಡಿ. ರೆವಿನ್ಯೂ ನಾವು ಕೊಡುತ್ತೇವೆ. ನೀವು ಎಷ್ಟು ಹಣ ಖರ್ಚು ಮಾಡುತ್ತೀರೋ ಅಷ್ಟು ನಾವು ವಾಪಸ್ಸು ಕೊಡುತ್ತೇವೆ.

ಶ್ರೀ ಎಂ.ಬಿ. ಪಾಟೀಲ್:– ಒಟ್ಟಿಗೆ ಇದನ್ನೆಲ್ಲಾ ಮಾಡಬೇಕು. ಮಾನ್ಯ ಬೋಪಯ್ಯನವರು ಕೂಡ ಅಲ್ಲಿ ಭಾಗಮಂಡಲದಲ್ಲಿ ಒಂದು ಸೇತುವೆ ಆಗಬೇಕೆಂದು ಕೇಳಿದರು.

ಅಧ್ಯಕ್ಷರು:– ಮಾಡಿಕೊಡಿ.

ಶ್ರೀ ಎಂ.ಬಿ. ಪಾಟೀಲ್:– ಅಲ್ಲಿ ಇವತ್ತು 5 ಕೋಟಿ ರೂಪಾಯಿಗಳ ಕೆಲಸ ಶುರುವಾಗಿದೆ. ಅದರ ಬಗ್ಗೆ ನಾನು ಕಾವೇರಿ ನೀರಾವರಿ ನಿಗಮದಿಂದ ಕ್ರಮ ತೆಗೆದುಕೊಳ್ಳುತ್ತೇನೆ. ಮಾಡುತ್ತೇವೆ.

ಅಧ್ಯಕ್ಷರು:– ಅದರ ಬಗ್ಗೆ ನಾನು ಒಂದು ಹೇಳುತ್ತೇನೆ ಕೇಳಿ. ನೀವು ಅಲ್ಲಿ ಅಣೆಕಟ್ಟು ಕಟ್ಟಿ ಮುಳುಗಿಸಿದ್ದೀರಿ. ಎಲ್ಲಾ ನೀರು ತೆಗೆದುಕೊಂಡು ಮಜಾ ಹೊಡೆಯುತ್ತೀರಿ. ಅಲ್ಲಿ ನೀರು ನಿಂತು ಊರಿಗೆ ಹೋಗುವುದಕ್ಕೆ ಆಗುವುದಿಲ್ಲ. ನಮ್ಮ ಹಣೆಬರಹ ಅದು. ಪಾಪ ನಮ್ಮ KPC MD ಇದ್ದರು. ಮೊನ್ನೆ ಪಾಪ ಒಂದು–ಒಂದೂವರೆ ಕೋಟಿ ರೂಪಾಯಿಗಳಲ್ಲಿ ಒಂದು ರಸ್ತೆ ಮಾಡಿದ್ದಾರೆ. ಉಳಿದುಕೊಂಡು ಬಿಟ್ಟಿದ್ದಾರೆ. ಅಲ್ಲಿಗೆ ಏನು ಮಾಡುತ್ತೀರಿ? ಮಾನ್ಯ ಕಾಗೇರಿ ನೆಂಟರೆಲ್ಲಾ ಅವರ ಕೈಗೆ ಕೊಟ್ಟಿದ್ದಾರೆ. ಇವತ್ತಿನ ದಿವಸ ಶರಾವತಿ back water ಗೆ 170 ಕೋಟಿ ರೂಪಾಯಿಗಳು ಆಗುತ್ತದೆ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ನಾವು ಕೊಡಗು ಜಿಲ್ಲೆಯಿಂದ ನೀರು ಕೊಡುತ್ತೇವೆ. ನಮ್ಮಲ್ಲಿ ಚಿಕ್ಕಲಿ ಹೊಳೆಯಲ್ಲಿ 2000 ಎಕರೆಗೆ ಮಾತ್ರ ನೀರು ಆಗುತ್ತದೆ.

ಅಧ್ಯಕ್ಷರು:– ಅದಕ್ಕೆ ಹೇಳಿದ್ದೇನೆ. ಮಾಡಿಕೊಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಕಳೆದ ಸಾರಿ ಈ ಬಗ್ಗೆ ನಾನು zero hour ನಲ್ಲಿ raise ಮಾಡಿದ್ದೆ. ಅದಕ್ಕೆ ಉತ್ತರ ಕೊಡಲಿಲ್ಲ. ಮಾಡುತ್ತೇವೆ ಎಂದು ಹೇಳಿದರು. ದಯವಿಟ್ಟು ಅದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಮಾನ್ಯ ಅಪ್ಪಚ್ಚುರವರೆ, ನಾನು ಒಂದು ಹೇಳುತ್ತೇನೆ. ಮೊದಲು ಮುಳುಗಡೆಯಿಂದಾಗಿ affected ಯಾರಿರುತ್ತಾರೆ ಅವರಿಗೆ ಯಾವ ರೀತಿ communication ಅಥವಾ ಇನ್ನೇನು ತೊಂದರೆಯಾಗುತ್ತದೆ ಅದರ ಪರಿಹಾರಕ್ಕೆ first priority ಕೊಡಬೇಕು. Because those people have sacrificed. ಅವರಿಗೆ ನೀವು ಸಹಾಯ ಮಾಡಿಕೊಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ತಾವು ಉಲ್ಲೇಖ ಮಾಡಿದ್ದೀರಿ. ತುಂಬರಿದು ಅದು ಆ ಸೇತುವೆ ಆಗಲೇಬೇಕು. ಆ ಸೇತುವೆ ಆಗಲಿಲ್ಲವೆಂದರೆ, ಅಲ್ಲಿ . ..

ಅಧ್ಯಕ್ಷರು:– ಆಯಿತು. ನಾನು ಹೇಳೋಣವೇ? ನಾನು PWD Minister ಆದರೆ ಒಂದು ವರ್ಕ್‌ಗೆ administrative approval ಕೊಡಬೇಕಾದರೆ one third grant ಇಟ್ಟುಕೊಳ್ಳಬೇಕೋ ಬೇಡವೋ? ಏನ್ರಿ ಕುಮಾರಸ್ವಾಮಿಯವರೇ? ಏನೆಲ್ಲಾ ಮಾಡಿಹೋಗಿದ್ದಾರೆ. ಚಿಂತೆಯಿಲ್ಲ. ನಾನು ಬೆನ್ನತ್ತಿದ್ದೇನೆ. ಇಲ್ಲಿ ಹೋಗಿದ್ದಾರೆ. I am at it. ನಬಾರ್ಡ್‌ನಲ್ಲಿ ಇದಕ್ಕೆ ಹಣ ಕೊಡುವುದಕ್ಕೆ ಹೋಗಿದ್ದರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಏಕೆಂದರೆ, ಅಲ್ಲಿ ಸಿಗಂಧೂರು ಕ್ಷೇತ್ರ ಬೇರೆ ಇದೆ. ಆ launch ಬೇರೆ ಸರಿಯಿಲ್ಲ. ಈ ಬಗ್ಗೆ ಮಾನ್ಯ PWD ಸಚಿವರು

ಇದನ್ನು ಗಂಭೀರವಾಗಿ ತೆಗೆದುಕೊಂಡು ಈ ಸೇತುವೆ ಕಾರ್ಯವನ್ನು ಮಾಡಿಸಬೇಕು.

ಅಧ್ಯಕ್ಷರು:– ಗಂಭೀರವಲ್ಲ. ನಾನೇ ಬಂದು ಇದನ್ನು ಹಾಕ್ರಿ ಎಂದು ಹೇಳುತ್ತೇನೆ. ಅವರಿಗೆ ಗೊತ್ತಿದೆ ರೀ. ಅವರ ಹಳೆಯ ಸ್ನೇಹಿತರು ತುಂಬರಿಯಲ್ಲಿ ಇದ್ದಾರೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಇದು ತುಂಬರಿದು ಅಲ್ಲವೇ? ನಾನು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರು ಹೇಳಿದ್ದಾರೆ.

ಅಧ್ಯಕ್ಷರು:– ಮಾಡುತ್ತೇವೆ ಎಂದು ಹೇಳ್ರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅವರು ಹೇಳಿದ್ದಾರೆ. ನೀವು ಮಾಡುತ್ತೇನೆ ಎಂದು ಹೇಳಬೇಕಲ್ಲವೇ?

ಡಾ॥ ಹೆಚ್.ಸಿ. ಮಹದೇವಪ್ಪ:– ನಮ್ಮ ex-Chief Minister ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. KRDCL ನಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿ ನಾವು ಹಾಕಿಕೊಂಡಿದ್ದೇವೆ. Meanwhile, ಮಾನ್ಯ ಯಡಿಯೂರಪ್ಪನವರು ಕೂಡ ನನಗೆ ಮಾತನಾಡಿದ್ದಾರೆ. ಇಲ್ಲಿ House ನಲ್ಲಿಯೂ ಕೂಡ ಹೇಳಿದ್ದಾರೆ. ಅವರು ಎಂ.ಪಿ. ಆದಮೇಲೆ ಹೊರಗಡೆ ಕೂಡ phone ಮಾಡಿದ್ದರು. ಅಲ್ಲಿ ಕೇಂದ್ರ ಸರ್ಕಾರದಲ್ಲಿ CRF ನಿಂದಲೂ try ಮಾಡಿ ಎಂದು ಅವರಿಗೆ ಹೇಳಿದ್ದೇನೆ. ಅಲ್ಲಿ ಆಗಲಿಲ್ಲವೆಂದರೆ ಇಲ್ಲಿಯೇ one thousand crore rupees ಲೋನ್ ತೆಗೆದುಕೊಂಡು ಮಾಡಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮುಳುಗಡೆಯಾಗಿ ಜೀವನ ಪೂರಾ ಕಷ್ಟಪಡುವ ಹಾಗೆ ಆಗಿದೆ.

ಡಾ॥ ಹೆಚ್.ಸಿ. ಮಹದೇವಪ್ಪ:– ನಾನೇ travel ಮಾಡಿದ್ದೇನೆ. ತುಂಬರಿಯಲ್ಲಿ my friend is their. Launch ನಲ್ಲಿ ಹೋಗಿ ಅಲ್ಲಿಯೇ

ಉಳಿದು I have seen personally. Practice ಆಗಿದೆ. ಅಲ್ಲಿ my boss is also their. I will do it.

ಶ್ರೀ ಬಾದರ್ಲಿ ಹಂಪನಗೌಡ:- ಮಾನ್ಯ ಎಂ.ಬಿ. ಪಾಟೀಲರೆ, ಸ್ವಲ್ಪ ನನ್ನದು ಒಂದೆರಡು ನಿಮಿಷ ಕೇಳಿ. ನಮ್ಮದನ್ನೂ ಸ್ವಲ್ಪ ನೋಡಿ.

ಶ್ರೀ ಮಾನಪ್ಪ ವಜ್ಜಲ:- NRBC modernization ಪ್ರಾರಂಭ ಮಾಡಬೇಕು ಸರ್. ಧನ್ಯವಾದ ಸರ್ ತಮಗೆ.

ಅಧ್ಯಕ್ಷರು:- ಆಯಿತು. 6 ಗಂಟೆ ಆಗುತ್ತಾ ಬಂತು.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ತಲಕಾವೇರಿ ಹತ್ತಿರ ಒಂದು ಯಾತ್ರಿ ಭವನ ನಿರ್ಮಿಸಬೇಕೆಂದು ಇವತ್ತು 5 ಕೋಟಿ ರೂಪಾಯಿಗಳ pending proposal ಇದೆ ಎಂದು ಮಾನ್ಯ ಬೋಪಯ್ಯ ಸಾಹೇಬರು ಕೇಳಿದ್ದಾರೆ. ಅದರ ಬಗ್ಗೆ ಕಾವೇರಿ ನೀರಾವರಿ ನಿಗಮದಿಂದ ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಭಾಗಮಂಡಲ ಸೇತುವೆ ಏನಿದೆ ಅದನ್ನು .. . .

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರು ಎತ್ತಿನಹೊಳೆ ಕಾಮಗಾರಿ ಬಹಳ ನಿಧಾನವಾಗಿ ನಡೆಯುತ್ತಿದೆ speed up ಮಾಡಬೇಕೆಂದು ಕೇಳಿದ್ದಾರೆ. ಆ ದಿಸೆಯಲ್ಲಿ ನಾವು ಈಗಾಗಲೇ ಸರ್ವೆ ಕೂಡ ಮಾಡಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕಾಚೇನಳ್ಳಿ ಮೂರನೇ ಹಂತ ಏನಾಯಿತು? ಅದನ್ನು ಕೇಳಿ ಮಾನ್ಯ ಅಧ್ಯಕ್ಷರೆ.

ಶ್ರೀ ಎಂ.ಬಿ. ಪಾಟೀಲ್:- ಕಾಚೇನಳ್ಳಿ ಮೂರನೇ ಹಂತದ ಬಗ್ಗೆ ಮಾನ್ಯ ಶಿವಲಿಂಗೇಗೌಡರು ಹಾಗೂ ನಾವು ಬಹಳ ಸಲ ಮಾತನಾಡಿದ್ದೇವೆ. ಇವತ್ತು ನೀವು ಅದನ್ನು ಕೇಳಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಾನು ಅದನ್ನು ಇವತ್ತು ಹೇಳಿದೆ. ನೀವು ಕೇಳಿಸಿಕೊಳ್ಳಲಿಲ್ಲ.

ಶ್ರೀ ಎಂ.ಬಿ. ಪಾಟೀಲ್:– ನಾವು ಅದನ್ನು ನೀರಿನ ಲಭ್ಯತೆ ಅನುಸಾರವಾಗಿ ಮಾಡುತ್ತೇವೆ ಎಂದು ಹೇಳುತ್ತೇನೆ. ಆದರೆ, ನೀರಿನ ಲಭ್ಯತೆ ನೀವು ಮಾಡಿಕೊಳ್ಳಬೇಕು, ಉಳಿದ ಕಡೆಗಳಲ್ಲೆಲ್ಲಾ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಎತ್ತಿನಹೊಳೆ ಮೂಲ ಸಕಲೇಶಪುರ ತಾಲ್ಲೂಕು. ಸಕಲೇಶಪುರ ತಾಲ್ಲೂಕಿನಿಂದ ಹಾದುಬರುವ ದಾರಿಯಲ್ಲಿ ಬರತಕ್ಕಂತಹ ಎಲ್ಲಾ ಕೆರೆಗಳಿಗೂ ನೀರನ್ನು ತುಂಬಿಸುವಂತಹ ಕೆಲಸ ಮಾಡಬೇಕು.

ಅಧ್ಯಕ್ಷರು:– ಆಯಿತು ಎಂದು ಹೇಳಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, On the way ಅದನ್ನು ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:– ನೀವು ತರುವುದು ಪೈಪ್‌ಲೈನ್‌ನಲ್ಲಿ. ಮಾನ್ಯ ಪಾಟೀಲರೆ, ಅದು ಹೇಗೆ ಪರಿಶೀಲನೆ ಮಾಡುತ್ತೀರಿ?

(ಗೊಂದಲ)

ಶ್ರೀ ಭೀಮಾನಾಯಕ್:– ನಾವು ಮುಳುಗಡೆಯಾಗಿದ್ದೇವೆ. ಸಾವಿರಾರು ಎಕರೆ ಹೊಲ ಹೋಗಿದೆ. ನಾವು ಮನೆ, ಹೊಲ, ಆಸ್ತಿ ಎಲ್ಲವನ್ನೂ ಕಳೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:– ನೀವು ತರುವುದು ಪೈಪ್‌ಲೈನ್‌ನಲ್ಲಿ. ಎಲ್ಲಾ ಕಡೆ ಹೇಗೆ ನೀರು ಕೊಡುತ್ತೀರಿ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಸದಸ್ಯರಾದ ಬಿ.ಆರ್. ಪಾಟೀಲ್‌ರವರು ಇವತ್ತು ಭೀಮಾ ನದಿಯಿಂದ ಅಮರ್ಜಾ ಜಲಾಶಯಕ್ಕೆ ಏತ ನೀರಾವರಿ ಮೂಲಕ ನೀರು ತುಂಬಿಸುವುದಕ್ಕೆ ಹೇಳಿದ್ದಾರೆ. feasibility study ಮಾಡುವುದು ಈಗಾಗಲೇ ನಿಮಗೆ ಗೊತ್ತಿದೆ. ಈಗಾಗಲೇ ಮೀಟಿಂಗ್ ಆಗಿದೆ. ನಾವು ನೀವು ಚರ್ಚೆ ಮಾಡಿದ್ದೇವೆ. ಅಲ್ಲಿ ತಾಂತ್ರಿಕ ಅಂಶಗಳು ಬಹಳಷ್ಟಿವೆ. ಅಲ್ಲಿ ಭೀಮಾನದಿಯ ನೀರಿನ ಲಭ್ಯತೆಯ ಮೇಲೆ ನಿರ್ಣಯ ಕೈಗೊಳ್ಳುತ್ತೇವೆ. ಇವತ್ತು Micro Irrigation ಮೂಲಕ ಲಭ್ಯತೆಯ ಮೇಲೆ ನಿರ್ಣಯ ಕೈಗೊಳ್ಳುತ್ತೇವೆ. ಇವತ್ತು Micro Irrigation ಮೂಲಕ ಆ ಕೆರೆಗಳ ಮೇಲೆ ಪಂಪ್‌ಸೆಟ್ ಹಾಕಿಕೊಂಡು ಇವತ್ತು Micro Irrigation ಅಳವಡಿಸಿದ್ದಾರೆ. ಅದಕ್ಕೋಸ್ಕರ ನೀರು save ಆಗುತ್ತದೆ ಎನ್ನುವ ಮಾತನ್ನೂ ಕೂಡ ಆಡಿದ್ದಾರೆ. ಮುಖ್ಯವಾಗಿ central university . . .

ಶ್ರೀ ಬಿ.ಆರ್. ಪಾಟೀಲ್:– ಸರ್ central university ಯಲ್ಲಿ ನೀರು ತರುವಂತಹದ್ದು plan ಹಾಕಿದ್ದೀರಿ. Central University ಬಹಳ ಪ್ರತಿಷ್ಠಿತವಾದಂತಹ university. ಇಡೀ ಕರ್ನಾಟಕದಲ್ಲಿ ಅದು ಒಂದೇ ಇರುವುದು.

ಶ್ರೀ ಎಂ.ಬಿ. ಪಾಟೀಲ್:– ಆಮೇಲೆ central university ಗೆ ನೀರನ್ನು ಕೊಡಬೇಕು ಎನ್ನುವಂತಹದ್ದು ಇದೆ.

ಅಧ್ಯಕ್ಷರು:– ಅದು ನಿಮ್ಮ ಕೆಲಸವೇ?

ಶ್ರೀ ಎಂ.ಬಿ. ಪಾಟೀಲ್:– central university ಹೇಳುತ್ತಿದ್ದೇನೆ. ಕುಡಿಯುವ ನೀರಿಗೆ ಸರ್.

ಅಧ್ಯಕ್ಷರು:– ಅವರು ದುಡ್ಡು ಕಟ್ಟಿ ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಬಿ.ಆರ್. ಪಾಟೀಲ್:- ಕರ್ನಾಟಕ ಸರ್ಕಾರದವರು ಅವರಿಗೆ ನೀರು ಕೊಡುತ್ತೇವೆ ಎಂದು ಹೇಳಿದ ಮೇಲೆ ಅವರು ನಮ್ಮಲ್ಲಿ ಬಂದಿದ್ದಾರೆ. ಸರ್ಕಾರದವರಿಗೆ ನಾವು ಮಾತು ಕೊಟ್ಟಿದ್ದೇವೆ.

ಶ್ರೀ ಎಂ.ಬಿ. ಪಾಟೀಲ್:- ನಾವು ಕೊಡುವುದಷ್ಟೇ ಅಲ್ಲವೇ? ನೀವು ಒಯ್ಯುವುದು ಅಲ್ಲವೇ? ನೀರು ಕೊಡುವುದು ಅಷ್ಟೇ ನಮ್ಮದು. Allocation ಅಷ್ಟೆ ನಮ್ಮದು. ನೀರು ಅವರು ಒಯ್ಯುತ್ತಾರೆ.

ಶ್ರೀ ಬಿ.ಆರ್. ಪಾಟೀಲ್:- ನಾವು ನೀರನ್ನು University ಯವರಿಗೆ ಒದಗಿಸಬೇಕು ಎಂದು ಮಾತ್ರ ಹೇಳಿದ್ದೇವೆ. ಇಲ್ಲ ನಾವೇ ದುಡ್ಡು ಕೊಡಬೇಕು. ಬೊಮ್ಮಾಯಿಯವರು 17 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು.

ಅಧ್ಯಕ್ಷರು:- ಇನ್ನು ಯಾವುದಾದರೂ ವಿಚಾರ ಹೇಳಿ. ಕುಡಿಯುವ ನೀರಿನ ಬಗ್ಗೆ ಬೇರೆ ಸಂದರ್ಭದಲ್ಲಿ ಮಾತನಾಡೋಣ.

ಶ್ರೀ ಬಸವರಾಜ್ ಬೊಮ್ಮಾಯಿ:- ಈಗ ಅಮರ್ಜಾದಿಂದ ನೀರನ್ನು allocation ಮಾಡಿ 17 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅವರು ಮಾಡುತ್ತಿದ್ದಾರೆ.

ಅಧ್ಯಕ್ಷರು:- ನೀರಾವರಿ ವಿಚಾರ ಮಾತನಾಡಿ. ಕುಡಿಯುವ ನೀರಿನ ಬಗ್ಗೆ ಏಕೆ?

ಶ್ರೀ ಎಂ.ಬಿ. ಪಾಟೀಲ್:- central University ಗೆ ಅವರು ನೀರು ಕೇಳುತ್ತಿದ್ದಾರೆ. ನಾವು ನೀರು ಕೊಡಬಹುದು ಏನೋ ಮಾಡಬಹುದು.

ಅಧ್ಯಕ್ಷರು:- ನೀರಾವರಿ ಬಗ್ಗೆ ಮಾತನಾಡಿ.

ಶ್ರೀ ಕೆ. ಶಿವಮೂರ್ತಿ:- ಕುಡಿಯುವ ನೀರಿನ ಬಗ್ಗೆ ಮಾತನಾಡಬೇಕು. Drinking water is the priority.

ಅಧ್ಯಕ್ಷರು:- ಕುಡಿಯುವ ನೀರಿನ ವಿಚಾರ ಇವರದ್ದಲ್ಲ.

(ಗೊಂದಲ)

ಅಧ್ಯಕ್ಷರು:– ನೀವು ಏನು ಮಾತನಾಡುತ್ತೀರಿ? ಇವರು ನೀರಾವರಿಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಾರೆ. ಕುಡಿಯುವ ನೀರಿನ ಬಗ್ಗೆ ಬೇರೆಯವರು ಮಾತನಾಡುತ್ತಾರೆ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕರ ಎದುರುಗಡೆ ಮಾತು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮಾತು ಕೊಟ್ಟಿದ್ದಾರೆ.

ಅಧ್ಯಕ್ಷರು:– ಹಾಗಾದರೆ ನಾಳೆ ಮಾನ್ಯ ಮುಖ್ಯಮಂತ್ರಿಗಳು ಇರುತ್ತಾರೆ. ಅವರನ್ನು ಕೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಬಿ.ಆರ್. ಪಾಟೀಲ್‌ರವರು ಹಾಗು ಗುತ್ತೇದಾರರ ಜೊತೆಗೆ ಸಭೆ ಮಾಡಿ ಚರ್ಚೆ ಮಾಡಿದ್ದೇನೆ. ಮಾನ್ಯ ಸಚಿವರುಗಳಾದ ಖಮರುಲ್ಲಾ ಇಸ್ಲಾಂ, ಶರಣಪ್ರಕಾಶ್ ಪಾಟೀಲರನ್ನು ಸೇರಿದಂತೆ ಒಂದು ಸಭೆ ಮಾಡಿ ಚರ್ಚೆ ಮಾಡಿದ್ದೇವೆ. ಅಲ್ಲಿ ಸ್ವಲ್ಪ ನೀರಿನ ಲಭ್ಯತೆ ಕಡಿಮೆ ಇದೆ. ಹೀಗಾಗಿ ಸ್ವಲ್ಪ ಅಲ್ಲಿ clashes ಬರುತ್ತಿದೆ.

ಅಧ್ಯಕ್ಷರು:– ನೀವು ನೀರಾವರಿ ಬಗ್ಗೆ ಮಾತನಾಡಿ. ಕುಡಿಯುವ ನೀರಿಗೂ ಮತ್ತು ನಿಮಗೆ ಏನೂ ಸಂಬಂಧ?

ಶ್ರೀ ಎಂ.ಬಿ. ಪಾಟೀಲ್:– ನೀರು ಕೊಡುವುದಷ್ಟೇ ಅದನ್ನು ಅವರ ಮುಂದೆ...

(ಗೊಂದಲ)

ಅಧ್ಯಕ್ಷರು:– ಕುಡಿಯುವುದಕ್ಕೆ ನೀರು ಕೊಡಲೇ ಬೇಕು.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಕುಡಿಯುವ ನೀರಿಗೆ ನಮ್ಮ 22 ಕೆರೆಗೆ ಸಂಬಂಧಿಸಿದಂತೆ ಏತ ನೀರಾವರಿ ಯೋಜನೆ . . .

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಒಬ್ಬೊಬ್ಬರದ್ದೇ ಹೇಳುತ್ತಿದ್ದೇನೆ ಇರಿ.

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:– ಮಾನ್ಯ ಸಚಿವರೇ, ಹಾಗೆಯೇ ಕುಡಿಯುವ ನೀರಿನ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ತರೀಕೆರೆಯ ಮಾನ್ಯ ಶಾಸಕರು . . . .

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇ, ಒಂದು ನಿಮಿಷ...

ಅಧ್ಯಕ್ಷರು:– ರಾಜಣ್ಣ ನವರು ಏನೋ ಹೇಳುತ್ತಿದ್ದಾರೆ.

ಶ್ರೀ ಕೆ.ಎನ್. ರಾಜಣ್ಣ:– ಮಾನ್ಯ ಸಚಿವರೆ, ಒಂದೇ ಒಂದು ವಿಷಯ ಹೆಚ್ಚಾಗಿ ಹೇಳುವುದಿಲ್ಲ. ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಯೋಜನೆಯಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು . . .

ಅಧ್ಯಕ್ಷರು:– ರಾಜಣ್ಣ ನವರೇ ಒಂದು ನಿಮಿಷ ಕೇಳಿ. ಇಲ್ಲಿ. ಕುಡಿಯುವ ನೀರಿನ ವಿಚಾರದಲ್ಲಿ, ಬಹು ಗ್ರಾಮಕ್ಕೆ ನೀರು ಕೊಡುವ ವಿಷಯದಲ್ಲಿ ಸರ್ಕಾರದಲ್ಲಿ ಒಂದು ಪಾಲಿಸಿಯನ್ನು ಮಾಡಿದ್ದಾರೆ. ಎಲ್ಲೆಲ್ಲಿ ಆ ಯೋಜನೆಗೆ ಅವಕಾಶವಿದೆ, ಅದಕ್ಕೆ ಸಂಬಂಧಪಟ್ಟವರು ಅಂದಾಜು, ವಗೈರೆಗಳನ್ನು ಮಾಡಿ ಕಳುಹಿಸಿದರೆ, ತಾನೇ ತಾನಾಗಿ ಕುಡಿಯುವ ನೀರಿನ ಇಲಾಖೆಗೆ ಮಂಜೂರು ಮಾಡಿ ಕಳುಹಿಸುತ್ತಾರೆ. ಕೇಂದ್ರ ಸರ್ಕಾರ ಕೊಡುವ ಹಣವನ್ನು ಕೊಡದೇ ಏನು ಮಾಡುತ್ತಾರೆ. ಅದು ಇವರಿಗೆ ಬರುವುದಿಲ್ಲ.

ಶ್ರೀ ಕೆ.ಎನ್. ರಾಜಣ್ಣ:- ಎತ್ತಿನ ಹೊಳೆ ಯೋಜನೆ ವಿಶೇಷವಾಗಿ ಕುಡಿಯುವ ನೀರಿಗೆ ಕೆರೆಗಳನ್ನು ತುಂಬಿಸುವಂತಹ ಯೋಜನೆಯಾಗಿದೆ. ಇದು ಬರಗಾಲ ಪೀಡಿತ ಜಿಲ್ಲೆಗಳಲ್ಲಿ ಬರುವಂತಹದು. ಎತ್ತಿನ ಹೊಳೆ ಯೋಜನೆ ಕಾಮಗಾರಿಗೆ ಈಗಾಗಲೇ ಆಯವ್ಯಯದಲ್ಲಿ ಸುಮಾರು 12,000 ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳಿರುತ್ತಾರೆ. ಆದರೆ ಅದರಲ್ಲಿ ಇನ್ನೂ ಏನೂ ಪ್ರಗತಿಯಾಗಿರುವುದಿಲ್ಲ. ಅದರ ಬಗ್ಗೆ review ಮಾಡಿ ಎತ್ತಿನ ಹೊಳೆ ಯೋಜನೆ ಬಗ್ಗೆ ಸದನಕ್ಕೆ ಬೆಳಕನ್ನು ಚೆಲ್ಲಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್:- ಎತ್ತಿನ ಹೊಳೆ ಯೋಜನೆ ಬಗ್ಗೆ ನಾನು ಈಗಾಗಲೇ ಎರಡು ಸಾರಿ ಪ್ರಸ್ತಾಪ ಮಡಿದ್ದೇನೆ. ಈಗಾಗಲೇ survey complete ಆಗಿದೆ, ಇಬ್ಬರು mobilization ಮಾಡಿಕೊಂಡಿದ್ದಾರೆ. ಮಳೆಗಾಲವಿರುವುದರಿಂದ, ಮೀಟಿಂಗ್ ಆದ ಮೇಲೆ ಕೆಲಸ ಪ್ರಾರಂಭ ಮಾಡುತ್ತಾರೆ.

ಅಧ್ಯಕ್ಷರು:- ಅಡಿಗಲ್ಲು ಹಾಕಿದ್ದೀರಾ?

(ಗೊಂದಲ)

ಶ್ರೀ ಎಂ.ಎಸ್. ನಾರಾಯಣ ಸ್ವಾಮಿ:- ಸ್ಪಷ್ಟವಾಗಿ ಹೇಳುವುದಾದರೆ ಇವರು ಅಡಿಗಲ್ಲನ್ನು ಎಲ್ಲಿ ಹಾಕಿದ್ದಾರೆ?

(ಗೊಂದಲ)

ಅಧ್ಯಕ್ಷರು:- ಈ ರೀತಿ ಆದರೆ ಲೇಟ್ ಆಗುತ್ತದೆ,

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಸಕಲೇಶಪುರ ಹಾಗೂ ಚಿಕ್ಕಬಳ್ಳಾಪುರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಅಡಿಗಲ್ಲು ಹಾಕಿರುವುದು ರಾಜಕೀಯ ತೀರ್ಮಾನ.

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:– Progress ಆಗುತ್ತಿಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ತರೀಕೆರೆ ಶಾಸಕರು . . .

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ಎತ್ತಿನ ಹೊಳೆ 12,000 ಕೋಟಿ ರೂ.ಗಳ ಪ್ರಾಜೆಕ್ಟ್ ಆಗಿರುವುದರಿಂದ ಅದಕ್ಕೊಂದು ನಿಗಮವನ್ನು ಸ್ಥಾಪನೆ ಮಾಡಿ. ಕುಡಿಯುವ ನೀರಿಗಾಗಿ ಜನರು ಸಾವು ಮತ್ತು ಬದುಕಿನ ಹೋರಾಟ ಮಾಡುತ್ತಿದ್ದಾರೆ. ದಯವಿಟ್ಟು ಅದಕ್ಕೆ priority ಕೊಡಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಎತ್ತಿನ ಹೊಳೆ ಯೋಜನೆ ಬಗ್ಗೆ ಈಗಾಗಲೇ ನಾವು user department ಮೀಟಿಂಗ್ ಮಾಡಲಾಗಿದೆ. Urban Development, Rural Development, Minor Irrigation, RDPR ಮತ್ತು ನಾವು ಎಲ್ಲರೂ ಸೇರಿ ಒಂದು ಮೀಟಿಂಗ್ ಮಾಡಿ, RDPR ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ವಿಜಯಭಾಸ್ಕರ್ ಅವರ ನೇತೃತ್ವದಲ್ಲಿ High Level Committee ಮಾಡಿ ಸಹ ರಚನೆ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೂ ಸಹ approach ಮಾಡಿದ್ದೇವೆ. ಕೇಂದ್ರಸರ್ಕಾರದ ಜೈಕಾದವರು ಸಹ . . . .

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಆರ್.ಡಿ.ಪಿ.ಆರ್. ದುಡ್ಡನ್ನು ತೆಗೆದುಕೊಂಡು ನಮಗೆ ಕುಡಿಯುವ ನೀರನ್ನು ನಮಗೆ ಕೊಟ್ಟ ಹಾಗೆಯೇ?

ಶ್ರೀ ಎಂ.ಬಿ. ಪಾಟೀಲ್:– ಸ್ವಲ್ಪ ಇಲ್ಲಿ ಕೇಳಿ.

ಅಧ್ಯಕ್ಷರು:– ಅವರು ಬಹಳ ಹೇಳುತ್ತಿದ್ದಾರೆ ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- Conveyance Partಗೂ ಏನು ಮಾಡಬೇಕೆಂದು ಮಾಡುತ್ತಿದ್ದೇವೆ. ಈಗ ತರೀಕೆರೆ ಶಾಸಕರು ಭದ್ರಾ ಮಂಡಳಿ ಯೋಜನೆಯಿಂದ

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಎತ್ತಿನ ಹೊಳೆ ಯೋಜನೆ ಬಗ್ಗೆ ಸದನಕ್ಕೆ ನೀವು ವಿವರವಾದ ಮಾಹಿತಿಯನ್ನು ಕೊಡಬೇಕು.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ತಾವು ಈಗ ಬಂದಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:- ಒಂದು ನಿಮಿಷ ನನ್ನ ಪ್ರಶ್ನೆ ಏನೆಂದರೆ . . .. .

ಅಧ್ಯಕ್ಷರು:- ನೋಡಿ ಸ್ವಾಮಿ, ನನಗೆ ಉತ್ತರವನ್ನು ಬೇಗ ಪೂರೈಸಬೇಕು.

ಶ್ರೀ ಎಂ.ಬಿ. ಪಾಟೀಲ್:- ಪೂರೈಸುತ್ತೇನೆ ಅಧ್ಯಕ್ಷರೆ.

ಶ್ರೀ ಬಸವರಾಜ ಬೊಮ್ಮಾಯಿ:- ಎತ್ತಿನ ಹೊಳೆ ಯೋಜನೆಯಲ್ಲಿ ಮೂಲಭೂತವಾಗಿ ಕೆಲವು ಬದಲಾವಣೆಗಳನ್ನು ಮಾಡಿದ್ದೀರಿ. ಆ ಬದಲಾವಣೆಗಳೇನು, ಅದರಿಂದ storage ಎಷ್ಟು . .. .

ಶ್ರೀ ಎಂ.ಬಿ. ಪಾಟೀಲ್:- ಇಲ್ಲಿಯವರೆಗೆ ನಾವು ಬದಲಾವಣೆಗಳನ್ನು ಮಾಡಿರುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಒಂದು ನಿಮಿಷ ಇಲ್ಲಿ ಕೇಳಿ. Conveyanceನಲ್ಲಿ ಮೂಲ ಬದಲಾವಣೆಗಳನ್ನು ಏನು ಮಾಡಿದ್ದೀರಿ? Aqueduct ಎಲ್ಲಾ ಮಾಡಿ ಮಾಡಬೇಕೆಂದು DPR ತಯಾರು ಮಾಡಿದ್ದೀರಿ, DPR ತಯಾರಾಗಿದೆ ಎಂದು ಸದನಕ್ಕೆ ತಿಳಿಸಿ. ಆ DPR ಪ್ರಕಾರ ಎಷ್ಟು ಸ್ಟೋರೇಜ್ ಮಾಡಬಹುದು, ಎಷ್ಟು ಕೆರೆಗಳಿಗೆ ನೀರನ್ನು ತುಂಬಿಸುತ್ತೀರಿ, ಎಷ್ಟು

ಹಳ್ಳಗಳಿಗೆ ಪೈಪ್ ಮುಖಾಂತರ ನೀರನ್ನು ಕೊಡುತ್ತೀರಿ. ಕೇವಲ ನಾಲ್ಕು ತಿಂಗಳಲ್ಲಿ ಕುಡಿಯುವ ನೀರಿನ ಯೋಜನೆ ಮಾಡುವುದಕ್ಕೆ ಸಾಧ್ಯವೇ?

ಅಧ್ಯಕ್ಷರು:– ಪ್ರಶ್ನೆ ಕೇಳಿ. ಉತ್ತರವನ್ನು ನೀವೇಕೆ ಹೇಳುತ್ತೀರಿ.

ಶ್ರೀ ಬಸವರಾಜ ಬೊಮ್ಮಾಯಿ:– ಎಲ್ಲಾ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವನ್ನು ಕೊಡಿ ಎಂದು ಹೇಳುತ್ತಿದ್ದೇನೆ. ಡಿ.ಪಿ.ಆರ್. ಒಪ್ಪಿಕೊಳ್ಳುತ್ತೀರಾ?

ಶ್ರೀ ಎಂ.ಬಿ. ಪಾಟೀಲ್:– Lift component ಅಂತೂ 5 ಪ್ಯಾಕೇಜ್‌ನಲ್ಲಿ tender out ಆಗಿ ಸರ್ವೆ complete ಆಗಿದೆ. mobilization start ಮಾಡಿದ್ದಾರೆ. ಒಂದು ಮೀಟಿಂಗ್ ದಕ್ಷಿಣ ಕನ್ನಡ ಮತ್ತು conveyance part ಗೆ DPR ಸಂಪೂರ್ಣ ready ಆಗಿದೆ. ಆದರೆ user department involve ಮಾಡಿಕೊಳ್ಳುತ್ತಿದೆ. Conveyance Department ನಲ್ಲೂ DPR ಏನು ಆಗಿದೆ ...

ಶ್ರೀ ಕೆ.ಎನ್. ರಾಜಣ್ಣ:– ಸ್ಟೋರೇಜ್ ಮಾಡುವುದಕ್ಕೆ ಏನು ಮಾಡಿದ್ದೀರಿ?

ಶ್ರೀ ಎಂ.ಬಿ. ಪಾಟೀಲ್:– ಡಿ.ಪಿ.ಆರ್. ಆಗಿದೆ. ಪದೇ ಪದೇ ಅದನ್ನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– 145 ಕೋಟಿ ರೂ.ಗಳ ಕುಡಿಯುವ ನೀರಿನ ಯೋಜನೆ ಏತ ನೀರಾವರಿ ಯೋಜನೆ ಪೂರ್ಣಗೊಳಿಸಿಲ್ಲ.

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:– ಶಿವಮೂರ್ತಿ ಅವರೇ, ಎತ್ತಿನ ಹೊಳೆ ಬಗ್ಗೆ ಮೊದಲು ಹೇಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮೊದಲು ಅವರು ಉತ್ತರ ಹೇಳಲಿ. ಆಮೇಲೆ ಕೇಳಿ ಕೊಳ್ಳಿ

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಎಲ್ಲರೂ ಮಧ್ಯೆ ಮಧ್ಯೆ interfere ಆಗುತ್ತಿದ್ದಾರೆ. ಅವರು ಉತ್ತರ ಹೇಳುವುದಕ್ಕೆ ನಿಧಾನವಾಗುತ್ತದೆ.

(ಗೊಂದಲ)

ಶ್ರೀ ಜಿ.ಹೆಚ್. ಶ್ರೀನಿವಾಸ್:– ಈ ರೀತಿ ಮಾಡಿದರೆ ತರೀಕೆರೆ ಕ್ಷೇತ್ರದ ಬಗ್ಗೆ ಹೇಳುವುದಕ್ಕೆ ನಿಧಾನವಾಗುತ್ತದೆ.

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:– ಪಾಟೀಲರೆ ವಿಷಯಾಂತರ ಮಾಡಬೇಡಿ, ಎತ್ತಿನ ಹೊಳೆ ಬಗ್ಗೆ ಸ್ಪಷ್ಟವಾಗಿ ಮೊದಲು ಹೇಳಬೇಕು. ಈಗ lift component DPR ಆಗಿದೆ, ಅಲ್ಲಿ Aqueduct ಕಟ್ಟುವುದು, Reservoir ಕಟ್ಟುವ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ನಮಗೆ ಕ್ಲಿಯರ್ ಆಗಿ ಹೇಳುವ ಬದಲು, ನಿಮ್ಮ ಆಡಳಿತದ ಪಕ್ಷದ ಸದಸ್ಯರಿಗೆ ಹೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಇನ್ನು ಉತ್ತರ ಕೊಟ್ಟು ನಾನು ಮುಗಿಸುತ್ತೇನೆ. ಮಾನ್ಯ ತರೀಕೆರೆ ಶಾಸಕರು, ತರೀಕೆರೆ ತಾಲ್ಲೂಕಿಗೆ . . . .

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:– ಮಾನ್ಯ ಸಚಿವರೆ, ಮೊದಲು ಎತ್ತಿನ ಹೊಳೆ ಬಗ್ಗೆ ಪೂರ್ತಿ ಹೇಳಿ. ಮಧ್ಯೆ ಮಧ್ಯೆ ಯಾವುದನ್ನೋ ಹೇಳಿ ವಿಷಯಾಂತರ ಮಾಡಬೇಡಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಒಂದು ನಿಮಿಷ ಹೇಳುತ್ತೇನೆ. . . ..

ಅಧ್ಯಕ್ಷರು:- ಸಂಕ್ಷಿಪ್ತವಾಗಿ ಹೇಳಿ ಮಹಾರಾಯರೆ . . .. .

ಶ್ರೀ ಜಿ.ಹೆಚ್. ಶ್ರೀನಿವಾಸ್:- ತರೀಕೆರೆ ಎಂದು 10 ಸಾರಿ ಹೇಳುತ್ತೀರಿ, ಅಲ್ಲಿಗೆ stop ಮಾಡುತ್ತೀರಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಎತ್ತು ಇಲ್ಲ. ಎತ್ತಿನ ಹೊಳೆಯೂ ಇಲ್ಲ. ಎಲ್ಲವನ್ನೂ ಕೈ ಬಿಟ್ಟಿದ್ದೀರಾ?

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಿಮಗೆ ಗೊತ್ತಿರುವಂತೆ ಸಮಗ್ರವಾಗಿ DPR ಆಗಿದೆ, Lift component ಆಗಿದೆ, Conveyance Part ಕೂಡ ಸಮಗ್ರ DPR ಆಗಿದೆ. ನಾನು ಪೂರ್ತಿ ವಿವರ ಕೊಡುತ್ತೇನೆ. ಕಥೆ ಹೇಳುವುದಿಲ್ಲ.

(ಗೊಂದಲ)

ಶ್ರೀ ಎಸ್.ಎನ್. ನಾರಾಯಣಸ್ವಾಮಿ:- ಯಾವಾಗ ಮುಗಿಸುತ್ತೀರಿ ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:- Aqueduct ಬಗ್ಗೆ ಹೇಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಇರೀ ಅಣ್ಣಾ, ನಮ್ಮ ಕಷ್ಟ ನಮಗೆ ಗೊತ್ತು.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಎರಡು ವರ್ಷದಲ್ಲಿ ನಾವು component ಮುಗಿಸುತ್ತೇವೆ. Conveyance Partನಲ್ಲಿ DPR ಸಂಪೂರ್ಣ ತಯಾರಾಗಿದೆ. DPR ನಲ್ಲಿ ಏನಾದರೂ ಮಾಡಿಫಿಕೇಷನ್ ಮಾಡಿ ಅಭಿಪ್ರಾಯಗಳನ್ನು ಕೇಳುವುದಕ್ಕೆ, ನಾವು user department, ಅಂದರೆ Urban Development, ಮಾನ್ಯ ಸಚಿವರಾದ ವಿನಯ್ ಕುಮಾರ್ ಸೊರಕೆಯವರು, RDPR Principal Secretary, Minor irrigation ಅವರೆಲ್ಲರನ್ನು involve ಮಾಡಿಕೊಂಡು ಆ Conveyance Partನಲ್ಲಿ ಅವರಿಗೆ ಬೇಕಾದ ರೀತಿಯಲ್ಲಿ ಏನಾದರೂ ಬದಲಾವಣೆಗಳು ಬೇಕಾದರೆ ಅದರ ಬಗ್ಗೆ ಮಾಹಿತಿಯನ್ನು ತೆಗೆದುಕೊಳ್ಳುತ್ತಿದ್ದೇವೆ. ಆ ಪ್ರಕಾರ ಅವರು High Level Committee ಅನ್ನು ಸಜೆಸ್ಟ್ ಮಾಡಿದರು. ಆ ನಂತರ ವಿಜಯ್ ಭಾಸ್ಕರ್ ಅವರ ನೇತೃತ್ವದಲ್ಲಿ ಒಂದು High Level ಕಮಿಟಿಯನ್ನು ರಚನೆ ಮಾಡಿ, assistance ಸಲುವಾಗಿ ಕೇಂದ್ರ ಸರ್ಕಾರಕ್ಕೂ ಅಪ್ರೋಚ್ ಮಾಡಿದ್ದೇವೆ. ಅವರು ಅದನ್ನು ಜೈಕಾಗೆ ರೆಫರ್ ಮಾಡಿ ಅವರೂ ಸಹ ಇಲ್ಲಿಗೆ ವಿಸಿಟ್ ಮಾಡಿದ್ದಾರೆ. Project details ಬಗ್ಗೆ ಮಾಹಿತಿ ನೀಡುತ್ತಿದ್ದೇನೆ. ಯಾವ್ಯಾವ ಕೆರೆಗಳು ತುಂಬುತ್ತದೆ ಎನ್ನುವ ಮಾಹಿತಿಯನ್ನು ಸಹ ನೀಡುತ್ತೇನೆ.

(ಗೊಂದಲ)

ಶ್ರೀ ಕೆ.ಎನ್. ರಾಜಣ್ಣ:- ಅದೆಲ್ಲವೂ ಇದೆ. ಕೆರೆಗಳನ್ನು ತುಂಬಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಿ. ಯಾವ್ಯಾವ ಕೆರೆಗಳು ತುಂಬುತ್ತದೆ ಎನ್ನುವ ಮಾಹಿತಿ ಇದೆ ಎಷ್ಟು ವರ್ಷಕ್ಕೆ ಮಾಡುತ್ತೀರಿ ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅದಕ್ಕೆ ಸಂಬಂಧಪಟ್ಟ MLA ಗಳನ್ನು ಕರೆದು ಮೀಟಿಂಗ್ ಮಾಡಿ.

(ಗೊಂದಲ)

ಶ್ರೀ ಪಿ. ಸುಧಾಕರ್ ಲಾಲ್:- ಎತ್ತಿನ ಹೊಳೆಯಿಂದ ಜನರು ನೀರು ತೆಗೆದುಕೊಳ್ಳುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ?

(ಗೊಂದಲ)

ಅಧ್ಯಕ್ಷರು:- ಬೇಗ ಪೂರೈಸುತ್ತಿರೋ ಅಥವಾ ಇಲ್ಲವೇ?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಣ್ಣ ನೀರಾವರಿ ಇಲಾಖೆಯ ಸಚಿವರು ಉತ್ತರವನ್ನು ಕೊಡಬೇಕು.

(ಗೊಂದಲ)

ಶ್ರೀ ಶಿವರಾಜ್ ತಂಗಡಗಿ (ಸಣ್ಣ ನೀರಾವರಿ ಸಚಿವರು):- ಎತ್ತಿನ ಹೊಳೆ . . .. .

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ತರೀಕೆರೆ ತಾಲ್ಲೂಕಿಗೆ 22,180 ಹೆಕ್ಟೇರ್‌ಗೆ ಮತ್ತು 81 ಕೆರೆಗಳಿಗೆ ನೀರಾವರಿ ಸೌಕರ್ಯವನ್ನು ಕಲ್ಪಿಸಲಾಗಿದೆ. ವಿಶೇಷವಾಗಿ ಟೆನಲ್‌ನಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಸುಮಾರು ಐದು ವರ್ಷಗಳ ಕಾಲದಿಂದ ನೆನೆಗುದಿಗೆ ಬಿದ್ದಿತ್ತು.

ಅಧ್ಯಕ್ಷರು:- Detail ಬೇಡ.

ಶ್ರೀ ಜಿ.ಹೆಚ್. ಶ್ರೀನಿವಾಸ್:- ಮಾನ್ಯ ಅಧ್ಯಕ್ಷರೆ, ಹೇಳಲಿ ಬಿಡಿ.

ಶ್ರೀ ಎಂ.ಬಿ. ಪಾಟೀಲ್:- ತರೀಕೆರೆ ಶ್ರೀನಿವಾಸ್‌ರವರು ಓಬೀರಾಯನ ಹಳ್ಳದ ಬಗ್ಗೆ ಒಂದು ಮಾಹಿತಿಯನ್ನು ಕೇಳಿದ್ದರು. ಅದು ಈಗಾಗಲೇ 34 ಕೋಟಿ ರೂ.ಗಳಿಗೆ ಮಂಜೂರಾತಿ ಕೊಟ್ಟು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

ಅಧ್ಯಕ್ಷರು:- ಸರಿ ಬಿಡಿ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಕೃಷ್ಣಪ್ಪ ಅವರು ಮಾಹಿತಿ ಕೇಳಿದ್ದು, ಅದೂ ಸಹ ಟೆಂಡರ್ ಪ್ರಕ್ರಿಯೆಲ್ಲಿದೆ.

ಶ್ರೀ ತಿಪ್ಪೇಸ್ವಾಮಿ:- ಅದು ಈಗ ನೆನೆಗುದಿಗೆ ಬಿದ್ದಿರುವುದು.

ಶ್ರೀ ಬಸವರಾಜ್ ಬೊಮ್ಮಾಯಿ:- ಈಗ ಅದರ ಬಗ್ಗೆ ಮಾತನಾಡುವುದು ಬೇಡ, ಇನ್ನೊಂದು ಸಾರಿ ಮಾತನಾಡೋಣ. ಮೊದಲು ಮುಗಿಸಿ.

ಶ್ರೀ ಎಂ.ಬಿ. ಪಾಟೀಲ್:- ನಾವು ಮತ್ತು ಜಯಪ್ರಕಾಶ್ ಹೆಗಡೆ ಯವರು ಆಗ ಎಂ.ಪಿ.ಯಾಗಿದ್ದರು. ಶ್ರೀನಿವಾಸ್ ಮತ್ತು ಎಲ್ಲರೂ ಕೂಡಿ ಬಗೆಹರಿಸಿ, ಅಜ್ಜಂಪುರದ ಕೆಲಸ ಪ್ರಾರಂಭ ಮಾಡಿಸಿದೆವು.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಸಚಿವರೆ, ಅಜ್ಜಂಪುರದ ಹತ್ತಿರ ರೈತರು ಸ್ಟ್ರೈಕ್ ಮಾಡಿದಂತಹ ಸಂದರ್ಭದಲ್ಲಿ ದೇಸಾಯಿ ಅವರ ಸಮಿತಿ ಮಾಡಿ, ತರೀಕೆರೆ ನೀರಾವರಿ ಇರಲಿಲ್ಲ. ಅದಕ್ಕೆ ನೀರಾವರಿಯನ್ನು ಮಾಡಿ, ಕೆರೆಗಳಿಗೆ ನೀರನ್ನು ತುಂಬಿಸುವಂತಹ ಯೋಜನೆ ನಾವು ಮಾಡಿ. ಅಷ್ಟೇಅಲ್ಲದೆ ರೈತರಿಗೆ ವಿಶೇಷ compensation ನೀಡಿ, ನಂತರ ನಮ್ಮ ಕಾಲದಲ್ಲಿ election ಸಂದರ್ಭದಲ್ಲಿ ಕೆಲಸವನ್ನು ಪ್ರಾರಂಭ ಮಾಡಿದೆವು. ನೀವು ಬಂದ ಮೇಲೆ ಕೆಲಸ ನಿಂತು ಹೋಗಿತ್ತು.

ಶ್ರೀ ಎಂ.ಬಿ. ಪಾಟೀಲ್:- ಅಲ್ಲಿ ಕೆಲಸವನ್ನು ಸ್ಥಗಿತಗೊಂಡಿತ್ತು.

ಶ್ರೀ ಬಸವರಾಜ ಬೊಮ್ಮಾಯಿ:- ಅಲ್ಲಿ ಏಕೆ ಕೆಲಸ ಸ್ಥಗಿತಗೊಂಡಿತ್ತೆಂದರೆ, ನಿಮ್ಮವರೇ ಯಾರೋ ನಿಲ್ಲಿಸಿದ್ದರು.

ಶ್ರೀ ಎಂ.ಬಿ. ಪಾಟೀಲ್:- ನಿಮ್ಮವರು, ನಮ್ಮವರು ಎಂದಿಲ್ಲ, ರೈತರು ತಡೆಮಾಡಿದ್ದರು. ಮಾನ್ಯ ಬೊಮ್ಮಾಯಿಯವರೆ, ಅದಕ್ಕೆ parallel ಆಗಿ scheme ಮಾಡಿ ಅವರಿಗೆ assure ಮಾಡಿ, ನಾವು, ಮಾನ್ಯ ಜಯಪ್ರಕಾಶ್ ಹೆಗಡೆಯವರು, ಮಾನ್ಯ ಶ್ರೀನಿವಾಸರವರು ಕೂಡಿ ಮಾಡಿದ್ದೇವೆ. ನೀವು ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ:– ಅದನ್ನೆಲ್ಲಾ ನಾವು ರೆಡಿ ಮಾಡಿಕೊಟ್ಟಿದ್ದೇವೆ. ಅದನ್ನು ನೀವು ಹೇಳಿರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಎಂ.ಬಿ. ಪಾಟೀಲ್:– ನೀವು ಮಾಡಿದ್ದೀರಿ. ನಾನು ಇಲ್ಲವೆಂದು ಹೇಳುತ್ತಿಲ್ಲ.

ಶ್ರೀ ಜಿ.ಹೆಚ್. ಶ್ರೀನಿವಾಸ:– ಕೇವಲ ಎರಡು ಕೆರೆಗೆ ನೀರು ಕೊಡುವುದು ಇತ್ತು. 80 ಕೆರೆಗೆ ನೀರು ಕೊಡುವುದು ಟನಲ್ ಮೇಲೆ 700–800 ಕೋಟಿ ಕೊಟ್ಟಿದ್ದಾರೆ. ನೀವು ಮಾಡಿದ್ದೀರಿ ಇಲ್ಲವೆಂದು ಹೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಶ್ರೀನಿವಾಸ್ ರವರೆ, ಕುಳಿತುಕೊಳ್ಳಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಎಂ.ಟಿ. ಕೃಷ್ಣಪ್ಪನವರು, ಅವರು ಇಲ್ಲಿ ಇಲ್ಲ. ಎತ್ತಿನ ಹೊಳೆಗೆ ತಮಿಳುನಾಡು, ಕೇರಳದಲ್ಲಿ ಬೇರೆ ರೀತಿಯಲ್ಲಿ ಮಾಡಿದ್ದಾರೆಂದು ಹೇಳಿದ್ದಾರೆ. ಅದರ ಮಾಹಿತಿಯನ್ನು ತರಿಸಿಕೊಂಡು ಏನು ಅಳವಡಿಸಿಕೊಳ್ಳಬೇಕಾಗಿತ್ತು ಅದರ ಬಗ್ಗೆ ತಾಂತ್ರಿಕ ಸಾಧ್ಯತೆ ಮತ್ತು legal team ಎಲ್ಲಾ ನೋಡಿಕೊಂಡು ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಅವರು tunneling and paneling ಬಗ್ಗೆ ಕೇಳಿದರು. ಈಗಾಗಲೇ ಅಲ್ಲಿ ಒಂದು ಕಮಿಟಿ ಇದೆ. ಶ್ರೀನಿವಾಸ್ ಮೂರ್ತಿಯವರು ಒಂದು ಪ್ರಪೋಸಲ್ ಕೊಟ್ಟಿದ್ದಾರೆ.

ಅಧ್ಯಕ್ಷರು:– ಬೇಗನೆ conclude ಮಾಡಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ರುದ್ರಪ್ಪ ಮಾನಪ್ಪ ಲಮಾಣಿಯವರು ತುಂಗಭದ್ರಾ ನದಿಗೆ ಚೆಕ್‌ಡ್ಯಾಮ್ ನಿರ್ಮಿಸಬೇಕೆಂದು ಕೇಳಿದ್ದಾರೆ. ನಾವು ಅದರ ಬಗ್ಗೆ ಕಾರ್ಯ ಸಾಧ್ಯತೆ ಮತ್ತು ತಾಂತ್ರಿಕ ಸಾಧ್ಯತೆ ಮತ್ತು ನೀರಿನ ಸಾಧ್ಯತೆಯನ್ನು ನೋಡಿಕೊಂಡು ಕ್ರಮ ಕೈಗೊಳ್ಳುತ್ತೇವೆ. ಮಾನ್ಯ

ಸವದತ್ತಿ ಶಾಸಕರಾದ ಮಾನ್ಯ ಮಾಮನಿಯವರು ಕುಡಿಯುವ ನೀರಿಗೆ ಬಾಂದಾರ ನಿರ್ಮಾಣ ಮಾಡಬೇಕೆಂದು . . .

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ (ಸವದತ್ತಿ ಯಲ್ಲಮ್ಮ):– ಬಾಂದಾರ ನಿರ್ಮಾಣ ಅರ್ಧ ಮಟ್ಟಕ್ಕೆ ನಿಂತಿದೆ. ಅದನ್ನು ಪೂರ್ತಿಗೊಳಿಸಬೇಕು. ಎರಡನೆಯದು, ನಮ್ಮ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯಡಿಯಲ್ಲಿ ನನ್ನ ಮತಕ್ಷೇತ್ರದಲ್ಲಿ ಬರತಕ್ಕಂಥ ಆರು ಹಳ್ಳಿಗಳನ್ನು ಬಿಟ್ಟು ಯೋಜನೆ ಕೈಗೊಳ್ಳುತ್ತಿರುವುದು...

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಮಾಮನಿಯವರೆ, ನಾನು ಈಗ ಇದಕ್ಕೆ ಉತ್ತರ ಕೊಡಬೇಕೋ, ಬೇಡವೋ?

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ:– ಆಯಿತು, ಉತ್ತರ ಹೇಳಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ರಾಮದುರ್ಗ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ನೀರಾವರಿ ವಂಚಿತ ಪ್ರದೇಶಕ್ಕೆ ಕೆರೆ ತುಂಬಿಸಲಿಕ್ಕೆ ಬೇಡಿಕೆ ಇದೆ. ವೀರಭದ್ರೇಶ್ವರ ಏತ ನೀರಾವರಿ ಏನಿದೆ, ಆ ಯೋಜನೆಗೆ ಸುಮಾರು 2.50 ಟಿ.ಎಂ.ಸಿ ನೀರು ಹಂಚಿಕೆಯಾಗಿದೆ. ಸದರಿ ಯೋಜನೆ ವಿವರವಾದಂಥ ಯೋಜನಾ ವರದಿಯನ್ನು ತಯಾರಿಸುತ್ತಿದ್ದೇವೆ. ನೀರಿನ ಲಭ್ಯತೆ ಮತ್ತು ತಾಂತ್ರಿಕ ಅವಶ್ಯಕತೆಯನ್ನು ನೋಡಿಕೊಂಡು ಕ್ರಮವನ್ನು ಕೈಗೊಳ್ಳುತ್ತೇವೆ. ಹಗರಿ ಬೊಮ್ಮನಹಳ್ಳಿ ಶಾಸಕರು ಇವತ್ತು.

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ:– ಮಾನ್ಯ ಸಚಿವರೆ, ವೀರಭದ್ರೇಶ್ವರ ಏತ ನೀರಾವರಿ ಯೋಜನೆ ಬಗ್ಗೆ ನನಗೆ ಒಂದು clarification ಬೇಕಾಗಿದೆ. ರಾಮದುರ್ಗ ಶಾಸಕರು, ಈಗ ಏನು ನಮ್ಮ ವಿಧಾನಸಭೆ ಮುಖ್ಯ ಸಚೇತಕರು ವೀರಭದ್ರೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳುವಲ್ಲಿ ನಮ್ಮ ಸರ್ಕಾರ ಬಜೆಟ್‌ನಲ್ಲಿ 400 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ ಎಂದು ದಿನನಿತ್ಯ ಹೇಳುತ್ತಾರೆ. ತಾವು 400 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದೀರಾ ಎನ್ನುವುದನ್ನು ದಯಮಾಡಿ ಸದನಕ್ಕೆ ತಿಳಿಸಬೇಕು. ಇದು

ರೆಕಾರ್ಡ್‌ಗೆ ಹೋಗುತ್ತದೆ. 400 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದರೆ ಹೌದು ಎಂದು ಹೇಳಲಿ. ಇಲ್ಲವಾದರೆ ಇಲ್ಲ ಎಂದು ಹೇಳಲಿ.

ಶ್ರೀ ಎಂ.ಬಿ. ಪಾಟೀಲ್:– ವೀರಭದ್ರೇಶ್ವರ ಏತ ನೀರಾವರಿ ಯೋಜನೆಗೆ ವಿವರವಾದಂಥ ಯೋಜನಾ ವರದಿಯನ್ನು ತಯಾರು ಮಾಡುತ್ತಿದ್ದೇವೆ.

ಅಧ್ಯಕ್ಷರು:– ಅಷ್ಟೇ. ಏನೂ ಆಗಿಲ್ಲ.

(ಗೊಂದಲ)

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ:– ಮಾನ್ಯ ಅಧ್ಯಕ್ಷರೆ, ನಾನು ಅದನ್ನೇ ಕೇಳುತ್ತಿದ್ದೇನೆ. ವೀರಭದ್ರೇಶ್ವರ ಏತ ನೀರಾವರಿ ಯೋಜನೆಗೆ 440 ಕೋಟಿ ರೂ.ಗಳನ್ನು ಇಟ್ಟಿದ್ದಾರೆಂದು ಪ್ರತಿದಿನ ಹೇಳುತ್ತಿದ್ದಾರೆ. ಸರ್ಕಾರ ಹಣವನ್ನು ನಿಗದಿಪಡಿಸಿದ್ದರೆ. . .

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರೆ, ಹಣವನ್ನು ಇಟ್ಟಿದ್ದೀರಾ?

ಶ್ರೀ ಎಂ.ಬಿ. ಪಾಟೀಲ್:– DPR ರೆಡಿಯಾಗುತ್ತಿದೆ. ಅದು ತಾಂತ್ರಿಕ ಸಮಿತಿ ಮುಂದೆ ಇದೆ. ನಾವು ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ:– ಹಣ ಇಟ್ಟಿಲ್ಲವೆ? ಜವಾಬ್ದಾರಿಯುತವಾದ ವಿಧಾನಸಭೆಯ ಮುಖ್ಯ ಸಚೇತಕರು ಹಣವನ್ನು ನಿಗದಿಪಡಿಸಿದ್ದಾರೆಂದು ಹೇಳುತ್ತಾರೆ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ವೀರಭದ್ರೇಶ್ವರ ಏತ ನೀರಾವರಿ ಯೋಜನೆ ಬಗ್ಗೆ ಹೇಳುತ್ತಿದ್ದೇನೆ. DPR ರೆಡಿ ಆಗುತ್ತಿದೆ. ಆದರೆ, Water availability ಅನ್ನು ನೋಡಿಕೊಂಡು ನಾವು ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳುತ್ತೇವೆ.

(ಗೊಂದಲ)

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ:- ಹೊರಗಡೆಯ ಹೇಳಿಕೆಗೂ, ನಮಗೂ ಸಂಬಂಧವಿಲ್ಲವೆಂದು ಹೇಳಿ. ಕಾಮಗಾರಿಗಳ ಅನುಷ್ಠಾನಕ್ಕೆ 400 ಕೋಟಿ.ರೂ.ಗಳನ್ನು ನಮ್ಮ ಸರ್ಕಾರ reserve ಮಾಡಿ ಇಟ್ಟಿದೆ. ಬಜೆಟ್‌ನಲ್ಲಿ ಘೋಷಣೆ ಮಾಡಿದೆ ಎಂದು ಪ್ರತಿ ನಿತ್ಯ ಹೇಳುತ್ತಾರೆ. ಇದ್ದರೆ ಇದೆ ಎಂದು ಹೇಳಿ. ಇಲ್ಲವೆಂದರೆ ಇಲ್ಲ ಎಂದು ಹೇಳಿ. ಹಣವನ್ನು ಮಾನ್ಯ ಸಚಿವರು ಕೊಡಲಿ. ಅಧ್ಯಕ್ಷರು ಕೊಡಲಿ. ಯಾರಾದರೂ ಹಣ ಕೊಡಲಿ. ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಮಾಮನಿಯವರೆ, ನಮಗೆ ನಮ್ಮ ಮುಖ್ಯ ಸಚೇತಕರಿಗೆ ಮುಖ್ಯಮಂತ್ರಿಯವರ ಮೇಲೆ, ಸರ್ಕಾರದ ಮೇಲೆ ಬಹಳ ಭರವಸೆ ಇದೆ, ಆ 400 ಕೋಟಿ.ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಾವು ಕೊಡುತ್ತೇವೆ. ಕೆಲಸ ಮಾಡುತ್ತೇವೆ. ಮಾನ್ಯ ಹಗರಿ ಬೊಮ್ಮನಹಳ್ಳಿ ಶಾಸಕರಾದ ಭೀಮಾ ನಾಯಕ್‌ರವರು ಮಾಲವಿ ಜಲಾಶಯದ ಬಗ್ಗೆ ಕೇಳಿದ್ದಾರೆ. 200 ಕೋಟಿ ರೂ. ಗಳಿಗೆ line estimates ಆಗಿದೆ. DPR ರೆಡಿಯಾಗಿ, ಮುಖ್ಯವಾಗಿ ಅಲ್ಲಿ ನೀರಿನ ಸಮಸ್ಯೆ ಬರುತ್ತದೆ. ಏಕೆಂದರೆ, ಅದು ತುಂಗಾಭದ್ರದಲ್ಲಿ KIT ಬೇಸ್‌ನಲ್ಲಿ ಬರುತ್ತದೆ. Tribunal matter ಆಗಿರುವುದರಿಂದ ಅದನ್ನು ನೋಡಿಕೊಂಡು ಮುಂದಿನ ಕ್ರಮವನ್ನು ನಾವು ಕೈಗೊಳ್ಳಬೇಕಾಗಿದೆ.

ಶ್ರೀ ಭೀಮಾ ನಾಯಕ್:- ನಾವು ಕೇಳುತ್ತಿರುವುದು ಕೇವಲ ಒಂದು ಟಿ.ಎಂ.ಸಿ. ನೀರು. ನಮ್ಮಲ್ಲಿ 18 ರಿಂದ 19 lift irrigation ಇದೆ. ಅಲ್ಲಿ ಯಾವುದೂ lift irrigation ನಡೆಯುತ್ತಿಲ್ಲ. . . .

ಶ್ರೀ ಎಂ.ಬಿ. ಪಾಟೀಲ್:- ಅದನ್ನು ಮಾಡುತ್ತೇವೆ. ಚನ್ನಗಿರಿ ಕ್ಷೇತ್ರದ ಶಾಸಕರು ಉಬ್ರಾಣಿ ಅಮೃತಾಪುರ ಏತ ನೀರಾವರಿ ಯೋಜನೆ ಬಗ್ಗೆ ಕೇಳಿದ್ದರು. ನಾವು 60 ಕೆರೆಗಳನ್ನು ತುಂಬಿಸಿದ್ದೇವೆ.

ಶ್ರೀ ವಡ್ನಾಳ ರಾಜಣ್ಣ:- ಜಿಂದಾಲ್ ಫ್ಯಾಕ್ಟರಿಗೆ ಎಷ್ಟು ನೀರು ಕೊಡುತ್ತಿದ್ದೀರಿ? ಅಲ್ಲಿರತಕ್ಕಂಥ ಕಾರ್ಖಾನೆಗಳಿಗೆ ಎಷ್ಟು ನೀರು ಕೊಡುತ್ತಿದ್ದೀರಿ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- Water availability ಬಗ್ಗೆ ತುಂಗಾಭದ್ರಾ ಬೋರ್ಡ್‌ನ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ಮಾನ್ಯ ಸಚಿವರೆ, ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಶ್ರೀ ಎಂ.ಬಿ. ಪಾಟೀಲ್:- ಉಬ್ರಾಣಿ ಅಮೃತಾಪುರ ಏತ ನೀರಾವರಿ ಯೋಜನೆ...

ಶ್ರಿ ವೈ.ಎಸ್. ರುದ್ರೇಶ್‌ಗೌಡ (ಬೇಲೂರು):- ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಮಾತನಾಡಿದ ಪ್ರಕಾರ ಬೇಲೂರು ತಾಲ್ಲೂಕಿನ . . .

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಅವರದ್ದನ್ನು ಮಾಡುತ್ತಿದ್ದೇವೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ:- ಏತ ನೀರಾವರಿಯದ್ದು ಇಷ್ಟು ನಿಧಾನವಾದರೆ ಹೇಗೆ? ಇಲ್ಲಿಯವರೆಗೂ ನಾವು ಎಲ್ಲಿಯೂ ನೋಡಿಲ್ಲ. ನಾವೇ ಸರ್ಕಾರ ಇದ್ದರೂ ಇದು ನಿಧಾನವಾಗುತ್ತಿದೆ. ಮಂತ್ರಿಗಳು ಈ ಬಗ್ಗೆ ಹಣವನ್ನು ಬಿಡುಗಡೆ ಮಾಡಿ, ಬೇಗನೆ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಸ್ವಲ್ಪ follow-up ಮಾಡಬೇಕು. ಇಂಜಿನಿಯರ್ಸ್‌ಗೆ ಫೋನ್ ಮಾಡುವುದರಿಂದ ಮತ್ತು executive engineersಗೆ ಫೋನ್ ಮಾಡುವುದರಿಂದ ಎಷ್ಟು ಕೆಲಸ ಆಯಿತು? ಏನಾಯಿತು ಎಂದು ಹೇಳಿ. ರೈತರಿಗೆ ನೀರು ಕೊಡದಿದ್ದರೆ ಅವರು ಹೇಗೆ ಕೆಲಸ ಮಾಡುತ್ತಾರೆ?

ಅಧ್ಯಕ್ಷರು:- ಮಾನ್ಯ ಸಚಿವರೆ, ಬೇಗ ಮುಗಿಸಿ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ:- ರೈತರೇ JCB ತಂದು ಕೆಲಸ ಮಾಡುತ್ತಿದ್ದಾರೆ. ಈಗ ಅಧಿಕಾರಿಗಳು ರೂಟ್ ತೋರಿಸುತ್ತಿದ್ದಾರೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಸದಸ್ಯರು ಏನು ಸೂಚನೆಯನ್ನು ಕೊಟ್ಟಿದ್ದಾರೆ ಅದರ ಪ್ರಕಾರ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಚನ್ನಗಿರಿ ಕ್ಷೇತ್ರದ ಶಾಸಕರು ಉಬ್ರಾಣಿ ಅಮೃತಾಪುರ ಏತ ನೀರಾವರಿ ಯೋಜನೆಯಲ್ಲಿ ಚನ್ನಗಿರಿ ತಾಲ್ಲೂಕಿನ 89 ಕೆರೆಗಳ ಪೈಕಿ 28 ಕೆರೆಗಳು ಹಾಗೂ ತರಿಕೆರೆ ತಾಲ್ಲೂಕಿನ 55 ಕೆರೆಗಳ ಪೈಕಿ 37 ಕೆರಗಳಿಗೆ ನಾವು ನೀರನ್ನು ಪೂರೈಸಿದ್ದೇವೆ. ಉಳಿದ ಕೆರೆಗಳಿಗೆ ಭೂ ಕಣಿವೆ ವಿಶಿಷ್ಟ ಘರ್ಷಣೆ ಮೇಲೆ ನೀರು ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಇದರ ನಿವಾರಣೆಗಾಗಿ ಪೈಪ್‌ಲೈನ್ ಅನ್ನು ವಿಸ್ತರಿಸಿ ನೀರು ಪೂರೈಸಲು ಕ್ರಮವನ್ನು ಕೈಗೊಳ್ಳಬೇಕಾಗಿದೆ. 905 ಲಕ್ಷ ಮೊತ್ತದ ಕಾಮಗಾರಿಗೆ ಟೆಂಡರ್ ಅನ್ನು ಆಹ್ವಾನಿಸಲು ಕ್ರಮ ಕೈಗೊಳ್ಳಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿದೆ. ಸಾಸಿವೆ ಏತ ನೀರಾವರಿಗೆ ಸರ್ವೆ ಕಾರ್ಯ ನಡೆಯುತ್ತಿದೆ. ಅದರ ಅನುಗುಣವಾಗಿ ನೀರಿನ ಹಂಚಿಕೆ ಮಾಡಿಕೊಂಡು ಕೆಲಸವನ್ನು ಪ್ರಾರಂಭಿಸುತ್ತೇವೆ.

ಶ್ರೀ ಕೆ. ಶಿವಮೂರ್ತಿ:- ಸರ್, enroute villages ಮಾಡುತ್ತೇವೆಂದು ಹೇಳಿ.

ಶ್ರೀ ಎಂ.ಬಿ. ಪಾಟೀಲ್:- ನಾನು ಪರಿಶೀಲನೆ ಮಾಡುತ್ತೇವೆ. ಕಾಚೇನಹಳ್ಳಿ 3ನೇ ಹಂತಕ್ಕೆ water allocation ವ್ಯವಸ್ಥೆ ಇರುವುದಿಲ್ಲ. ಅದರ ಬಗ್ಗೆ ನಾನು ನಿಮ್ಮ ಜೊತೆ ಮಾತನಾಡುತ್ತೇನೆ. At present ನೀರಿನ ಹಂಚಿಕೆ ಇರುವುದಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):- ಮಾನ್ಯ ಸಚಿವರೆ, 1993 ರಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಉಪ ಮುಖ್ಯಮಂತ್ರಿಗಳಾಗಿದ್ದಾಗ ಶಂಕುಸ್ಥಾಪನೆ ಆಗಿರುವುದು. ಮೊದಲನೆ ಹಂತ, ಎರಡನೆ ಹಂತ ಮುಗಿಸಿ, ಮೂರನೇ ಹಂತಕ್ಕೆ ನೀರು ಇಲ್ಲವೆಂದರೆ ಹೇಗೆ?

ಶ್ರೀ ಎಂ.ಬಿ. ಪಾಟೀಲ್:- ಅದರ ಬಗ್ಗೆ ಮೊನ್ನೆ ದಿವಸ ನಾನು ಹೇಳಿದ್ದೇನೆ. ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಸ್ವಾಮಿ, ಏನೇ ಆಗಲಿ, ಯಾವ ರೂಪದಲ್ಲಾಗಲಿ ಅಲ್ಲಿ ನೀರು ಕೊಡಬೇಕು.

ಅಧ್ಯಕ್ಷರು:– ಬೇಗನೆ ಮಾತನಾಡಿ ಮುಗಿಸಿ.

ಶ್ರೀ ಎಂ.ಬಿ. ಪಾಟೀಲ್:– ಸಿದ್ದುನ್ಯಾಮೇಗೌಡ ರವರದ್ದು ನಾನು ಈಗಾಗಲೇ ಹೇಳಿದ್ದೇನೆ. ಬಸವೇಶ್ವರ ಕೆಂಪವಾಡ ಏತ ನೀರಾವರಿ ಯೋಜನೆಯಲ್ಲಿ ಮೊದಲನೆ ಹಂತದ adhoc ಕಾಮಗಾರಿಗೆ ಅಂದಾಜು ಪಟ್ಟಿ ಅಥವಾ DTP ಸುಮಾರು ಐದುನೂರ ಎರಡು ಕೋಟಿ ರೂ.ಗಳಿಗೆ ತಯಾರಿಸಿದ್ದೇವೆ. ಆಡಳಿತಾತ್ಮಕ ಅನುಮೋದನೆಯೊಂದಿಗೆ ಟೆಂಡರ್ ಅನ್ನು ಆಹ್ವಾನಿಸಲು ಕ್ರಮ ಜರುಗಿಸಲಾಗುವುದೆಂದು ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರಿಗೆ, ಮಾನ್ಯ ಕಾಗೇಯವರಿಗೆ ಹೇಳಬಯಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅದರ ಜೊತೆಗೆ ಫಾರ್ಮ್ ಹೌಸ್ ಬಗ್ಗೆ ಹೇಳಿಬಿಡಿ.

ಅಧ್ಯಕ್ಷರು:– ಬೇಗನೆ ಮುಗಿಸಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಗುರುಪಾಟಿಲ್ ಶಿರವಾಳ್‌ರವರು ಜಲಾಶಯಕ್ಕೆ ನೀರು ಬಿಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಸಲಹಾ ಸಮಿತಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ನಿಂಗಯ್ಯನವರು, ಬಾಲಕೃಷ್ಣ ರವರು.

ಅಧ್ಯಕ್ಷರು:– ಮಾನ್ಯ ನಿಂಗಯ್ಯನವರು, ಮಾನ್ಯ ಬಾಲಕೃಷ್ಣರವರು ಇಲ್ಲ. ತಾವು ಬೇಗನೆ ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಳಲು SASನಲ್ಲಿ 2.50 ಕೋಟಿ ರೂ.ಗಳ compensation ಬಗ್ಗೆ ಕೇಳಿದ್ದಾರೆ. ಆ ಹಣವನ್ನು ಒದಗಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ಇಆರ್‌ಸಿ ಕಮಿಟಿ inspection ಮಾಡಿದ್ದಾರೆ, ಪ್ರಧಾನ ಕಾರ್ಯದರ್ಶಿಯವರು 15 ಹಳ್ಳಿಗಳ ವರದಿಯನ್ನು ಸಲ್ಲಿಸಿದ್ದಾರೆ, 6 ಹಳ್ಳಿಗಳು

ಇನ್ನು inspection ಆಗುವುದು ಬಾಕಿ ಇದೆ, ಇದರ ಬಗ್ಗೆಯೂ ಕ್ರಮ ಕೈಗೊಳ್ಳುತ್ತೇವೆ. ಮಾನ್ಯ ಸಿ.ಎನ್. ಬಾಲಕೃಷ್ಣರವರು ಹಿರಿಸಾವೆ ಮತ್ತು ಶ್ರವಣಬೆಳಗೊಳದ ಬಗ್ಗೆ ಒಂದು 53 ಕೋಟಿ ರೂಪಾಯಿಗಳ detailed project report ready ಆಗಿದೆ, ಮುಂದೆ E.R.C. (Estimate Review Committee) ನಲ್ಲೂ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಂತ್ರಿಗಳು ದಯವಿಟ್ಟು ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಬೇಕು.

ಶ್ರೀ ಎಂ.ಬಿ. ಪಾಟೀಲ್:– ERC ಮುಂದಿದೆ ಅದನ್ನು ಮಾಡುತ್ತೇವೆ, ಆಮೇಲೆ ಕಲ್ಲೆಸೋಮನಹಳ್ಳಿ ಬಗ್ಗೆ ಕೇಳಿದಿರಿ ಅಂದರೆ HLBC, ಅದಕ್ಕೂ ಕೂಡ ನಾವು water planning ನಾವು ಡಿಸೈಡ್ ಮಾಡಬೇಕಾಗಿದೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಕಲ್ಲೆಸೋಮನಹಳ್ಳಿಯದ್ದು ಗಂಭೀರವಾದ ವಿಚಾರ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಸುರೇಶ್ ಗೌಡರು, Tumkur remodeling of HLBC 0-72 kms ಬಗ್ಗೆ ಕೇಳಿದ್ದಾರೆ, ಸುಮಾರು 530 ಕೋಟಿ ರೂಪಾಯಿಗಳ ಯೋಜನೆ, ಈಗಾಗಲೇ ERCಯಿಂದ clear ಆಗಿದೆ, ನಾಳೆ remodeling ಅನ್ನು ಬೋರ್ಡಿನಲ್ಲಿ ಇಟ್ಟು ಕೆಲಸ ಪ್ರಾರಂಭ ಮಾಡುತ್ತೇವೆ. ಮಾನ್ಯ ಸದಸ್ಯರಾದ ಚಿಕ್ಕಮಾದುರವರು 22 ಹಳ್ಳಿಗಳು ಕಬಿನಿಯಲ್ಲೇನು ಮುಳುಗಡೆಯಾಗಿದ್ದಾವೆ, ಅದಕ್ಕೆ paved roads ಮಾಡಬೇಕಾಗಿದೆ, ಹಂತ ಹಂತವಾಗಿ ಕೆಲಸವನ್ನು ತೆಗದುಕೊಳ್ಳುತ್ತೇವೆ. ಆಮೇಲೆ ಯಾವಗಲ್‌ರವರದ್ದು ಹೇಳಿದ್ದೇನೆ. ಆಮೇಲೆ ಎ.ಎಸ್. ಪಾಟೀಲ್ ನಡಹಳ್ಳಿಯವರದ್ದು ಬಿಟ್ಟರೆ ತಪ್ಪಾಗುತ್ತದೆ, ಏಕೆಂದರೆ ಅವರು ನಮ್ಮ ಹಳ್ಳಿಯವರು, ಬಿಜಾಪುರ ಜಿಲ್ಲೆಗೆ water allocation ಕೇಳಿದ್ದಾರೆ, water allocationನಲ್ಲಿ ಬಿಜಾಪುರ ಜಿಲ್ಲೆಗೆ ಯಾವುದೇ ಅನ್ಯಾಯವಾಗುವುದಿಲ್ಲ, ಅವರು ಇನ್ನಿತರ ಯೋಜನೆಗಳಿವೆ ಅವೆಲ್ಲವುಗಳ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ. ಆಮೇಲೆ ಯುಕೆಪಿಗೆ ಹೆಚ್ಚಿನ

ಹಣ ಕೊಡಬೇಕೆಂದು ಹೇಳಿದ್ದಾರೆ, ಮುಖ್ಯಮಂತ್ರಿಗಳಿಗೆ ನಾವು ಬೇಡಿಕೆಯನ್ನು ಸಲ್ಲಿಸುತ್ತೇವೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– ಇಡೀ ರಾಜ್ಯದಲ್ಲಿ ಯುಕೆಪಿ 65% ಯೋಜನೆ ಇರುವುದು, ನಾನು ವಿನಂತಿ ಮಾಡುತ್ತೇನೆ, ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳಲ್ಲಿ ಯುಕೆಪಿ 3ನೇ ಹಂತಕ್ಕನೇ ನೀವು ಮೇಜರ್ ದುಡ್ಡು ಕೊಡಬೇಕಾಗಿರುವುದು, ಈಗ ₹ 3,300 ಕೋಟಿಗಳನ್ನು ಕೊಟ್ಟಿದ್ದೀರಿ, ಇದರಿಂದ ಹೇಗೆ ಆ ಭಾಗದಲ್ಲಿ ನೀರಾವರಿ ಯೋಜನೆಯನ್ನು ಮಾಡುವುದಕ್ಕೆ ಸಾಧ್ಯ. ನೀವು ಎರಡು ವಿಷಯದ ಬಗ್ಗೆ ಸ್ಪಷ್ಟವಾಗಿ ಹೇಳಲೇ ಬೇಕಾಗುತ್ತದೆ, ಏಕೆಂದರೆ, ಆ ಭಾಗದಿಂದ ಬಂದವರು ಆ ಜನರಿಗೆ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ, ನೀವೇ ಮಂತ್ರಿಗಳಿದ್ದೀರಿ, ನಮ್ಮದೇನಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಈ ವರ್ಷ ಯುಕೆಪಿಗೆ ಎಷ್ಟು ದುಡ್ಡು ಇಡುತ್ತೀರಿ?

ಶ್ರೀ ಎಂ.ಬಿ. ಪಾಟೀಲ್:– UKP Stage-III worksನಲ್ಲಿ, ಮುಳುವಾಡ Lift Irrigation Scheme ನಲ್ಲಿ, ಏನೇನು ನಡೆಯುತ್ತಿದೆ ಎಂದು ನನಗೆ ಮಾಹಿತಿಯನ್ನು ಕೇಳಿದರು, ಗೋವಿಂದ ಕಾರಜೋಳ್ ಅವರೆ ಒಂದು ನಿಮಿಷ ಕುಳಿತುಕೊಳ್ಳಿ. (ಗೊಂದಲ)

ಶ್ರೀ ವೈ.ಎಸ್. ರುದ್ರೇಶ್ ಗೌಡ:– ಮಂತ್ರಿಗಳು ಇಷ್ಟು ವಿವರವಾಗಿ ಬರೆದುಕೊಂಡು ಉತ್ತರ ಕೊಡುತ್ತಿರುವುದನ್ನು ನೀವು appreciate ಮಾಡಬೇಕು.

ಶ್ರೀ ಎಂ.ಬಿ. ಪಾಟೀಲ್:– ₹ 150 ಕೊಟಿ ರೂ. workಗಳ combined canal ಮತ್ತು lead off canal ಇವತ್ತಿನದಿವಸ ಪ್ರೋಗ್ರೆಸ್‌ನಲ್ಲಿದೆ. ಮತ್ತು ಮಲ್ಘಾಡ್ ಮೇನ್ ಕೆನಾಲ್ 0–20 ಕಿ.ಮೀ ₹ 175 ಕೋಟಿಯದ್ದು, ಬಿಜಾಪುರ ಮೇನ್ ಕೆನಾಲ್ 0–20 ಕಿ.ಮೀ. ₹ 200 ಕೋಟಿಯದ್ದು, 1-A lift ಸುಮಾರು ₹ 115 ಕೋಟಿಯದ್ದು, ಬಸವನ ಬಾಗೇವಾಡಿ Branch Canal 0–10 ಕಿ.ಮೀ ₹ 90 ಕೋಟಿಯದ್ದು ಒಟ್ಟು ₹ 750 ಕೋಟಿಯದ್ದು ನಾವು

ಟೆಂಡರ್ ಕರೆದಿದ್ದೇವೆ. ಇನ್ನು ಮುಂದುವರೆದು ಹೇಳುತ್ತೇನೆ, ಈ ಮಾರ್ಚ್ 31ರೊಳಗೆ ಮುಳವಾಡು, ಚಿಮ್ಮಲಗಿ ಎರಡೂ ಏತ ನೀರಾವರಿ ಯೋಜನೆಗಳಿಗೆ ಏನೇನು canal network ಇದೆ headworks ಇದೆ ಎಲ್ಲವನ್ನೂ ಕೂಡ ನಾವು ಟೆಂಡರ್ ಔಟ್ ಮಾಡಿ ಇವತ್ತಿನದಿವಸ workಅನ್ನು ಶುರು ಮಾಡುತ್ತೇವೆಂದು ಬಹಳ ಸಂಭ್ರಮದಿಂದ ಹೇಳುತ್ತೇನೆ. ಅದೇ ರೀತಿ ಚಿಮ್ಮಲಗಿ 92–32, 132 ಕಿ.ಮೀ ₹ 190 ಕೋಟಿಗೆ, ಆಮೇಲೆ ಕೋರವಾರ್ ಮತ್ತು ನಾಗಠಾಣ Branch canal ಗೆ 0–10 ಕಿ.ಮೀ ಗೆ ₹ 40 ಕೋಟಿ, ಒಟ್ಟು ₹ 230 ಕೋಟಿಗಳ ಟೆಂಡರ್ ಈಗಾಗಲೇ ಪ್ರೊಸೆಸ್ ನಲ್ಲಿದೆ. ಇನ್ನುಳಿದ ಕೋರವಾರ್ ಮತ್ತು ನಾಗಠಾಣ branch canal ಈಗಾಗಲೇ ಇಆರ್‌ಸಿ ನಲ್ಲಿ ಕ್ಲಿಯರ್ ಆಗಿದೆ, ₹ 25 ಕೋಟಿ, ಮತ್ತು ಚಿಮ್ಮಲಗಿ lift irrigation scheme ಕೂಡ ₹ 40 ಕೋಟಿ, 132–136 clear ಆಗಿದೆ ಒಟ್ಟು ₹ 300 ಕೋಟಿ ಕೆಲಸ ಇವತ್ತಿನ ದಿವಸ ಪ್ರಗತಿಯಲ್ಲಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಲಪ್ರಭಾ ಬಗ್ಗೆ ಹೇಳಲಿಲ್ಲ.

ಅಧ್ಯಕ್ಷರು:– ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ

ದಿನಾಂಕ: 31.03.2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ: 21ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನೂ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮೊಬಲಗನ್ನು ಮಂಜೂರು ಮಾಡುತ್ತದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶಕ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 21: ಜಲಸಂಪನ್ಮೂಲ ಇಲಾಖೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31.03.2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಇಲಾಖೆಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 133816.51 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 801105.85 ಲಕ್ಷ ರೂಪಾಯಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

7. 2014–15ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮಂಡನೆ.

ಅಭಿಯಾಚನೆ ಸಂಖ್ಯೆ: 3–ಆರ್ಥಿಕ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರ್ಥಿಕ ಇದಕ್ಕೆ ಸಂಬಂಧಿಸಿದ ವೆಚ್ಚಗಳ

ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1230421.09 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 1797.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ 4 –ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 104168.60 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 45900.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ: 18 ವಾಣಿಜ್ಯ ಮತ್ತು ಕೈಗಾರಿಕೆ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಾಣಿಜ್ಯ ಮತ್ತು ಕೈಗಾರಿಕೆ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 68500.02 ಲಕ್ಷ ರೂ.ಗಳು ಮತ್ತು

ಬಂಡವಾಳ ಖಾತೆಯಲ್ಲಿ 29020.23 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ: 5 –ಒಳಾಡಳಿತ ಮತ್ತು ಸಾರಿಗೆ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಒಳಾಡಳಿತ ಮತ್ತು ಸಾರಿಗೆ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 485635.10 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 26622.20 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

26 ಯೋಜನೆ ಸಾಂಖ್ಯಿಕ ವಿಜ್ಞಾನ ಮತ್ತು ತಂತ್ರಜ್ಞಾನ.

ಅಭಿಯಾಚನೆ ಸಂಖ್ಯೆ: 15 ಮಾಹಿತಿ ತಂತ್ರಜ್ಞಾನ

ಅಧಿಸೂಚನೆ ಕ್ರಮಾಂಕ: 26 "ಯೋಜನೆ ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ"

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ" ಯೋಜನೆ ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಇಲಾಖೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8.06 ಲಕ್ಷ

ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ –15 ಮಾಹಿತಿ ತಂತ್ರಜ್ಞಾನ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಮಾಹಿತಿ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಾಹಿತಿ ತಂತ್ರಜ್ಞಾನ ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18649.86 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 1400.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ: 23 ಕಾರ್ಮಿಕ

ಶ್ರೀ ಟಿ.ಬಿ ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಪರಮೇಶ್ವರ ನಾಯಕ್ (ಮಾನ್ಯ ಕಾರ್ಮಿಕ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಾರ್ಮಿಕ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 74187.21 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 3330.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ: 10 –ಸಮಾಜ ಕಲ್ಯಾಣ

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಮಾಜ ಕಲ್ಯಾಣ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 486984.37 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 160549.11 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ: 11–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 357194.01 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 9865.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ: 25– ಕನ್ನಡ ಮತ್ತು ಸಂಸ್ಕೃತಿ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀಮತಿ ಉಮಾಶ್ರೀ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕನ್ನಡ ಮತ್ತು ಸಂಸ್ಕೃತಿ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 28847.58 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 605,00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ: 09 ಸಹಕಾರ

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು):– ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಹಕಾರ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸಕಾರಕ್ಕೆ ರಾಜಸ್ವ ಖಾತೆಯಲ್ಲಿ 61760.07 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 4878.01 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 27, 28, 02 : **ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ಪಶುಸಂಗೋಪನೆ ಇಲಾಖೆ**

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು):- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 62645.76 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 1000.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15840.31 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶು ಸಂಗೋಪನೆ ಮತ್ತು ಮೀನುಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ

175398.07 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 22443.87 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ.

ಬೇಡಿಕೆ ಸಂಖ್ಯೆ 19 – ನಗರಾಭಿವೃದ್ಧಿ

ಶ್ರೀ ವಿನಯ್ ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 775051.28 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 124461.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ.

ಬೇಡಿಕೆ ಸಂಖ್ಯೆ 16 – ವಸತಿ

ಡಾ॥ ಎಂ.ಹೆಚ್. ಅಂಬರೀಶ್ (ಮಾನ್ಯ ವಸತಿ ಸಚಿವರು):– ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 239030.53 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 6653.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ.

ಬೇಡಿಕೆ ಸಂಖ್ಯೆ 6 – ಮೂಲಭೂತ ಸೌಕರ್ಯಗಳ ಅಭಿವೃದ್ಧಿ 259

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಸಚಿವರು) (ಶ್ರೀ ಆರ್. ರೋಷನ್ ಬೇಗ್, ಮಾನ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 852.00 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 62880.08 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ.

ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014

ಶ್ರೀ ಶಿವರಾಜ್ ಎಸ್ ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು) ಮಾನ್ಯ ಅಧ್ಯಕ್ಷರೆ, 2014ರ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ತಿದ್ದುಪಡಿಯಾದಂತೆ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನುಮಂಡಿಸಲಾಯಿತು